ಓದಿಕೆ (Reading) 1.

# ಅಧ್ಯಾಯ –2
# ರಾಜಕೀಯ ವಿಚಾರಗಳು ಮತ್ತು ಸಿದ್ಧಾಂತಗಳು

**"ತತ್ವಜ್ಞಾನಿಗಳು ಈ ವಿಶ್ವವನ್ನು ವಿವಿಧ ರೀತಿಯಲ್ಲಿ ಅರ್ಥೈಸಿದ್ದು; ಪರಿವರ್ತನೆಯೇ ಅವರ ಆಶಯವಾಗಿದೆ."**

**ಕಾರ್ಲ್ ಮಾರ್ಕ್ಸ್, 'ಥೀಸಿಸ್ ಆನ್ ಫ್ಯೂಯೆರ್‌ಬಾಕ್' (1845)**

**ಮುನ್ನೋಟ**

ಎಲ್ಲಾ ಜನರೂ ರಾಜಕೀಯ ಚಿಂತಕರು. ಜನರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವಾಗ ಅಥವಾ ತಮಗನಿಸಿದ್ದನ್ನು ಹೇಳುವಾಗ, ಅವುಗಳ ಬಗ್ಗೆ ಗೊತ್ತಿರಲಿ ಇಲ್ಲದಿರಲಿ, ರಾಜಕೀಯ ವಿಚಾರಗಳು ಮತ್ತು ಪರಿಕಲ್ಪನೆಗಳನ್ನು ಉಪಯೋಗಿಸುತ್ತಾರೆ. ದಿನನಿತ್ಯದ ಭಾಷೆಯು ಸ್ವಾತಂತ್ರ್ಯ, ನಿಷ್ಪಕ್ಷತೆ, ಸಮಾನತೆ, ನ್ಯಾಯ ಮತ್ತು ಹಕ್ಕುಗಳು ಮುಂತಾದ ಪದಗಳಿಂದ ತುಂಬಿಹೋಗಿದೆ. ಅದೇ ರೀತಿ, ಜನರು ಅವರ ಸ್ವಂತ ಅಥವಾ ಇತರರ ಅಭಿಪ್ರಾಯಗಳನ್ನು ವಿವರಿಸಲು ಸಂಪ್ರದಾಯವಾದಿ, ಉದಾರವಾದಿ, ಪ್ರತಿಗಾಮಿ, ಸಮಾಜವಾದಿ ಅಥವ ಸ್ತ್ರೀವಾದಿ ಮುಂತಾದ ಪದಗಳನ್ನು ಆಗಿಂದಾಗ್ಗೆ ಬಳಸುತ್ತಾರೆ. ಆದರೆ, ಈ ಪದಗಳು ಪರಿಚಿತ ಮತ್ತು ಸಾಮಾನ್ಯವಾಗಿ ಉಪಯೋಗಿಸುವಂತಹವಾದರೂ ನಿಖರತೆ ಅಥವ ಅರ್ಥದ ಸ್ಪಷ್ಟ ಗ್ರಹಿಕೆಯೊಂದಿಗೆ ಅವನ್ನೆಂದಿಗೂ ಬಳಸುವುದಿಲ್ಲ. 'ಸಮಾನತೆ' ಎಂದರೇನು? ಎಲ್ಲರೂ ಸಮಾನರು ಎನ್ನುವುದರ ಅರ್ಥವೇನು? ಜನರು ಹುಟ್ಟಿನಿಂದಲೇ ಸಮಾನರೆ, ಸಮಾಜವು ಅವರನ್ನು ಸಮಾನರೆಂಬಂತೆ ಪರಿಗಣಿಸಬೇಕೆ? ಜನರಿಗೆ ಸಮಾನ ಹಕ್ಕುಗಳು, ಸಮಾನ ಅವಕಾಶಗಳು, ಸಮಾನ ರಾಜಕೀಯ ಪ್ರಭಾವ, ಸಮಾನ ಕೂಲಿಗಳು ಇರಬೇಕೆ ಎಂಬ ಪ್ರಶ್ನೆಗಳನ್ನು ಇಲ್ಲಿ ಉದಾಹರಿಸಬಹುದು. ಹಾಗೆಯೇ, 'ಕಮ್ಯೂನಿಸ್ಟ್' ಅಥವಾ 'ಫ್ಯಾಸಿಸ್ಟ್'ನಂತಹ ಪದಗಳನ್ನು ಸಾಮಾನ್ಯವಾಗಿ ತಪ್ಪಾಗಿ ಬಳಸಲಾಗುತ್ತದೆ. ಒಬ್ಬನನ್ನು "ಫ್ಯಾಸಿಸ್ಟ್" ಎಂದು ಕರೆಯುವುದರ ಅರ್ಥವೇನು? ಫ್ಯಾಸಿಸ್ಟ್‌ಗಳು ಯಾವ ಮೌಲ್ಯಗಳು ಮತ್ತು ನಂಬಿಕೆಗಳನ್ನು ಹೊಂದಿರುತ್ತಾರೆ ಮತ್ತು ಅವುಗಳನ್ನು ಏಕೆ ಹೊಂದಿರುತ್ತಾರೆ? ಕಮ್ಯೂನಿಸ್ಟರ ದೃಷ್ಟಿಕೋನಗಳು ಇತರರ; ಉದಾಹರಣೆಗೆ, ಉದಾರವಾದಿಗಳು, ಸಂಪ್ರದಾಯವಾದಿಗಳು ಅಥವಾ ಸಮಾಜವಾದಿಗಳ ದೃಷ್ಟಿಕೋನಗಳಿಗಿಂತ ಹೇಗೆ ವಿಭಿನ್ನವಾಗಿರುತ್ತವೆ? ಎಂಬ ಅಂಶಗಳನ್ನು ಗಮನಿಸಬಹುದು. ಈ ಅಧ್ಯಾಯವು ರಾಜಕೀಯ ವಿಚಾರಗಳನ್ನು ಪ್ರಮುಖ ಸೈದ್ಧಾಂತಿಕ ಸಂಪ್ರದಾಯಗಳ ದೃಷ್ಟಿಕೋನದಿಂದ ಪರೀಕ್ಷಿಸುತ್ತದೆ. ಇದು ಮುಖ್ಯವಾಗಿ "ಸಾಂಪ್ರದಾಯಿಕ' ಸಿದ್ಧಾಂತಗಳ (ಉದಾರವಾದ, ಸಂಪ್ರದಾಯವಾದ ಹಾಗೂ ಸಮಾಜವಾದ) ಬಗ್ಗೆ ಗಮನ ಹರಿಸುತ್ತದೆ. ಆದಾಗ್ಯೂ ಸಾಂಪ್ರದಾಯಿಕ ಸಿದ್ಧಾಂತಗಳಿಂದ ಅಥವಾ ಅವುಗಳಿಗೆ ವಿರುದ್ಧವಾಗಿ ಹೊರಹೊಮ್ಮಿದ ಇತರೆ ಸೈದ್ಧಾಂತಿಕ ಸಂಪ್ರದಾಯಗಳನ್ನೂ ಸಹ ಇದು ಪರಿಗಣಿಸುತ್ತದೆ. ಪ್ರತಿಯೊಂದು ಸೈದ್ಧಾಂತಿಕ ಸಂಪ್ರದಾಯವೂ ಒಂದು ವಿಭಿನ್ನವಾದ ಬೌದ್ಧಿಕ ಚೌಕಟ್ಟು ಅಥವಾ ಸಿದ್ಧಾಂತದ ಸೂತ್ರವನ್ನು ಒಳಗೊಂಡಿರುತ್ತದೆ ಹೀಗಾಗಿ ಇದು ರಾಜಕೀಯ ಪ್ರಪಂಚವನ್ನು ವೀಕ್ಷಿಸಲು ನಿರ್ದಿಷ್ಟ ಮಸೂರವೊಂದನ್ನು ಒದಗಿಸುತ್ತದೆ.

ಆದಾಗ್ಯೂ, ವಿವಿಧ ಸೈದ್ಧಾಂತಿಕ ಸಂಪ್ರದಾಯವನ್ನು ಪರೀಕ್ಷಿಸುವುದಕ್ಕಿಂತ ಮುಂಚಿತವಾಗಿ ರಾಜಕೀಯ ಸಿದ್ಧಾಂತದ ಸ್ವರೂಪವನ್ನು ತಿಳಿದುಕೊಳ್ಳುವುದು ಅವಶ್ಯಕ.

**ಪ್ರಮುಖ ಚರ್ಚಾ ವಿಷಯಗಳು**

- ರಾಜಕೀಯ ಸಿದ್ಧಾಂತ ಎಂದರೇನು?
- ರಾಜಕೀಯವು ಸಿದ್ಧಾಂತದೊಂದಿಗೆ ಅಂತರ್ಗತವಾಗಿದೆಯೇ? ಸಿದ್ಧಾಂತವು ಅಂತ್ಯವಾಗಬಹುದೆ?
- ಪ್ರಮುಖ ಸೈದ್ಧಾಂತಿಕ ಸಂಪ್ರದಾಯಗಳ ಮುಖ್ಯ ವಿಚಾರಗಳು ಮತ್ತು ಸಿದ್ಧಾಂತಗಳು ಯಾವುವು?
- ಪ್ರತಿಯೊಂದು ಪ್ರಮುಖ ಸಿದ್ಧಾಂತವು ಒಳಗೊಂಡಿರುವ ಆಂತರಿಕ ಉದ್ವೇಗಗಳೇನು?
- ಸೈದ್ಧಾಂತಿಕ ಚಿಂತನೆಯು ಕಾಲಾನುಕ್ರಮದಲ್ಲಿ ಹೇಗೆ ಬದಲಾಗಿದೆ?
- ಸಿದ್ಧಾಂತಗಳ ಏಳು–ಬೀಳುಗಳನ್ನು ಹೇಗೆ ವಿವರಿಸಬಹುದು?

**ಪರಿಕಲ್ಪನೆ**

**ಸಿದ್ಧಾಂತ:** ಸಾಮಾಜಿಕ–ವೈಜ್ಞಾನಿಕ ದೃಷ್ಟಿಕೋನದಿಂದ ನೋಡಿದರೆ, ಸಿದ್ಧಾಂತ ಎಂಬುದು ಬಹುತೇಕವಾಗಿ, ಸಂಘಟನಾತ್ಮಕ ರಾಜಕೀಯ ಕ್ರಿಯೆಗೆ ಆಧಾರವನ್ನು ಒದಗಿಸುವ ವಿಚಾರಗಳ ಒಂದು ಸುಸಂಬದ್ಧ ಗುಂಪಾಗಿದೆ. ಇದು ಅಸ್ತಿತ್ವದಲ್ಲಿರುವ ಅಧಿಕಾರ ಸಂಬಂಧಗಳ ವ್ಯವಸ್ಥೆಯನ್ನು ಕಾಪಾಡುವ, ಮಾರ್ಪಡಿಸುವ ಅಥವಾ ಕಿತ್ತೆಸೆಯುವ ಉದ್ದೇಶವನ್ನು ಹೊಂದಿರುತ್ತದೆ. ಹೀಗಾಗಿ ಎಲ್ಲಾ ಸಿದ್ಧಾಂತಗಳೂ 1) ಸಾಮಾನ್ಯವಾಗಿ ಪ್ರಾಪಂಚಿಕ ದೃಷ್ಟಿಕೋನದ ರೂಪದಲ್ಲಿ ಅಸ್ತಿತ್ವದಲ್ಲಿರುವ ವ್ಯವಸ್ಥೆಯನ್ನು ವಿವರಿಸುತ್ತವೆ. 2) ಅಪೇಕ್ಷಿತ ಭವಿಷ್ಯದ ಮಾದರಿ, ಉತ್ತಮ ಸಮಾಜದ ದೂರದೃಷ್ಟಿಯನ್ನು ಒದಗಿಸುತ್ತವೆ 3) ರಾಜಕೀಯ ಬದಲಾವಣೆಯನ್ನು ಹೇಗೆ ತರಬಹುದು ಹಾಗೂ ತರತಕ್ಕದ್ದೆಂಬ ರೂಪರೇಖೆಯನ್ನು ನೀಡುತ್ತವೆ. ಆದರೆ ಸಿದ್ಧಾಂತಗಳು ಭದ್ರವಾಗಿ ಬೆಸೆದ ಚಿಂತನೆಯ ವ್ಯವಸ್ಥೆಗಳಲ್ಲ, ಬದಲಾಗಿ ಅನೇಕ ಬಿಂದುಗಳಲ್ಲಿ ಒಂದನ್ನೊಂದು ಆವರಿಸುವ ಅನಿಶ್ಚಿತ ವಿಚಾರಗಳ ಗುಂಪುಗಳು.

**ರಾಜಕೀಯ ಸಿದ್ಧಾಂತ ಎಂದರೇನು** ?

ರಾಜಕೀಯ ವಿಶ್ಲೇಷಣೆಯಲ್ಲಿ ಎದುರಾಗುವ ಅತ್ಯಂತ ವಿವಾದಾಸ್ಪದ ಪರಿಕಲ್ಪನೆಗಳಲ್ಲಿ ಸಿದ್ಧಾಂತವು ಒಂದು. ವಿಕಸಿತ ಸಾಮಾಜಿಕ ತತ್ವ ಅಥವಾ ಪ್ರಾಪಂಚಿಕ ದೃಷ್ಟಿಕೋನವನ್ನು ಸೂಚಿಸಲು ತಟಸ್ಥರೂಪದಲ್ಲಿ ಈ ಪರಿಕಲ್ಪನೆಯನ್ನು ಬಳಸುವ ಪ್ರವೃತ್ತಿಯಿದೆಯಾದರೂ ಭೂತಕಾಲದಲ್ಲಿ ಅತ್ಯಂತ ಋಣಾತ್ಮಕ ಅಥವಾ ನಿಕೃಷ್ಟಕರ ಒಳಾರ್ಥಗಳನ್ನು ಇದು ಒಳಗೊಂಡಿತ್ತು. ಕೆಲವೊಮ್ಮೆ ಸಂದಿಗ್ಧತೆಯಿಂದ ಕೂಡಿದ ಇದರ ಕಾರ್ಯಕಾಲದಲ್ಲಿ (career) ವಿರೋಧಿ ನಂಬಿಕೆಗಳು ಅಥವ

ಸಿದ್ಧಾಂತಗಳನ್ನು ಖಂಡಿಸುವ ಹಾಗೂ ಟೀಕಿಸುವ ರಾಜಕೀಯ ಅಸ್ತ್ರವಾಗಿ ಸಿದ್ಧಾಂತದ ಪರಿಕಲ್ಪನೆಯನ್ನು ಸಾಮಾನ್ಯವಾಗಿ ಬಳಸಿಕೊಳ್ಳಲಾಯಿತು.

'ಸಿದ್ಧಾಂತ' (Ideology) ಎಂಬ ಪದವನ್ನು ಫ್ರೆಂಚ್ ತತ್ವಜ್ಞಾನಿ ಡೆಸ್ಟುಟ್ ಡಿ ಟ್ರೇಸಿ (Destutt de Tracy[1754-1836]) 1796ರಲ್ಲಿ ಆವಿಷ್ಕರಿಸಿದರು. ಹೊಸ 'ವಿಚಾರಗಳ ವಿಜ್ಞಾನವೊಂದನ್ನು' (ವಿಚಾರ–ವಿಜ್ಞಾನ) ಸೂಚಿಸಲು ಇದನ್ನು ಅವರು ಉಪಯೋಗಿಸಿದರು. ಇದು ಪ್ರಜ್ಞಾಪೂರ್ವಕ ಚಿಂತನೆಗಳು ಮತ್ತು ವಿಚಾರಗಳ ಮೂಲಗಳನ್ನು ಅನಾವರಣಗೊಳಿಸುವ ಪ್ರಯತ್ನವಾಗಿತ್ತು. ಸ್ಥಾಪಿತ ವಿಜ್ಞಾನಗಳಾದ ಪ್ರಾಣಿಶಾಸ್ತ್ರ ಮತ್ತು ಜೀವಶಾಸ್ತ್ರ ಹಾಗೂ ಇತರೆ ವಿಜ್ಞಾನಗಳಿಗಿರುವ ಸ್ಥಾನಮಾನವು ಸಿದ್ಧಾಂತಕ್ಕೂ ಅಂತಿಮವಾಗಿ ಸಿಗಲಿದೆಯೆಂಬುದು ಡಿ ಟ್ರೇಸಿಯ ವಿಶ್ವಾಸವಾಗಿತ್ತು. ಆದರೆ, ಹತ್ತೊಂಭತ್ತನೇ ಶತಮಾನದಲ್ಲಿ ಕಾರ್ಲ್‌ಮಾರ್ಕ್ಸ್‌ರ ಬರವಣಿಗೆಗಳಲ್ಲಿ ಈ ಪದಕ್ಕೆ ಹೆಚ್ಚು ಸಹನೀಯವಾದ ಅರ್ಥವನ್ನು ನೀಡಲಾಯಿತು. ಮಾರ್ಕ್ಸ್‌ರ ಪ್ರಕಾರ ಸಿದ್ಧಾಂತವೆಂದರೆ 'ಆಳುವ ವರ್ಗದ' ವಿಚಾರಗಳಾಗಿದ್ದವು. ಹೀಗಾಗಿ ವಿಚಾರಗಳು ವರ್ಗ ವ್ಯವಸ್ಥೆಯನ್ನು ಎತ್ತಿಹಿಡಿಯುತ್ತವೆ ಹಾಗೂ ಶೋಷಣೆಯನ್ನು ಶಾಶ್ವತವಾಗಿಸುತ್ತವೆ. ಅವರ ಪ್ರಾರಂಭಿಕ ಕೃತಿಯಾದ 'ದಿ ಜರ್ಮನ್ ಐಡಿಯಾಲಜಿ'ಯಲ್ಲಿ ಮಾರ್ಕ್ಸ್ ಮತ್ತು ಎಂಜೆಲ್ಸ್ ಈ ಕೆಳಕಂಡಂತೆ ಬರೆಯುತ್ತಾರೆ:

"ಆಳುವ ವರ್ಗದ ವಿಚಾರಗಳು ಪ್ರತಿ ಯುಗದಲ್ಲಿಯೂ (epoch) ಆಳುವ ವಿಚಾರಗಳಾಗಿವೆ. ಅಂದರೆ, ಸಮಾಜದಲ್ಲಿ ಭೌತಿಕ ಶಕ್ತಿಯನ್ನು ಆಳುವ ವರ್ಗವು, ಅದೇ ಸಮಯದಲ್ಲಿ ಬೌದ್ಧಿಕ ಶಕ್ತಿಯನ್ನೂ ಆಳುತ್ತಿದೆ. ಬೌದ್ಧಿಕ ಉತ್ಪಾದನೆಯ ಸಾಧನಗಳನ್ನು ತನ್ನಲ್ಲಿ ಹೊಂದಿರುವ ವರ್ಗವು ಅದೇ ಸಮಯದಲ್ಲಿ ಬೌದ್ಧಿಕ ಉತ್ಪಾದನೆಯ ಸಾಧನಗಳ ಮೇಲೆ ನಿಯಂತ್ರಣವನ್ನು ಹೊಂದಿರುತ್ತದೆ" (ಮಾರ್ಕ್ಸ್ ಮತ್ತು ಎಂಜೆಲ್ಸ್ [1846] 1970:64).

ಮಾರ್ಕ್ಸಿಸ್ಟ್‌ನ ಅರ್ಥದಲ್ಲಿ ಸಿದ್ಧಾಂತದ ನಿರ್ಣಾಯಕ ಲಕ್ಷಣವೇನೆಂದರೆ ಅದು ಸುಳ್ಳು ಎಂಬುದಾಗಿದೆ: ಎಲ್ಲಾ ವರ್ಗ ಸಮಾಜಗಳಿಗೆ ಆಧಾರವಾಗಿರುವ ಪರಸ್ಪರ ವಿರೋಧದ ಅಂಶಗಳನ್ನು ಅವರಿಂದ ಮರೆಮಾಚುವ ಮೂಲಕ ಇದು ಅಧೀನ ವರ್ಗಗಳನ್ನು ಕತ್ತಲಿನಲ್ಲಿಡುತ್ತದೆ ಮತ್ತು ಅವರಲ್ಲಿ ಗೊಂದಲವನ್ನು ಹುಟ್ಟಿಸುತ್ತದೆ. ಬಂಡವಾಳಶಾಹಿಗೆ ಸಂಬಂಧಿಸಿದಂತೆ, ಆಸ್ತಿ ಹೊಂದಿರುವ ಬೂರ್ಜ್ವಾಗಳ ಸಿದ್ಧಾಂತವು ಶೋಷಿತ ದುಡಿಯುವ ವರ್ಗದವರಲ್ಲಿ ಭ್ರಮೆ ಅಥವಾ 'ಮಿಥ್ಯಾಪ್ರಜ್ಞೆ'ಯನ್ನು ಪೋಷಿಸುವ ಮೂಲಕ ಅವರು ಶೋಷಣೆಗೊಳಪಡುತ್ತಿರುವ ವಾಸ್ತವತೆಯನ್ನು ಗುರುತಿಸಲಾಗದಂತೆ ತಡೆಯುತ್ತದೆ. ಆದರೆ, ಎಲ್ಲಾ ರಾಜಕೀಯ ದೃಷ್ಟಿಕೋನಗಳೂ ಸೈದ್ಧಾಂತಿಕ ಲಕ್ಷಣವನ್ನು ಹೊಂದಿವೆಯೆಂಬ ಬಗ್ಗೆ ಮಾರ್ಕ್ಸ್‌ಗೆ ವಿಶ್ವಾಸವಿರಲಿಲ್ಲ. ವರ್ಗಶೋಷಣೆ ಹಾಗೂ ದಬ್ಬಾಳಿಕೆಯ ಪ್ರಕ್ರಿಯೆಯನ್ನು ಅನಾವರಣಗೊಳಿಸಲು ಪ್ರಯತ್ನಿಸಿದ ಆತನ ಸ್ವಂತ ಕಾರ್ಯವು ವೈಜ್ಞಾನಿಕವಾಗಿದೆಯೆಂಬುದು ಮಾರ್ಕ್ಸ್‌ನ ಅಭಿಪ್ರಾಯವಾಗಿತ್ತು. ಅವನ ಅಭಿಪ್ರಾಯದಲ್ಲಿ ವಿಜ್ಞಾನ ಮತ್ತು ಸಿದ್ಧಾಂತ ಹಾಗೂ ಸತ್ಯ ಮತ್ತು ಅಸತ್ಯಗಳ ನಡುವೆ ಸ್ಪಷ್ಟವಾದ ಭಿನ್ನತೆಯನ್ನು ಗುರುತಿಸಬಹುದು. ಈ ವಿಭಿನ್ನತೆಯು ಲೆನಿನ್ ಗ್ರಾಮ್ಸ್ಕಿ ಮುಂತಾದ ಮಾರ್ಕ್ಸಿಸ್ಟ್ ನಂತರದ ಬರಹಗಳಲ್ಲಿ ಮಂಕಾದಂತೆ ಕಂಡುಬರುತ್ತದೆ. ಇವು 'ಬೂರ್ಜ್ವಾ ಸಿದ್ಧಾಂತ'ವಷ್ಟೆ ಅಲ್ಲದೆ 'ಸಮಾಜವಾದಿ ಸಿದ್ಧಾಂತ' ಅಥವಾ 'ದುಡಿಯುವ ವರ್ಗದ ಸಿದ್ಧಾಂತ'ಗಳನ್ನು ಸೂಚಿಸುತ್ತವೆ. ಈ ಪದಗಳು ಅಸಂಗತವಾದುವೆಂದು ಮಾರ್ಕ್ಸ್ ಬಹುಶಃ ಪರಿಗಣಿಸುತ್ತಿದ್ದರು.

ಈ ಪದದ ಪರ್ಯಾಯ ಉಪಯೋಗಗಳನ್ನು ಸಹಾ ಉದಾರವಾದಿಗಳು ಮತ್ತು ಸಂಪ್ರದಾಯವಾದಿಗಳು ಅಭಿವೃದ್ಧಿಪಡಿಸಿದ್ದಾರೆ. ಯುದ್ಧಗಳ ನಡುವಿನ ಅವಧಿಯ ನಿರಂಕುಶ ಸರ್ವಾಧಿಕಾರಗಳು; ಕಾರ್ಲ್ ಪೊಪ್ಪರ್ (1902–94), ಜೆ.ಎಲ್ ಟಾಲ್ಮನ್ ಮತ್ತು ಹನ್ನಾ ಅರೆಂಟ್ ರವರಂತಹ ಲೇಖಕರು ಸಿದ್ಧಾಂತವನ್ನು, ಅನುಸರಣೆ ಮತ್ತು ಅಧೀನತೆಯನ್ನು ಖಾತರಿಪಡಿಸುವ ಸಾಮಾಜಿಕ ನಿಯಂತ್ರಣದ ಒಂದು ಸಾಧನವಾಗಿ ನೋಡಲು ಉತ್ತೇಜಿಸಿದವು. ಫ್ಯಾಸಿಸಮ್ (ದಬ್ಬಾಳಿಕೆ, ನಿರಂಕುಶ ಪ್ರಭುತ್ವ) ಮತ್ತು ಕಮ್ಯೂನಿಸಮ್‌ಗಳ (ಸಮತಾವಾದ) ಉದಾಹರಣೆಗಳ ಮೇಲೆ ತೀವ್ರವಾಗಿ ಅವಲಂಬಿತವಾದ ಈ ಶೀತಲಯುದ್ಧವೆಂಬ ಪದದ ಉದಾರ ಉಪಯೋಗವು ಸಿದ್ಧಾಂತವನ್ನು ಆಲೋಚನೆಯ 'ಮುಚ್ಚಿದ' ವ್ಯವಸ್ಥೆಯನ್ನಾಗಿ ಪರಿಗಣಿಸುತ್ತದೆ. ಇದು ಸತ್ಯದ ಏಕಸ್ವಾಮ್ಯವನ್ನು ಪ್ರತಿಪಾದಿಸುವ ಮೂಲಕ ವಿರೋಧಿ ವಿಚಾರಗಳು ಮತ್ತು ಪ್ರತಿಸ್ಪರ್ಧಿ ನಂಬಿಕೆಗಳನ್ನು ಸಹಿಸಲು ನಿರಾಕರಿಸುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ವೈಯಕ್ತಿಕ ಸ್ವಾತಂತ್ರ್ಯದ ಕುರಿತಾದ ಮೂಲಭೂತ ಬದ್ಧತೆಯನ್ನು ಆಧಾರವಾಗುಳ್ಳ ಉದಾರವಾದ ಹಾಗೂ ಉದಾರತತ್ವಗಳನ್ನು ವಿಸ್ತೃತವಾಗಿ ಅನುಮೋದಿಸುವ ಸಂಪ್ರದಾಯವಾದ ಮತ್ತು ಪ್ರಜಾಸತ್ತಾತ್ಮಕ ಸಮಾಜವಾದದ ಆಧಾರದ ಮೇಲೆ ರೂಪಿತವಾಗಿರುವ ತತ್ವಗಳು ಸ್ಪಷ್ಟವಾಗಿ ಸಿದ್ಧಾಂತಗಳಲ್ಲ. ಈ ಸಿದ್ಧಾಂತಗಳು 'ಮುಕ್ತವಾದವು'. ಅಂದರೆ, ಇವು ಮುಕ್ತ ಚರ್ಚೆ, ವಿರೋಧ ಮತ್ತು ಟೀಕೆಗಳಿಗೆ ಅವಕಾಶ ಕೊಡುವುದಷ್ಟೆ ಅಲ್ಲದೆ, ಅವನ್ನು ಒತ್ತಾಯಿಸುತ್ತವೆ.

**ಚರ್ಚೆ...**

**ಸಿದ್ಧಾಂತವಿಲ್ಲದೆ ರಾಜಕಾರಣವು ಅಸ್ತಿತ್ವದಲ್ಲಿರಲು ಸಾಧ್ಯವೆ?**

'ಸಿದ್ಧಾಂತ' ಎಂಬ ಪದವು ಸಾಂಪ್ರದಾಯಿಕವಾಗಿ ಅಪಮಾನಕರವಾದ ಪರಿಣಾಮಗಳನ್ನು ಒಳಗೊಂಡಿತ್ತು. ಇದರ ಅಂತ್ಯವು ಸನ್ನಿಹಿತವೆಂಬ (ಸಾಮಾನ್ಯವಾಗಿ ಸ್ವಾಗತಾರ್ಹವಾದ) ನಿರೀಕ್ಷೆಗಳೊಡನೆ ಇದನ್ನು ಅನೇಕ ಸಲ ವ್ಯಕ್ತಪಡಿಸಲಾಗುತ್ತದೆ. ಆದರೆ ಇದರ ವೈವಿಧ್ಯಮಯ ನಿಧನವಾರ್ತೆಗಳ ಹೊರತಾಗಿಯೂ ರಾಜಕೀಯ ಸಿದ್ಧಾಂತವು ಪಟ್ಟುಬಿಡದಂತೆ ಸಾವನ್ನು ನಿರಾಕರಿಸುತ್ತಿದೆ: ನಿರ್ದಿಷ್ಟವಾದ ಸಿದ್ಧಾಂತಗಳು ಏಳು–ಬೀಳುಗಳನ್ನು ಕಂಡರೂ, ರಾಜಕೀಯದ ಸೈದ್ಧಾಂತಿಕ ರೂಪಗಳು ಜಾಗತಿಕ ಇತಿಹಾಸದ ನಿರಂತರ ಲಕ್ಷಣದಂತೆ ಕಂಡುಬರುತ್ತವೆ. ರಾಜಕಾರಣವು ಸಿದ್ಧಾಂತದೊಂದಿಗೆ ಅಂತರ್ಗತವಾದ ಸಂಪರ್ಕವನ್ನು ಹೊಂದಿದೆಯೆ? ಅಥವಾ ಸೈದ್ಧಾಂತಿಕ ನಂಬಿಕೆಯು ಸೃಷ್ಟಿಸಿರುವ ನೆರಳಿನಿಂದ ರಾಜಕಾರಣವು ಅಂತಿಮವಾಗಿ ಹೊರಹೊಮ್ಮಲು ಸಾಧ್ಯವೆ?

**ಹೌದು**

**ಸುಳ್ಳು ಮತ್ತು ಭ್ರಮೆಗಳಿಂದ ಹೊರಬರುವುದು:** ಸಿದ್ಧಾಂತದ ಬಹುತೇಕ ಟೀಕಾಕಾರರು ಇದು ಸುಳ್ಳು ಮತ್ತು ಕೈಚಳಕಗಳಿಂದ ಕೂಡಿದೆಯೆನ್ನುತ್ತಾರೆ. ಇದರರ್ಥವೇನೆಂದರೆ, ವಿವೇಚನೆ ಮತ್ತು ವಿಮರ್ಶಾತ್ಮಕ ತಿಳಿವಳಿಕೆಯು ಸೈದ್ಧಾಂತಿಕ ರಾಜಕಾರಣದಿಂದ ನಮ್ಮನ್ನು ವಿಮೋಚನೆ–ಗೊಳಿಸಬಲ್ಲದು ಹಾಗೂ ವಿಮೋಚನೆಗೊಳಿಸುತ್ತದೆ. ಈ ದೃಷ್ಟಿಕೋನದಿಂದ ನೋಡಿದಾಗ,

ಸಿದ್ಧಾಂತಗಳು ಪರಿಣಾಮದಲ್ಲಿ ರಾಜಕೀಯ ಧರ್ಮಗಳು, ಮೌಲ್ಯಗಳ ಗುಂಪುಗಳು ಹಾಗೂ ಅವುಗಳನ್ನು ನಂಬುವವರಿಂದ ವಿಶ್ವಾಸ ಮತ್ತು ಬದ್ಧತೆಯನ್ನು ಬೇಡುವ ಸಿದ್ಧಾಂತಗಳು ಮತ್ತು ತತ್ವಗಳಾಗಿವೆ. ಈ ಸಿದ್ಧಾಂತವನ್ನು ನಂಬುವವರು ಅನಂತರ ತಾವು ಆಯ್ದುಕೊಂಡ ಪ್ರಾಪಂಚಿಕ ದೃಷ್ಟಿಕೋನದಿಂದಾಚೆಗೆ ಯೋಚಿಸಲಾಗದಂತಾಗುತ್ತಾರೆ. ಸಿದ್ಧಾಂತಗಳು ಬೌದ್ಧಿಕ ಸೆರೆಮನೆಗಳಾದರೆ ಪ್ರಪಂಚವನ್ನು 'ಅದು ಇರುವಂತೆ' ನೊಡುವುದು, ಇದಕ್ಕೆ ಪರಿಹಾರವಾಗಿದೆ. ಮೌಲ್ಯರಹಿತ ವೈಜ್ಞಾನಿಕ ವಿಧಾನವನ್ನು ಅನ್ವಯಿಸುವುದರಿಂದ ಇದನ್ನು ಸಾಧಿಸಬಹುದು. ಹೀಗಾಗಿ ರಾಜಕೀಯ ಶಾಸ್ತ್ರದ ಉದ್ದೇಶವು; ಸಿದ್ಧಾಂತದಿಂದ ರಾಜಕಾರಣವನ್ನು ಪ್ರತ್ಯೇಕಿಸುವುದಾಗಿದೆ.

**ತಾಂತ್ರಿಕ ರಾಜಕಾರಣದ ಉದಯ:** ಹೊರಹೊಮ್ಮುವ ಕೈಗಾರಿಕಾ ಸಮಾಜವನ್ನು ನಿರ್ಮಿಸುವ ನಿಟ್ಟಿನ ವ್ಯತಿರಿಕ್ತ ಪ್ರಯತ್ನಗಳ ರೂಪದಲ್ಲಿ ರಾಜಕೀಯ ಸಿದ್ಧಾಂತವು ಉದಯವಾಯಿತು. ಎಡ/ಬಲ ವಿಭಜನೆ ಹಾಗೂ ಸಮಾಜವಾದ ಮತ್ತು ಬಂಡವಾಳಶಾಹಿಗಳ ನಡುವಿನ ಹೋರಾಟವು ಯಾವಾಗಲೂ ಸೈದ್ಧಾಂತಿಕ ಚರ್ಚೆಯ ಕೇಂದ್ರಭಾಗದಲ್ಲಿರುತ್ತದೆ. ಆದರೆ, ಕಮ್ಯೂನಿಸಮ್‌ನ ಅವನತಿ ಮತ್ತು ಮಾರುಕಟ್ಟೆ ಬಂಡವಾಳಶಾಹಿಯು ವಿಶ್ವದಾದ್ಯಂತ ಬಹುತೇಕ ಸ್ವೀಕೃತವಾಗಿರುವುದು; ಆಧುನಿಕ ರಾಜಕಾರಣಕ್ಕೆ ಈ ಪೈಪೋಟಿಯನ್ನು ಅಪ್ರಸ್ತುತವಾಗಿಸಿದೆ. ಹೀಗಾಗಿ ರಾಜಕೀಯವು ಸಂಪತ್ತಿನ ಒಡೆತನ ಮತ್ತು ವಿತರಣೆಗೆ ಸಂಬಂಧಿಸಿದ ಸೈದ್ಧಾಂತಿಕ ಪ್ರಶ್ನೆಗಳ ಸುತ್ತ ಸುತ್ತುವುದಕ್ಕೆ ಬದಲಾಗಿ ಬಂಡವಾಳಶಾಹಿ ವ್ಯವಸ್ಥೆಯ ಪರಿಣಾಮಕಾರಿ ನಿರ್ವಹಣೆಗೆ ಸಂಬಂಧಿಸಿದ ಸಣ್ಣ ಪ್ರಶ್ನೆಗಳ ಸುತ್ತ ಸುತ್ತುತ್ತಿದೆ. ಸೈದ್ಧಾಂತಿಕ ರಾಜಕಾರಣವು ತಾಂತ್ರಿಕ ರಾಜಕಾರಣಕ್ಕೆ ದಾರಿಯನ್ನಿತ್ತಿದೆ.

**ಉಪಭೋಗೀಕರಣ ರಾಜಕಾರಣದ ಉದಯ:** ಚುನಾವಣಾ ಸ್ಪರ್ಧೆಯ ತರ್ಕದ ಕಾರಣದಿಂದಾಗಿ ಆಧುನಿಕ ಪ್ರಜಾಸತಾತ್ಮಕ ವ್ಯವಸ್ಥೆಗಳಲ್ಲಿ ಸಿದ್ಧಾಂತಕ್ಕೆ ಇರುವ ಸ್ಥಾನವು ಕಡಿಮೆ. ಮಾರುಕಟ್ಟೆಗಳಲ್ಲಿ ಉದ್ಯಮಗಳು ವರ್ತಿಸುವ ರೀತಿಯಲ್ಲಿ; ರಾಜಕೀಯ ಪಕ್ಷಗಳು ವರ್ತಿಸುವಂತೆ ಚುನಾವಣೆಗಳು ಒತ್ತಾಯಿಸುತ್ತವೆ. ರಾಜಕೀಯ ಪಕ್ಷಗಳು ಅತ್ಯಂತ ಹೆಚ್ಚಿನ ಸಂಖ್ಯೆಯ 'ಅನುಭೋಗಿ'ಗಳನ್ನು (ಮತದಾರರನ್ನು) ಸೆಳೆಯುವ ವಿಶ್ವಾಸದಿಂದ 'ಉತ್ಪನ್ನ'ಗಳನ್ನು (ನೀತಿಗಳನ್ನು) ರೂಪಿಸುತ್ತವೆ. ಹೀಗಾಗಿ ಈಗಾಗಲೇ ಅಸ್ತಿತ್ವದಲ್ಲಿರುವ ಸೈದ್ಧಾಂತಿಕ ದೃಷ್ಟಿಕೋನದ ಹಿನ್ನೆಲೆಯಲ್ಲಿ ಅನುಭೋಗಿಯ/ಮತದಾರನ ಬೇಡಿಕೆಗಳನ್ನು ಪುನರ್‌ರೂಪಿಸಲು ಪ್ರಯತ್ನಿಸುವುದಕ್ಕೆ ಬದಲಾಗಿ, ಅವರ ಬೇಡಿಕೆಗಳಿಗೆ ಪಕ್ಷಗಳು ಪ್ರತಿಕ್ರಿಯಿಸುತ್ತವೆ. ಪಕ್ಷಗಳು ಐತಿಹಾಸಿಕವಾಗಿ ಎಡಪಂಥೀಯ, ಬಲಪಂಥೀಯ ಅಥವಾ ಮಧ್ಯಪಂಥೀಯ ದೃಷ್ಟಿಕೋನಗಳನ್ನು ಹೊಂದಿದ್ದರೂ, ಸೈದ್ಧಾಂತಿಕವಾಗಿ 'ಹಗುರ ಮಾರ್ಗದಲ್ಲಿ ನಡೆಯುವ' ಚುನಾವಣಾ ಮೌಲ್ಯವನ್ನು ಅವು ಗುರುತಿಸುತ್ತವೆ. ಆದ್ದರಿಂದ ಚುನಾವಣಾ ರಾಜಕೀಯವು ಪಕ್ಷದ ಅಪಸಿದ್ಧಾಂತಿಕರಣದ ಪ್ರಕ್ರಿಯೆಗೆ ಕಾರಣವಾಗುತ್ತದೆ.

ಇಲ್ಲ

**ಬೌದ್ಧಿಕ ಚೌಕಟ್ಟಾಗಿ ಸಿದ್ಧಾಂತ:** ರಾಜಕೀಯ–ಸಿದ್ಧಾಂತಕ್ಕೆ ಯಾವತ್ತೂ ಉಳಿಗಾಲವಿದೆ. ಏಕೆಂದರೆ, ಇದು; ರಾಜಕಾರಣಿಗಳು, ಪಕ್ಷಗಳು ಮತ್ತು ರಾಜಕೀಯವಾಗಿ ಸಕ್ರಿಯರಾಗಿರುವ ಇತರರಿಗೆ ಅವರು

ಬದುಕುವ ಪ್ರಪಂಚದ ಬಗ್ಗೆ ಅರಿವು ಮೂಡಿಸಲು ಬೇಕಾದ ಬೌದ್ಧಿಕ ಚೌಕಟ್ಟೊಂದನ್ನು ಒದಗಿಸುತ್ತದೆ. ಸಿದ್ಧಾಂತಗಳು ವ್ಯವಸ್ಥಿತವಾದ ಭ್ರಮೆಗಳಲ್ಲ. ಅವು ರಾಜಕೀಯ ಪ್ರಪಂಚದ ವಿರೋಧಿ ದೃಷ್ಟಿಕೋನಗಳು. ಪ್ರತಿಯೊಂದು ಸಿದ್ಧಾಂತವೂ ಸಂಕೀರ್ಣ ಮತ್ತು ಬಹುಮುಖಿ ವಾಸ್ತವತೆಯ ನಿರ್ದಿಷ್ಟ ಆಯಾಮಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಹೀಗಾಗಿ, ಸರಳವಾಗಿ ಹೇಳುವುದಾದರೆ, ಸಿದ್ಧಾಂತಗಳು ಸತ್ಯವೂ ಅಲ್ಲ, ಸುಳ್ಳೂ ಅಲ್ಲ. ವಿಜ್ಞಾನ ಮತ್ತು ಸಿದ್ಧಾಂತದ ನಡುವೆ ಸ್ಪಷ್ಟವಾದ ಭಿನ್ನತೆಯಿದೆಯೆಂಬ ಅಭಿಮತವು ಬಹುಶಃ ಅತ್ಯಂತ ಅಪಾಯಕಾರಿಯಾದ ಭ್ರಮೆಯಾಗಿದೆ. ಕಾಲಾನು–ಕ್ರಮದಲ್ಲಿ ನಿರಾಕರಣಕ್ಕೆ ಒಳಗಾಗಬಹುದಾದ ಸಿದ್ಧಾಂತ ಸೂತ್ರಗಳ ಆಧಾರದ ಮೇಲೆ ವಿಜ್ಞಾನವು ಸ್ವಯಂ ನಿರ್ಮಿಸಲ್ಪಟ್ಟಿದೆ (ಕುನ್, 1962).

**ಸೈದ್ಧಾಂತಿಕ ನವೀಕರಣ:** ಸಿದ್ಧಾಂತದ ಉಳಿವು ಮತ್ತು ಅದರ ಮುಂದುವರಿಯುತ್ತಿರುವ ಪ್ರಸ್ತುತತೆಯ ರಹಸ್ಯವು ಅದರ ನಮ್ಯತೆಯೇ (flexibility) ಹೌದು. ಸೈದ್ಧಾಂತಿಕ ಸಂಪ್ರದಾಯಗಳು ಅಂತ್ಯವಿಲ್ಲದಷ್ಟು ಮರುವ್ಯಾಖ್ಯಾನ ಮತ್ತು ನವೀಕರಣದ ಪ್ರಕ್ರಿಯೆಗೊಳಗಾಗುತ್ತವೆ. ಹಳೆ ಸಿದ್ಧಾಂತಗಳು ಮಸುಕಾದಂತೆ ರಾಜಕೀಯ ಸಿದ್ಧಾಂತದ ಪ್ರಸ್ತುತತೆಯನ್ನು ಕಾಪಾಡುವ ಸಲುವಾಗಿ ಹೊಸ ಸಿದ್ಧಾಂತಗಳು ಹೊರಹೊಮ್ಮುತ್ತವೆ. ಸಿದ್ಧಾಂತಗಳ ಪ್ರಪಂಚವು ಸ್ಥಗಿತವಾಗುವುದಿಲ್ಲ; ಬದಲಾಗುತ್ತಿರುವ ಸಾಮಾಜಿಕ ಮತ್ತು ಐತಿಹಾಸಿಕ ಸನ್ನಿವೇಶಗಳಿಗನುಗುಣವಾಗಿ ಅದು ಬದಲಾಗುತ್ತದೆ. ಎಡ/ಬಲ ವಿಭಜನೆಯ ಕ್ಷೀಣಿಸುತ್ತಿರುವ ಪ್ರಸ್ತುತತೆಯು 'ಸಿದ್ಧಾಂತದ ಅಂತ್ಯ'ಕ್ಕೆ ಅಥವಾ 'ಇತಿಹಾಸದ ಅಂತ್ಯ'ಕ್ಕೆ ಕಾರಣವಾಗಿಲ್ಲ; ಅದು ಸ್ತ್ರೀವಾದ, ಹಸಿರು ರಾಜಕಾರಣ, ಬಹುಸಂಸ್ಕೃತಿವಾದ ಮತ್ತು ವಿಶ್ವಬಂಧುತ್ವವಾದ (ಕಾಸ್ಮೋಪಾಲಿಟನಿಸ಼ಮ್) ಮುಂತಾದವುಗಳಿಂದ ತುಂಬಿದ ಹೊಸ ಸೈದ್ಧಾಂತಿಕ ಹರಹುಗಳನ್ನು (spaces) ತೆರೆದಿದೆ.

**ದೂರದೃಷ್ಟಿ :** ರಾಜಕೀಯದಲ್ಲಿನ ಅರ್ಥ ಮತ್ತು ಆದರ್ಶವಾದದ ಪ್ರಮುಖ ಮೂಲವಾಗಿ, ಇತರೆ ಯಾವುದೇ ರಾಜಕೀಯ ರೂಪವು ತಲುಪಲಾಗದ ರಾಜಕೀಯದ ಆಯಾಮಗಳನ್ನು ಸಿದ್ಧಾಂತವು ಸ್ಪರ್ಶಿಸುತ್ತದೆ. ಸಿದ್ಧಾಂತವು; ಜನರು, ತಮಗಿಂತ ವಿಶಾಲವಾದುದರಲ್ಲಿ ನಂಬಿಕೆಯಿಡಲು ಕಾರಣವನ್ನು ನೀಡುತ್ತದೆ. ಜನರ ವೈಯಕ್ತಿಕ ನಿರೂಪಣೆಗಳು ವಿಶಾಲವಾದ ಐತಿಹಾಸಿಕ ನಿರೂಪಣೆಗಳ ಒಳಗೆ ನೆಲೆಗೊಂಡಿದ್ದಾಗ ಮಾತ್ರ ಅರ್ಥಗರ್ಭಿತವಾಗಿರುತ್ತವೆ. ಆದ್ದರಿಂದ ಸೈದ್ಧಾಂತಿಕೋತ್ತರ ಯುಗವು ಭರವಸೆ ಮತ್ತು ದೂರದೃಷ್ಟಿಯಿಲ್ಲದ ಯುಗವಾಗಿರುತ್ತದೆ. ರಾಜಕಾರಣಿಗಳು ಅಧಿಕಾರದ ಅನ್ವೇಷಣೆಯನ್ನು ಸೈದ್ಧಾಂತಿಕ ಉದ್ದೇಶದಲ್ಲಿ ಮುಚ್ಚಿಡದಿದ್ದಲ್ಲಿ, ಅಧಿಕಾರದಾಹಿಗಳಾಗಿ ಕಂಡುಬರುವ ಅಪಾಯವಿರುತ್ತದೆ ಮತ್ತು ಅವರ ನೀತಿ ಕಾರ್ಯಕ್ರಮಗಳು ದಿಕ್ಕಿಲ್ಲದ ಅಸಂಬದ್ಧತೆಗಳಾಗಿ ತೋರುತ್ತವೆ.

ಮೈಕೇಲ್ ಓಕ್‌ಶಾಟ್‌ರವರಂತಹ ಚಿಂತಕರು 'ಸಿದ್ಧಾಂತ' ಎಂಬ ಪದದ ವಿಶಿಷ್ಟ ಸಾಂಪ್ರದಾಯಿಕ ಬಳಕೆಯನ್ನು ಅಭಿವೃದ್ಧಿಪಡಿಸಿದ್ದಾರೆ. ಈ ಜಗತ್ತನ್ನು ಅರ್ಥಮಾಡಿಕೊಳ್ಳುವುದು ಮಾನವನ ಬುದ್ಧಿಸಾಮರ್ಥ್ಯದ ಅಳತೆಗೆ ನಿಲುಕದ್ದು ಎಂಬ ನಂಬಿಕೆಯಿಂದ ಸೃಷ್ಟಿಯಾದ ವಿಚಾರವಾದದ ಮೌಲ್ಯದ ಕುರಿತಾದ ಸಾಂಪ್ರದಾಯಿಕ ಸಿನಿಕತನವನ್ನು (scepticism) ಈ

ದೃಷ್ಟಿಕೋನವು ಬಿಂಬಿಸುತ್ತದೆ. ಓಕ್‌ಶಾಟ್‌ರವರ ಪ್ರಕಾರ, ರಾಜಕೀಯ ಚಟುವಟಿಕೆಯಲ್ಲಿ 'ಮಾನವರು ಮಿತಿಯಿಲ್ಲದ ಮತ್ತು ತಳವಿಲ್ಲದ ಸಮುದ್ರದಲ್ಲಿ ಸಾಗುತ್ತಾರೆ.' ಈ ದೃಷ್ಟಿಕೋನದಲ್ಲಿ ಸಿದ್ಧಾಂತಗಳನ್ನು, ಅಮೂರ್ತ 'ಆಲೋಚನೆಗಳ ವ್ಯವಸ್ಥೆಗಳು' ಎಂಬಂತೆ ಕಾಣಲಾಗುತ್ತದೆ. ವಾಸ್ತವವಾಗಿ ಗ್ರಹಿಸಲಾಗದ್ದನ್ನು ವಿವರಿಸಬಲ್ಲವೆಂದು ಹಕ್ಕು ಮಂಡಿಸುವ ಮೂಲಕ ರಾಜಕೀಯ ವಾಸ್ತವಿಕತೆಯನ್ನು ವಿರೂಪಗೊಳಿಸುವ ವಿಚಾರಗಳ ಗುಂಪಾಗಿ ಸಿದ್ಧಾಂತಗಳನ್ನು ನೋಡಲಾಗುತ್ತದೆ. ಈ ಕಾರಣದಿಂದಾಗಿಯೇ ಸಂಪ್ರದಾಯವಾದಿಗಳು ಒಂದು ಸಿದ್ಧಾಂತವನ್ನು ಒಪ್ಪಿಕೊಳ್ಳುವ ಕಲ್ಪನೆಯನ್ನೇ ತಿರಸ್ಕರಿಸಿದ್ದಾರೆ. ಇದಕ್ಕೆ ಬದಲಾಗಿ, ಸಂಪ್ರದಾಯವಾದವನ್ನು ಒಂದು ಪ್ರವೃತ್ತಿ ಅಥವಾ 'ಮನೋಧರ್ಮ'ವೆಂಬಂತೆ ವಿವರಿಸಲು ಅವರು ಆದ್ಯತೆ ನೀಡಿದ್ದು; ವಾಸ್ತವಿಕವಾದ, ಸಂಪ್ರದಾಯ ಮತ್ತು ಇತಿಹಾಸಗಳಲ್ಲಿ  ನಂಬಿಕೆಯನ್ನಿರಿಸಿದ್ದಾರೆ.

ಈ ಪ್ರತಿಯೊಂದು ಬಳಕೆಗಳ ನ್ಯೂನತೆಯೇನೆಂದರೆ, ಇವು ಋಣಾತ್ಮಕ ಅಥವಾ ನಿಕೃಷ್ಟವಾದವು. ಹೀಗಾಗಿ ಇವು ಈ ಪದದ (ಸಿದ್ಧಾಂತ) ಅನ್ವಯಿಸುವಿಕೆಯನ್ನು ನಿರ್ಬಂಧಿಸುತ್ತವೆ. ಅಂದರೆ, ಕೆಲವು ರಾಜಕೀಯ ಸಿದ್ಧಾಂತಗಳನ್ನು 'ಸಿದ್ಧಾಂತಗಳ' ಗುಂಪಿನಿಂದ ಹೊರಗಿರಿಸಲಾಗಿದೆ. ಉದಾಹರಣೆಗೆ ಮಾರ್ಕ್ಸ್ ತನ್ನ ವಿಚಾರಗಳು ವೈಜ್ಞಾನಿಕವಾದವು, ಸೈದ್ಧಾಂತಿಕವಾದುವಲ್ಲವೆಂದು ವಾದಿಸುತ್ತಾನೆ. ಉದಾರವಾದಿಗಳು, ಉದಾರವಾದವನ್ನು ಸಿದ್ಧಾಂತವೆಂಬುದಾಗಿ ಅವಲೋಕಿಸತಕ್ಕದ್ದು ಎಂಬುದನ್ನು ನಿರಾಕರಿಸುತ್ತಾರೆ. ಸಂಪ್ರದಾಯವಾದಿಗಳು, ಸೈದ್ಧಾಂತಿಕ ಶೈಲಿಯ ರಾಜಕೀಯಕ್ಕೆ ಬದಲಾಗಿ ವಾಸ್ತವಿಕವಾದದ ನೆಲೆಗಟ್ಟಿನಲ್ಲಿ ರಾಜಕೀಯವನ್ನು ಗ್ರಹಿಸಲು ಇಚ್ಛಿಸುತ್ತಾರೆ. ಅಲ್ಲದೆ, ಈ ಪ್ರತಿಯೊಂದು ವ್ಯಾಖ್ಯಾನವೂ ಒಂದು ನಿರ್ದಿಷ್ಟವಾದ ರಾಜಕೀಯ ಸಿದ್ಧಾಂತದ ಮೌಲ್ಯಗಳು ಮತ್ತು ದೃಷ್ಟಿಕೋನಗಳಿಂದ ತುಂಬಿಹೋಗಿದೆ. ಹೀಗಾಗಿ 'ಸಿದ್ಧಾಂತ'ವನ್ನು ಒಳಗೊಳ್ಳುವ ವ್ಯಾಖ್ಯೆಯು (ಎಲ್ಲಾ ರಾಜಕೀಯ ಸಂಪ್ರದಾಯಗಳಿಗೂ ಅನ್ವಯಿಸುವಂತಹದು) ತಟಸ್ಥವಾಗಿರತಕ್ಕದ್ದು: ಸಿದ್ಧಾಂತಗಳು 'ಒಳ್ಳೆಯವು' ಅಥವಾ 'ಕೆಟ್ಟವು', 'ಸತ್ಯ' ಅಥವಾ 'ಸುಳ್ಳು', 'ವಿಮೋಚನಕಾರಿ' ಅಥವಾ 'ದಮನಕಾರಿ' ಎಂಬ ಕಲ್ಪನೆಯನ್ನು ಈ ವ್ಯಾಖ್ಯೆಯು ತಿರಸ್ಕರಿಸತಕ್ಕದ್ದು. ಇದು ಈ ಪದದ ಆಧುನಿಕ, ಸಾಮಾಜಿಕ–ವೈಜ್ಞಾನಿಕ ಅರ್ಥದ ಸತ್ತ್ವವೂ ಹೌದು. ಈ ವ್ಯಾಖ್ಯೆಯು ಸಿದ್ಧಾಂತವನ್ನು ರಾಜಕೀಯ ಕ್ರಿಯೆಯನ್ನು ಮುನ್ನಡೆಸುವ ಅಥವಾ ಪ್ರೇರೇಪಿಸುವ ಒಂದು ಕ್ರಿಯಾತ್ಮಕವಾದ ನಂಬಿಕೆಯ ವ್ಯವಸ್ಥೆ ಹಾಗೂ ಪರಸ್ಪರ ಸಂಬಂಧವಿರುವ ವಿಚಾರಗಳ ಗುಂಪಾಗಿ ಪರಿಗಣಿಸುತ್ತದೆ.

ಆದಾಗ್ಯೂ, ಇಪ್ಪತ್ತನೇ ಶತಮಾನದ ಮಧ್ಯಭಾಗದಿಂದಲೂ, ಸಿದ್ಧಾಂತವನ್ನು ಕುರಿತ ಹೆಚ್ಚಿನ ಚರ್ಚೆಯು ಅದರ ಅವಸಾನದ ಭವಿಷ್ಯವಾಣಿಗಳು ಅಥವಾ ಕನಿಷ್ಠಪಕ್ಷ ಅದರ ಮಸುಕಾಗುತ್ತಿರುವ ಪ್ರಸ್ತುತತೆಯ ಬಗ್ಗೆಯೇ ಕೇಂದ್ರೀಕೃತವಾಗಿತ್ತು. ಇದನ್ನು 'ಸಿದ್ಧಾಂತದ ಅಂತ್ಯ'ದ ಚರ್ಚೆ ಎಂದು ಕರೆಯಲಾಯಿತು. ಇದು 1950ರ ದಶಕದಲ್ಲಿ ಪ್ರಾರಂಭವಾಯಿತು. ಎರಡನೇ ವಿಶ್ವಯುದ್ಧದ ಅಂತ್ಯದಲ್ಲಾದ ಫ್ಯಾಸಿಸಮ್‌ನ ಅವನತಿ ಹಾಗೂ ಅಭಿವೃದ್ಧಿ ಹೊಂದಿದ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿನ ಕಮ್ಯೂನಿಸಮ್‌ನ ನಿರಾಕರಣೆಗಳು ಸಿದ್ಧಾಂತದ ಪತನವನ್ನು ಪ್ರಚೋದಿಸಿದವು. ಅಮೇರಿಕಾದ ಸಮಾಜಶಾಸ್ತ್ರಜ್ಞ ಡೇನಿಯಲ್ ಬೆಲ್ (1919–2011),  'ಸಿದ್ಧಾಂತದ ಅಂತ್ಯ'ವೆಂಬ ತಮ್ಮ ಕೃತಿಯಲ್ಲಿ (The End of Ideology-1960) ರಾಜಕೀಯ ವಿಚಾರಗಳ ಸಂಗ್ರಹ ಖಾಲಿಯಾಗಿದೆಯೆಂದು ಘೋಷಿಸುತ್ತಾರೆ. ಅವರ ಅಭಿಪ್ರಾಯದಲ್ಲಿ ನೈತಿಕ ಹಾಗೂ ಸೈದ್ಧಾಂತಿಕ ಪ್ರಶ್ನೆಗಳು

ಅಪ್ರಸ್ತುತವಾಗಿಬಿಟ್ಟಿದ್ದವು, ಏಕೆಂದರೆ ಬಹುತೇಕ ಪಾಶ್ಚಿಮಾತ್ಯ ಸಮಾಜಗಳಲ್ಲಿ ಹೆಚ್ಚಿನ ಮಟ್ಟದ ಆರ್ಥಿಕ ಬೆಳವಣಿಗೆ ಹಾಗೂ ಭೌತಿಕ ವಸ್ತುಗಳ ಸಮೃದ್ಧಿಯ ಭರವಸೆಯ ಮೂಲಕ ಪಕ್ಷಗಳು ಅಧಿಕಾರಕ್ಕಾಗಿ ಪೈಪೋಟಿ ಮಾಡುತ್ತಿವೆ. ಕಮ್ಯೂನಿಸಮ್‌ನ ಅವನತಿಯ ನಂತರ ಫುಕುಯಾಮ ಮುಂತಾದ 'ಇತಿಹಾಸದ ಅಂತ್ಯ'ದ (End of History) ಸಿದ್ಧಾಂತವಾದಿಗಳು ಈ ಚರ್ಚೆಗೆ ಮರುಜೀವವನ್ನು ನೀಡಿದರು. ಅವರ ಪ್ರಕಾರ, 'ಉದಾರ ಪ್ರಜಾಪ್ರಭುತ್ವ'ವೆಂಬ ಒಂದು ಸಿದ್ಧಾಂತವು ಉಳಿದೆಲ್ಲ ಪ್ರತಿಸ್ಪರ್ಧಿಗಳ ಮೇಲೆ ಜಯವನ್ನು ಸಾಧಿಸಿದ್ದು, ಈ ಜಯವು ಅಂತಿಮವಾದುದು. ರಾಜಕೀಯ ಮತ್ತು ಸಿದ್ಧಾಂತದ ನಡುವಿನ ಸಂಬಂಧ ಹಾಗೂ ನಿರ್ದಿಷ್ಟವಾಗಿ, ಸಿದ್ಧಾಂತವಿಲ್ಲದೆ ರಾಜಕೀಯವು ಅಸ್ತಿತ್ವದಲ್ಲಿರಬಲ್ಲದೆ ಎಂಬ ಪ್ರಶ್ನೆಗಳು ಈ ಚರ್ಚೆಗಳ ಕೇಂದ್ರವಾಗಿದೆ.

---

**ವಿಚಾರವಾದ (Rationalism)**: ಮಾನವನ ತರ್ಕಬದ್ಧ ಆಲೋಚನೆಯ ಮೂಲಕ ಪ್ರಪಂಚವನ್ನು ಅರ್ಥಮಾಡಿಕೊಳ್ಳಬಹುದು ಹಾಗೂ ವಿವರಿಸಬಹುದೆಂಬ ನಂಬಿಕೆ.

---

**ವಾಸ್ತವಿಕವಾದ (Pragmatism)** ಪ್ರಾಯೋಗಿಕ ಸನ್ನಿವೇಶಗಳು ಹಾಗೂ ಗುರಿಗಳಿಗೆ ಪ್ರಾಥಮಿಕ ಮಹತ್ವವನ್ನು ನೀಡುವ ಆಚರಣೆ ಅಥವಾ ಸಿದ್ಧಾಂತ; ವಾಸ್ತವಿಕವಾದವು ಅಮೂರ್ತ ಕಲ್ಪನೆಗಳನ್ನು ನಂಬುವುದಿಲ್ಲ.

---

## ಶಾಸ್ತ್ರೀಯ ಸೈದ್ಧಾಂತಿಕ ಸಂಪ್ರದಾಯಗಳು

ಊಳಿಗಮಾನ್ಯ ವ್ಯವಸ್ಥೆಯಿಂದ ಕೈಗಾರಿಕಾ ಬಂಡವಾಳಶಾಹಿಗೆ ಪರಿವರ್ತನೆಯಾದ ಕಾರಣದಿಂದಾಗಿ ರಾಜಕೀಯ ಸಿದ್ಧಾಂತದ ಉದಯವಾಯಿತು. ಸರಳವಾಗಿ ಹೇಳುವುದಾದರೆ, ಉದಾರವಾದ, ಸಂಪ್ರದಾಯವಾದ ಮತ್ತು ಸಮಾಜವಾದವೆಂಬ ಅತ್ಯಂತ ಪ್ರಾರಂಭಿಕ ಅಥವಾ 'ಶಾಸ್ತ್ರೀಯ ಸಿದ್ಧಾಂತಗಳು', ಹೊರಹೊಮ್ಮುತ್ತಿರುವ ಕೈಗಾರಿಕಾ ಸಮಾಜವನ್ನು ರೂಪಿಸುವ ವ್ಯತಿರಿಕ್ತ ಪ್ರಯತ್ನಗಳಾಗಿ ಅಭಿವೃದ್ಧಿಯಾದವು. ಇದರರ್ಥವೇನೆಂದರೆ, ಸೈದ್ಧಾಂತಿಕ ಚರ್ಚೆಯ ಕೇಂದ್ರೀಯ ವಿಷಯ ಹಾಗೂ ಈ ಅವಧಿಯ ಮತ್ತು ಅದರಾಚೆಗಿನ ವಾದವು, ಬಂಡವಾಳಶಾಹಿ ಮತ್ತು ಸಮಾಜವಾದವೆಂಬ ಎರಡು ಪ್ರತಿಸ್ಪರ್ಧಿ ಆರ್ಥಿಕ ತತ್ವಗಳ ನಡುವಿನ ಕದನವಾಗಿತ್ತು. ಹೀಗಾಗಿ ರಾಜಕೀಯ ಸಿದ್ಧಾಂತವು ಒಂದು ಪ್ರಬಲವಾದ ಆರ್ಥಿಕ ಕೇಂದ್ರಬಿಂದುವನ್ನು ಹೊಂದಿತ್ತು. ವಿಶ್ವದ ಪ್ರಥಮ ಸಮಾಜವಾದಿ ರಾಜ್ಯವನ್ನು ಸೃಷ್ಟಿಸಿದ 1917ರ ರಷ್ಯದ ಕ್ರಾಂತಿಯು ಬಂಡವಾಳಶಾಹಿ ಹಾಗೂ ಸಮಾಜವಾದಗಳ ನಡುವಿನ ಕದನ ರೇಖೆಗಳನ್ನು ಚೂಪುಗೊಳಿಸಿತು. ವಾಸ್ತವವಾಗಿ ಕೆಲವೊಮ್ಮೆ 'ಚಿಕ್ಕ' ಇಪ್ಪತ್ತನೇ ಶತಮಾನ ಎಂದು ಕರೆಯಲ್ಪಡುವ (ಪ್ರಥಮ ವಿಶ್ವಯುದ್ಧದ ಪ್ರಾರಂಭದಿಂದ ಕಮ್ಯೂನಿಸಮ್‌ನ ಅವನತಿಯವರೆಗೆ, 1989–91) ಹಾಗೂ ಮುಖ್ಯವಾಗಿ ಶೀತಲ ಯುದ್ಧದ (1945–90) ಅವಧಿಯಲ್ಲಿ ಅಂತಾರಾಷ್ಟ್ರೀಯ ರಾಜಕಾರಣವು ಸೈದ್ಧಾಂತಿಕ ಪಥದ ನಿಟ್ಟಿನಲ್ಲಿ ಸಂರಚಿತವಾಗಿತ್ತು. ಈ ಸಂದರ್ಭದಲ್ಲಿ ಪಶ್ಚಿಮದ ಬಂಡವಾಳಶಾಹಿಯು ಪೂರ್ವದ ಕಮ್ಯೂನಿಸ್ಟ್‌ನೊಡನೆ ಮುಖಾಮುಖಿಯಾಯಿತು. 1960ರಿಂದೀಚೆಗೆ ಸೈದ್ಧಾಂತಿಕ ಚರ್ಚೆಯು ಶ್ರೀಮಂತ ಹಾಗೂ ಖಂಡಿತವಾಗಿಯೂ ಹೆಚ್ಚು ವೈವಿಧ್ಯಮಯವಾಗುತ್ತಿದೆಯಾದರೂ – 'ಹೊಸ' ಸಿದ್ಧಾಂತಗಳೆಂದು ಕರೆಯಲ್ಪಡುವ ಸ್ತ್ರೀವಾದ ಹಾಗೂ ಹಸಿರು ರಾಜಕೀಯಗಳ ಉದಯದ

ಫಲವಾಗಿಯಂತೂ ಅಲ್ಲ. ಶಾಸ್ತ್ರೀಯ ಸಿದ್ಧಾಂತಗಳು ಅವುಗಳ ಕೇಂದ್ರೀಯ ಪ್ರಾಮುಖ್ಯತೆಯನ್ನು ಉಳಿಸಿಕೊಂಡಿವೆ. ತಮ್ಮನ್ನು ತಾವು ಮರುಸೃಷ್ಟಿ ಮಾಡಿಕೊಳ್ಳುವ ಅವುಗಳ ಸಾಮರ್ಥ್ಯವೇ ಇದಕ್ಕೆ ಮುಖ್ಯ ಕಾರಣವಾಗಿದೆ. ಹೀಗೆ ಮಾಡುವ ಪ್ರಕ್ರಿಯೆಯಲ್ಲಿ ಅವುಗಳನ್ನು ವಿಭಜಿಸುವ ರೇಖೆಯು ಅನೇಕ ಸಲ ಮಸುಕಾಗಿ ಬಿಡುತ್ತದೆ.

**ಜಾನ್ ಲಾಕ್ (1632–1704)**

ಆಂಗ್ಲ ತತ್ವಶಾಸ್ತ್ರಜ್ಞ ಹಾಗೂ ರಾಜಕಾರಣಿ. 1661ರಲ್ಲಿ ಶ್ಯಾಫ್ಟ್ಸ್‌ಬರಿಯ ಪ್ರಥಮ ಅರ್ಲ್, ಅಂಥೋನಿ ಆ್ಯಶ್ಲೆ ಕೂಪರ್‌ಗೆ ಕಾರ್ಯದರ್ಶಿಯಾಗುವುಕ್ಕಿಂತ ಮುಂಚೆ ಲಾಕ್; ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ವೈದ್ಯಕೀಯ ಶಾಸ್ತ್ರವನ್ನು ಅಧ್ಯಯನ ಮಾಡಿದರು. ಆಂಗ್ಲ ಕ್ರಾಂತಿಯ ಹಿನ್ನೆಲೆಯಲ್ಲಿ ಇವರ ರಾಜಕೀಯ ದೃಷ್ಟಿಕೋನಗಳ ಉಗಮವಾಯಿತು. 1688ರ "ಗೌರವಪೂರ್ಣ ಕ್ರಾಂತಿ'ಗೆ ನೀಡುತ್ತಿರುವ ಸಮರ್ಥನೆಗಳೆಂದು ಈ ದೃಷ್ಟಿಕೋನಗಳನ್ನು ನೋಡಲಾಗುತ್ತದೆ. ಗೌರವಪೂರ್ಣ ಕ್ರಾಂತಿಯು ಬ್ರಿಟನ್ನಿನಲ್ಲಿ ನಿರಂಕುಶ ಶಾಸನವನ್ನು ಕೊನೆಗಾಣಿಸಿ ಸಾಂವಿಧಾನಿಕ ರಾಜಪ್ರಭುತ್ವವನ್ನು ಸ್ಥಾಪಿಸಿತು. ಲಾಕ್ ಉದಾರವಾದದ ಪ್ರಾರಂಭದ ಪ್ರಮುಖ ಚಿಂತಕರಾಗಿದ್ದರು. ಬದುಕು, ಸ್ವಾತಂತ್ರ್ಯ ಮತ್ತು ಆಸ್ತಿಯ ಮೇಲಿನ ಹಕ್ಕುಗಳೆಂದು ಗುರುತಿಸಲ್ಪಡುವ 'ಸ್ವಾಭಾವಿಕ' ಅಥವಾ ದೇವರು ನೀಡಿದ ಹಕ್ಕುಗಳ ಕುರಿತಂತೆ ನಿರ್ದಿಷ್ಟ ಒತ್ತನ್ನು ನೀಡಿದರು. ಪ್ರತಿನಿಧಿ ಸರ್ಕಾರ ಹಾಗೂ ಸಹಿಷ್ಣುತೆಯ ಪ್ರತಿಪಾದಕನಾಗಿದ್ದ ಲಾಕ್‌ರ ದೃಷ್ಟಿಕೋನಗಳು ಅಮೇರಿಕಾದ ಕ್ರಾಂತಿಯ ಮೇಲೆ ಗಣನೀಯ ಪರಿಣಾಮವನ್ನು ಬೀರಿದವು. ಇವರ ಅತ್ಯಂತ ಪ್ರಮುಖ ರಾಜಕೀಯ ಕೃತಿಗಳೆಂದರೆ, 'ಸಹಿಷ್ಣುತೆಗೆ ಸಂಬಂಧಿಸಿದ ಒಂದು ಪತ್ರ' (A Letter Concerning Toleration -1689) ಹಾಗೂ 'ಸರ್ಕಾರದ ಎರಡು ಪ್ರಬಂಧಗಳು' (Two Treatises of Government ([1690] 1965).

**ಉದಾರವಾದ (Liberalism)**

ರಾಜಕೀಯ ಸಿದ್ಧಾಂತಗಳ ಯಾವುದೇ ವಿವರಣೆಯು ಉದಾರವಾದದಿಂದ ಪ್ರಾರಂಭವಾಗಬೇಕು. ಏಕೆಂದರೆ, ಪರಿಣಾಮದಲ್ಲಿ ಉದಾರವಾದವು ಕೈಗಾರೀಕರಣಗೊಂಡ ಪಶ್ಚಿಮದ ಸಿದ್ಧಾಂತ. ಅನೇಕ ಪ್ರತಿಸ್ಪರ್ಧಿ ಮೌಲ್ಯಗಳು ಮತ್ತು ನಂಬಿಕೆಗಳನ್ನು ಆವರಿಸಿಕೊಳ್ಳುವ ಸಾಮರ್ಥ್ಯವಿರುವ ಉನ್ನತ ಸಿದ್ಧಾಂತವಾಗಿ (meta-ideology) ಇದನ್ನು ವ್ಯಕ್ತಪಡಿಸಲಾಗುತ್ತದೆ. ಹತ್ತೊಂಬತ್ತನೇ ಶತಮಾನದ ಪ್ರಾರಂಭದವರೆಗೂ ಇದು ಒಂದು ಅಭಿವೃದ್ಧಿ ಹೊಂದಿದ ರಾಜಕೀಯ ನಂಬಿಕೆಯಾಗಿ ಹೊರಹೊಮ್ಮದಿದ್ದರೂ, ಅದಕ್ಕೂ ಹಿಂದಿನ 300 ವರ್ಷಗಳ ಅವಧಿಯಲ್ಲಿ ವಿಶಿಷ್ಟವಾದ ಉದಾರ ಸಿದ್ಧಾಂತಗಳು ಹಾಗೂ ತತ್ವಗಳನ್ನು ಹಂತ ಹಂತವಾಗಿ ಅಭಿವೃದ್ಧಿಪಡಿಸಲಾಗಿದೆ. ಪ್ರಾರಂಭಿಕ ಉದಾರವಾದವು ಉಗಮವಾಗುತ್ತಿದ್ದ ಕೈಗಾರಿಕಾ ಮಧ್ಯಮವರ್ಗದ ಆಕಾಂಕ್ಷೆಗಳನ್ನು ನಿಶ್ಚಿತವಾಗಿಯೂ ಪ್ರತಿಬಿಂಬಿಸುತ್ತಿದ್ದು, ಆಗಿನಿಂದಲೂ ಉದಾರವಾದ ಮತ್ತು ಬಂಡವಾಳಶಾಹಿಗಳು ನಿಕಟ ಸಂಬಂಧವನ್ನು (ಅಂತರ್ಗತ ಸಂಬಂಧವಿದೆಯೆಂದು ಕೆಲವರು ವಾದಿಸುತ್ತಾರೆ) ಹೊಂದಿವೆ. ಅದರ ಅತ್ಯಂತ ಪ್ರಾರಂಭಿಕ ರೂಪದಲ್ಲಿ ಉದಾರವಾದವು ಒಂದು ರಾಜಕೀಯ ಸಿದ್ಧಾಂತವಾಗಿತ್ತು. ಜಾನ್ ಲಾಕ್‌ರಂತಹ ಚಿಂತಕರ ವಿಚಾರಗಳಲ್ಲಿ ವ್ಯಕ್ತವಾದಂತೆ ಇದು ನಿರಂಕುಶ ಪ್ರಭುತ್ವ ಹಾಗೂ ಊಳಿಗಮಾನ್ಯ ಹಕ್ಕನ್ನು ಖಂಡಿಸಿ ಸಾಂವಿಧಾನಿಕ ಹಾಗೂ ನಂತರದಲ್ಲಿ ಪ್ರತಿನಿಧಿ ಸರ್ಕಾರದ ಪರವಾಗಿ ವಾದಿಸಿತು. ಹತ್ತೊಂಬತ್ತನೇ ಶತಮಾನದ ಪ್ರಾರಂಭದ ಹೊತ್ತಿಗೆ ಹಸ್ತಕ್ಷೇಪರಹಿತತೆಯ (laissez-faire) ಸದ್ಗುಣಗಳನ್ನು ಶ್ಲಾಘಿಸುವ ಒಂದು ವಿಶಿಷ್ಟ ಉದಾರ ಆರ್ಥಿಕ ನಂಬಿಕೆಯು

ಅಭಿವೃದ್ಧಿಗೊಂಡು, ಎಲ್ಲಾ ರೂಪದ ಸರ್ಕಾರದ ಹಸ್ತಕ್ಷೇಪವನ್ನು ಖಂಡಿಸಿತು. ಇದು ಶಾಸ್ತ್ರೀಯ ಅಥವಾ ಹತ್ತೊಂಭತ್ತನೇ ಶತಮಾನದ ಉದಾರವಾದದ ಕೇಂದ್ರ ಬಿಂದುವಾಯಿತು. ಆದರೆ, ಹತ್ತೊಂಭತ್ತನೇ ಶತಮಾನದ ಕೊನೆಯ ಭಾಗದ ನಂತರ ಯೋಗಕ್ಷೇಮ ಸುಧಾರಣೆ ಹಾಗೂ ಆರ್ಥಿಕ ಹಸ್ತಕ್ಷೇಪದ ಪರವಾದ ಸಾಮಾಜಿಕ ಉದಾರವಾದವು ಹೊರಹೊಮ್ಮಿತು. ಈ ರೀತಿಯ ಆದ್ಯತೆಯು ಆಧುನಿಕ ಅಥವಾ ಇಪ್ಪತ್ತನೇ ಶತಮಾನದ ಉದಾರವಾದದ ವಿಶಿಷ್ಟ ವಿಷಯವೆನಿಸಿತು.

---

**ಉನ್ನತ ಸಿದ್ಧಾಂತ (Meta-Ideology):** ಸೈದ್ಧಾಂತಿಕ ಚರ್ಚೆಗಳು ನಡೆಯಬಹುದಾದ ಆಧಾರಗಳನ್ನು ರೂಪಿಸುವ ಉನ್ನತ ಅಥವಾ ಎರಡನೇ ವರ್ಗದ ಸಿದ್ಧಾಂತ.

---

**ಉದಾರವಾದ: ಪ್ರಮುಖ ವಿಚಾರಗಳು**

**ವ್ಯಕ್ತಿವಾದ (Individualism):** ವ್ಯಕ್ತಿವಾದವು ಉದಾರ ಸಿದ್ಧಾಂತದ ಮೂಲತತ್ವವಾಗಿದೆ. ಯಾವುದೇ ಸಾಮಾಜಿಕ ಗುಂಪು ಅಥವಾ ಸಾಮೂಹಿಕ ಸಂಸ್ಥೆಗೆ ಬದಲಾಗಿ ಮಾನವ ವ್ಯಕ್ತಿಗೆ ಅತ್ಯಂತ ಹೆಚ್ಚಿನ ಪ್ರಾಮುಖ್ಯವನ್ನು ನೀಡುವ ನಂಬಿಕೆಯನ್ನು ಇದು ಪ್ರತಿಬಿಂಬಿಸುತ್ತದೆ. ಮನುಷ್ಯರನ್ನು ಮೊದಲಿಗೆ ಹಾಗೂ ಪ್ರಮುಖವಾಗಿ ವ್ಯಕ್ತಿಗಳಾಗಿ ನೋಡಲಾಗುತ್ತದೆ. ಮಾನವರು ಸಮಾನ ನೈತಿಕ ಯೋಗ್ಯತೆಯವರು ಹಾಗೂ ಅವರು ಪ್ರತ್ಯೇಕವಾದ ಮತ್ತು ವಿಶಿಷ್ಟವಾದ ಅನನ್ಯತೆಯನ್ನು ಹೊಂದಿದ್ದಾರೆಂಬ ಎರಡೂ ಅರ್ಥವನ್ನು ಇದು ನೀಡುತ್ತದೆ. ಆದ್ದರಿಂದ ಉದಾರವಾದದ ಗುರಿಯು; ವ್ಯಕ್ತಿಗಳು ಏಳಿಗೆ ಹಾಗೂ ಅಭಿವೃದ್ಧಿಗೊಳ್ಳಬಹುದಾದ ಸಮಾಜವನ್ನು ನಿರ್ಮಿಸುವುದಾಗಿದೆ. ಈ ಸಮಾಜದಲ್ಲಿ ಆತನ/ಆಕೆಯ ಸಾಮರ್ಥ್ಯಕ್ಕನುಗುಣವಾಗಿ ಆತನಿಗೆ/ಆಕೆಗೆ 'ಉತ್ತಮವಾದುದೆಂದು' ತೋರುವುದನ್ನು ಅನುಸರಿಸಬಹುದಾಗಿದೆ. ಇದು ಉದಾರವಾದವು ನೈತಿಕವಾಗಿ ತಟಸ್ಥವಾಗಿರುತ್ತದೆಂಬ ದೃಷ್ಟಿಕೋನದ ಪರವಾಗಿದೆ. ಅಂದರೆ, ಉದಾರವಾದವು ವ್ಯಕ್ತಿಗಳು ತಮ್ಮದೇ ಆದ ನೈತಿಕ ನಿರ್ಧಾರಗಳನ್ನು ಕೈಗೊಳ್ಳಲು ಅನುವು ಮಾಡಿಕೊಡುವ ನಿಯಮಗಳನ್ನು ಹಾಕಿಕೊಡುತ್ತದೆ.

**ಸ್ವಾತಂತ್ರ್ಯ (Freedom)**: ವೈಯಕ್ತಿಕ ಸ್ವಾತಂತ್ರ್ಯವು ಉದಾರವಾದದ ಮೂಲಭೂತ ಮೌಲ್ಯವಾಗಿದೆ. ಸಮಾನತೆ, ನ್ಯಾಯ ಅಥವಾ ಅಧಿಕಾರಕ್ಕಿಂತ ಇದಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಲಾಗಿದೆ. ವ್ಯಕ್ತಿಯ ಮೇಲಿನ ನಂಬಿಕೆಯಿಂದ ಹಾಗೂ ಪ್ರತಿಯೊಬ್ಬ ವ್ಯಕ್ತಿಯೂ ಆತನ ಅಥವಾ ಆಕೆಯ ಇಚ್ಛೆಯಂತೆ ಅಥವಾ ಆತನ/ಆಕೆಯ ಆಯ್ಕೆಯ ಪ್ರಕಾರ ನಡೆದುಕೊಳ್ಳುವ ಸಾಮರ್ಥ್ಯವನ್ನು ಹೊಂದಿರುತ್ತಾನೆ/ಹೊಂದಿರುತ್ತಾಳೆಂಬುದನ್ನು ಖಾತರಿಪಡಿಸುವ ಅಪೇಕ್ಷೆಯಿಂದ ಸ್ವಾತಂತ್ರ್ಯವು ಸ್ವಾಭಾವಿಕವಾಗಿ ಉದಯಿಸುತ್ತದೆ. ಆದಾಗ್ಯೂ ಉದಾರವಾದಿಗಳು 'ಸ್ವಾತಂತ್ರ'ವು ಕಾನೂನಿನಡಿಯಲ್ಲಿ ಎಂದು ಪ್ರತಿಪಾದಿಸುತ್ತಾರೆ; ಒಬ್ಬ ವ್ಯಕ್ತಿಯ ಸ್ವಾತಂತ್ರ್ಯವು ಇತರರ ಸ್ವಾತಂತ್ರ್ಯಕ್ಕಿರುವ ಅಪಾಯವೆಂಬುದನ್ನು ಅವರು ಗುರುತಿಸುತ್ತಾರೆ. ಸ್ವಾತಂತ್ರ್ಯವು ಪರವಾನಗಿಯಾಗಿಬಿಡಬಹುದು. ಆದ್ದರಿಂದ, ವ್ಯಕ್ತಿಗಳು ಸಾಧ್ಯವಿರುವಷ್ಟು ಗರಿಷ್ಠ ಸ್ವಾತಂತ್ರ್ಯವನ್ನು ಅನುಭವಿಸಬೇಕು. ಆದರೆ ಇದು

ಎಲ್ಲರಿಗೂ ಸಿಗುವಂತಹ ಸ್ವಾತಂತ್ರ್ಯಕ್ಕೆ ಸದೃಶವಾಗಿರಬೇಕೆಂಬುದನ್ನು ಉದಾರವಾದಿಗಳು ಪ್ರತಿಪಾದಿಸುತ್ತಾರೆ.

**ತರ್ಕ (Reason):** ಈ ವಿಶ್ವವು ಒಂದು ವೈಚಾರಿಕ ಸಂರಚನೆಯನ್ನು ಹೊಂದಿದ್ದು, ಮಾನವ ತರ್ಕ ಮತ್ತು ವಿಮರ್ಶಾತ್ಮಕ ವಿಚಾರಣೆಯ ಮೂಲಕ ಇದನ್ನು ಅನಾವರಣಗೊಳಿಸಬಹುದು. ವ್ಯಕ್ತಿಗಳು ತಮ್ಮ ಪರವಾಗಿ ತಾವೇ ವಿವೇಕಯುತವಾದ ನಿರ್ಧಾರಗಳನ್ನು ತೆಗೆದುಕೊಳ್ಳಬಲ್ಲರು ಹಾಗೂ ಬಹುತೇಕ ಸನ್ನಿವೇಶಗಳಲ್ಲಿ ಅವರಿಗೆ ಯಾವುದು ಅತ್ಯಂತ ಹಿತಕರವೆಂಬುದನ್ನು ನಿರ್ಧರಿಸಲು ಅವರೇ ಅತ್ಯುತ್ತಮವಾದವರೆಂಬ ವಿಶ್ವಾಸವನ್ನು ಉದಾರವಾದಿಗಳು ಹೊಂದಿದ್ದಾರೆ. ಇದು, ಪ್ರಗತಿಯ ಪ್ರಕ್ರಿಯೆಯಲ್ಲಿ ವಿಶ್ವಾಸವನ್ನಿರಿಸಲು ಉದಾರವಾದಿಗಳನ್ನು ಪ್ರೋತ್ಸಾಹಿಸುತ್ತದೆಯಲ್ಲದೆ, ಮನುಷ್ಯರು ಅವರ ನಡುವಿನ ವ್ಯತ್ಯಾಸಗಳನ್ನು ರಕ್ತಪಾತ ಮತ್ತು ಯುದ್ಧಗಳಿಗೆ ಬದಲಾಗಿ ಚರ್ಚೆ ಮತ್ತು ವಾದಗಳ ಮೂಲಕ ಪರಿಹರಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದ್ದಾರೆಂದು ನಂಬುವಂತೆ ಉದಾರವಾದಿಗಳನ್ನು ಉತ್ತೇಜಿಸುತ್ತದೆ.

**ಸಮಾನತೆ (Equality)**: ವ್ಯಕ್ತಿವಾದದ ಅರ್ಥ, ಮೂಲಭೂತ ಸಮಾನತೆಯಲ್ಲಿ ನಂಬಿಕೆ: ಅಂದರೆ, ಕನಿಷ್ಠ ಪಕ್ಷ ಅವರ ನೈತಿಕ ಯೋಗ್ಯತೆಗೆ ಸಂಬಂಧಿಸಿದಂತೆ, ವ್ಯಕ್ತಿಗಳು 'ಹುಟ್ಟಿನಿಂದ ಸಮಾನರು' ಎಂಬ ನಂಬಿಕೆ. ಸಮಾನ ಹಕ್ಕುಗಳು ಮತ್ತು ಅರ್ಹತೆಗಳನ್ನು; ಮುಖ್ಯವಾಗಿ ಕಾನೂನು ಸಮಾನತೆ (ಕಾನೂನಿನ ಮುಂದೆ ಎಲ್ಲರೂ ಸಮಾನರು) ಹಾಗೂ ರಾಜಕೀಯ ಸಮಾನತೆಯ (ಒಬ್ಬ ವ್ಯಕ್ತಿ ಒಂದು ಮತ; ಒಂದು ಮತ, ಒಂದು ಮೌಲ್ಯ) ರೂಪದಲ್ಲಿ ನೀಡುವ ಉದಾರ ಬದ್ಧತೆಯಲ್ಲಿ ಇದು ಕಂಡುಬರುತ್ತದೆ. ಆದರೆ ವ್ಯಕ್ತಿಗಳು ಸಮಾನ ಮಟ್ಟದ ಪ್ರತಿಭೆ ಅಥವಾ ಕೆಲಸ ಮಾಡುವ ಇಚ್ಛೆಯನ್ನು ಹೊಂದಿರುವುದಿಲ್ಲವಾದ್ದರಿಂದ ಉದಾರವಾದಿಗಳು, ಸಾಮಾಜಿಕ ಸಮಾನತೆ ಅಥವಾ ಫಲಿತಾಂಶದ ಸಮಾನತೆಯನ್ನು ಪ್ರತಿಪಾದಿಸುವುದಿಲ್ಲ. ಇದಕ್ಕೆ ಬದಲಾಗಿ, ಎಲ್ಲಾ ವ್ಯಕ್ತಿಗಳು ಅವರ ಅಸಮಾನ ಸಾಮರ್ಥ್ಯವನ್ನು ಬಳಸಿಕೊಳ್ಳುವ ಅವಕಾಶದ ಸಮಾನತೆಯನ್ನು ಉದಾರವಾದಿಗಳು ಅನುಮೋದಿಸುತ್ತಾರೆ. ಪ್ರತಿಭೆ ಮತ್ತು ಪರಿಶ್ರಮಗಳನ್ನು ಬಿಂಬಿಸುವ ಅರ್ಹತಾಶಾಹಿಯ ತತ್ವವನ್ನು ಉದಾರವಾದಿಗಳು ಬೆಂಬಲಿಸುತ್ತಾರೆ.

**ಸಹಿಷ್ಣುತೆ (Toleration)**: ಸಹಿಷ್ಣುತೆಯು (ಅಂದರೆ, ಸಹನೆ: ತಮ್ಮ ಅಸಮ್ಮತಿಯಿದ್ದಾಗ್ಯೂ, ಇತರರು ಆ ನಿಟ್ಟಿನಲ್ಲಿ ಯೋಚಿಸಲು, ಮಾತನಾಡಲು ಮತ್ತು ನಿರಾಕರಿಸಲು ಅನುವು ಮಾಡಿಕೊಡುವ ಜನರ ಇಚ್ಛೆ) ವೈಯಕ್ತಿಕ ಸ್ವಾತಂತ್ರ್ಯದ ಖಾತರಿ ಹಾಗೂ ಸಾಮಾಜಿಕ ಸಮೃದ್ಧತೆಯ ಮಾರ್ಗವೆಂದು ಉದಾರವಾದಿಗಳು ನಂಬುತ್ತಾರೆ. ನೈತಿಕ, ಸಾಂಸ್ಕೃತಿಕ ಮತ್ತು ರಾಜಕೀಯ ವಿವಿಧತೆಗಳ ಸ್ವರೂಪವನ್ನೊಳಗೊಂಡ ಬಹುತ್ವವು; ಸಕಾರಾತ್ಮಕವಾಗಿ ಸಮರ್ಪಕವೆಂಬುದು ಅವರ ನಂಬಿಕೆ: ಎಲ್ಲಾ ನಂಬಿಕೆಗಳು ವಿಚಾರಗಳ ಮುಕ್ತ ಮಾರುಕಟ್ಟೆಯಲ್ಲಿ ಪರೀಕ್ಷಿಸಲ್ಪಡುವುದನ್ನು ಖಾತರಿಪಡಿಸುವ ಮೂಲಕ ಬಹುತ್ವವು ಚರ್ಚೆ ಮತ್ತು ಬೌದ್ಧಿಕ ಪ್ರಗತಿಯನ್ನು ಪ್ರೋತ್ಸಾಹಿಸುತ್ತದೆ. ಅಲ್ಲದೆ ಪ್ರತಿಸ್ಪರ್ಧಿ ವಿಚಾರಗಳು ಹಾಗೂ ಆಸಕ್ತಿಗಳ ನಡುವೆ ಸ್ವಾಭಾವಿಕ ಸಾಮರಸ್ಯ ಅಥವಾ ಸಮತೋಲನವಿದೆಯೆಂದು

ನಂಬುವ ಪ್ರವೃತ್ತಿ ಉದಾರವಾದಿಗಳದು. ರಾಜಿಯಾಗಲಾರದ ಯಾವುದೇ ಸಂಘರ್ಷವಿರುವುದಿಲ್ಲವೆಂಬುದು ಉದಾರವಾದಿಗಳ ನಿಲುವಾಗಿದೆ.

**ಸಮ್ಮತಿ (Consent):** ಉದಾರವಾದದ ದೃಷ್ಟಿಕೋನದಲ್ಲಿ ಅಧಿಕಾರ ಮತ್ತು ಸಾಮಾಜಿಕ ಸಂಬಂಧಗಳು ಸಮ್ಮತಿ ಅಥವಾ ಇಚ್ಛಿತ ಒಪ್ಪಂದದ ಆಧಾರಿತವಾಗಿರತಕ್ಕದ್ದು. ಹೀಗಾಗಿ, ಸರ್ಕಾರವು 'ಆಳಿಸಿಕೊಳ್ಳುವವರ ಸಮ್ಮತಿ'ಯ ಮೇಲೆ ರೂಪಿತವಾಗಿರಬೇಕು. ಪ್ರತಿನಿಧಿತ್ವ ಹಾಗೂ ಪ್ರಜಾಪ್ರಭುತ್ವವನ್ನು ಅನುಮೋದಿಸಲು ಉದಾರವಾದಿಗಳನ್ನು ಉತ್ತೇಜಿಸುವ ತತ್ವ ಇದಾಗಿದೆ. ಅದರಲ್ಲೂ ಮುಖ್ಯವಾಗಿ ಉದಾರ ಪ್ರಜಾಪ್ರಭುತ್ವದ ರೂಪದಲ್ಲಿ ಇದನ್ನು ಅವರು ನೋಡಲಿಚ್ಛಿಸುತ್ತಾರೆ. ಅದೇ ರೀತಿ, ಅವರವರ ಸ್ವಯಂ-ಆಸಕ್ತಿಯನ್ನು ಅನುಸರಿಸುವ ಉದ್ದೇಶದೊಂದಿಗೆ ವ್ಯಕ್ತಿಗಳು ಪರಸ್ಪರರ ಜೊತೆ ಒಪ್ಪಂದ ಮಾಡಿಕೊಂಡು ಸಾಮಾಜಿಕ ಸಂಸ್ಥೆಗಳು ಮತ್ತು ಗುಂಪುಗಳನ್ನು ರೂಪಿಸಿಕೊಳ್ಳುತ್ತಾರೆ. ಈ ಅರ್ಥದಲ್ಲಿ ನೋಡುವುದಾದರೆ, ಅಧಿಕಾರವು 'ತಳಹಂತದಿಂದ' ಉದ್ಭವವಾಗುತ್ತದೆ ಮತ್ತು ಇದು ಯಾವಾಗಲೂ ನ್ಯಾಯಸಮ್ಮತವಾದ ತಳಹದಿಯನ್ನು ಹೊಂದಿರುತ್ತದೆ.

**ಸಾಂವಿಧಾನಿಕತೆ (Constitutionalism):** ಸಮಾಜದಲ್ಲಿ ಸುವ್ಯವಸ್ಥೆ ಹಾಗೂ ಸ್ಥಿರತೆಯನ್ನು ಖಾತರಿಪಡಿಸಲು ಸರ್ಕಾರವು ಅತ್ಯವಶ್ಯಕವೆಂಬುದು ಉದಾರವಾದಿಗಳ ಅನಿಸಿಕೆಯಾದರೂ, ಸರ್ಕಾರವು ವ್ಯಕ್ತಿಯ ವಿರುದ್ಧದ ನಿರಂಕುಶಾಧಿಕಾರಿಯಾಗಿಬಿಡಬಹುದಾದ ಅಪಾಯದ ಬಗ್ಗೆ ಅವರಿಗೆ ನಿರಂತರ ಅರಿವಿದೆ ('ಅಧಿಕಾರವು ಭ್ರಷ್ಟತೆಯತ್ತ ಪ್ರವೃತ್ತಗೊಳಿಸುತ್ತದೆ'–ಲಾರ್ಡ್ ಆ್ಯಕ್ಟನ್). ಹೀಗಾಗಿ ಅವರು ಸೀಮಿತ ಸರ್ಕಾರದಲ್ಲಿ ವಿಶ್ವಾಸವಿಡುತ್ತಾರೆ. ಸರ್ಕಾರದ ಅಧಿಕಾರವನ್ನು ಮೊಟಕುಗೊಳಿಸುವ ಮೂಲಕ ಈ ಗುರಿಯನ್ನು ಸಾಧಿಸಬಹುದು. ಸರ್ಕಾರದ ವಿವಿಧ ಸಂಸ್ಥೆಗಳ ನಡುವೆ ನಿಯಂತ್ರಣಗಳು ಮತ್ತು ಸಮತೋಲನಗಳ ಸೃಷ್ಟಿ, ರಾಜ್ಯ ಮತ್ತು ವ್ಯಕ್ತಿಯ ನಡುವಿನ ಸಂಬಂಧವನ್ನು ವ್ಯಾಖ್ಯಾನಿಸುವ ಹಕ್ಕುಗಳ ಮಸೂದೆಯನ್ನೊಳಗೊಂಡ ಕ್ರೋಢೀಕೃತ ಅಥವಾ ಲಿಖಿತ ಸಂವಿಧಾನದ ಅಳವಡಿಕೆಯು ಸರ್ಕಾರದ ಅಧಿಕಾರವನ್ನು ಸೀಮಿತಗೊಳಿಸುತ್ತದೆ.

**ಸಾಂಪ್ರದಾಯಿಕ ಉದಾರವಾದ (Classical Liberalism)**

ಸಾಂಪ್ರದಾಯಿಕ ಉದಾರವಾದದ ಕೇಂದ್ರೀಯ ವಿಷಯವು ವ್ಯಕ್ತಿವಾದದ ಉತ್ಕಟ ರೂಪದ ಬದ್ಧತೆಯಾಗಿದೆ. ಮನುಷ್ಯರನ್ನು ಆತ್ಮಪ್ರಶಂಸೆ ಮಾಡಿಕೊಳ್ಳುವವರು, ಸ್ವಾರ್ಥಿಗಳು ಹಾಗೂ ಹೆಚ್ಚಾಗಿ ಸ್ವಾವಲಂಬಿ ಜೀವಿಗಳಾಗಿ ನೋಡಲಾಗುತ್ತದೆ. ಸಿ. ಬಿ. ಮ್ಯಾಕ್‌ಫರ್ಸನ್‌ರವರ ಪ್ರಕಾರ (1962) 'ಒಡೆತನದ ವ್ಯಕ್ತಿವಾದ'ದಲ್ಲಿ (possessive individualism) ಮನುಷ್ಯರು ಅವರ ವ್ಯಕ್ತಿತ್ವ ಮತ್ತು ಸಾಮರ್ಥ್ಯಗಳಿಗೆ ತಾವೇ ಒಡೆಯರಾಗಿದ್ದು, ಅವರು ಸಮಾಜಕ್ಕಾಗಲೀ ಇತರೆ ವ್ಯಕ್ತಿಗಳಿಗಾಗಲಿ ಏನನ್ನೂ ನೀಡುವುದಿಲ್ಲ. ಸಮಾಜದ ಈ ವ್ಯಕ್ತಿವಾದಿ (atomist) ದೃಷ್ಟಿಕೋನವು 'ನಕಾರಾತ್ಮಕ' ಸ್ವಾತಂತ್ರ್ಯದಲ್ಲಿ ನಂಬಿಕೆಯನ್ನು ಬಲಪಡಿಸುತ್ತದೆ. ಇದರರ್ಥ, ಹಸ್ತಕ್ಷೇಪರಹಿತತೆ ಅಥವಾ ವ್ಯಕ್ತಿಯ

ಮೇಲೆ ಬಾಹ್ಯ ನಿರ್ಬಂಧಗಳು ಇಲ್ಲದಿರುವುದಾಗಿದೆ. ರಾಜ್ಯ ಮತ್ತು ಎಲ್ಲಾ ರೀತಿಯ ಸರ್ಕಾರದ ಹಸ್ತಕ್ಷೇಪಕ್ಕೆ ಸಂಬಂಧಿಸಿದಂತೆ ಆಳವಾದ ಅನುಕಂಪರಹಿತ ಧೋರಣೆಯನ್ನು ಇದು ಸೂಚಿಸುತ್ತದೆ.

ಟಾಮ್ ಪೈನ್; ರಾಜ್ಯವನ್ನು, 'ಅನಿವಾರ್ಯ ಅನಿಷ್ಟ' ಎಂದಿದ್ದಾನೆ. ಇದು 'ಅನಿವಾರ್ಯ' ಏಕೆಂದರೆ ಕನಿಷ್ಠಪಕ್ಷ ಇದು ಸುವ್ಯವಸ್ಥೆ ಮತ್ತು ರಕ್ಷಣೆಯನ್ನು ಸ್ಥಾಪಿಸುತ್ತದೆ ಹಾಗೂ ಒಪ್ಪಂದಗಳ ಜಾರಿಗೊಳ್ಳುವಿಕೆಯನ್ನು ಖಾತರಿಪಡಿಸುತ್ತದೆ. ಆದಾಗ್ಯೂ, ಇದು 'ಅನಿಷ್ಟ' ಏಕೆಂದರೆ ಇದು ಸಮಾಜದ ಮೇಲೆ ಸಾಮೂಹಿಕ ಇಚ್ಛೆಯನ್ನು ಹೇರುವ ಮೂಲಕ ವ್ಯಕ್ತಿಯ ಸ್ವಾತಂತ್ರ್ಯ ಹಾಗೂ ಜವಾಬ್ದಾರಿಗಳನ್ನು ಸೀಮಿತಗೊಳಿಸುತ್ತದೆ. ಆದ್ದರಿಂದ ಸಾಂಪ್ರದಾಯಿಕ ಉದಾರವಾದದ ಆದರ್ಶವು ಕನಿಷ್ಠ ಅಥವಾ 'ರಾತ್ರಿ ಕಾವಲುಗಾರ' ರಾಜ್ಯದ ಸ್ಥಾಪನೆಯಾಗಿದೆ. ಇದರ ಪಾತ್ರವು ನಾಗರಿಕರನ್ನು ಸಹ–ನಾಗರಿಕರ ಅತಿಕ್ರಮಣಗಳಿಂದ ರಕ್ಷಿಸುವುದಕ್ಕೆ ಸೀಮಿತವಾಗಿದೆ. ಆರ್ಥಿಕ ಉದಾರವಾದದ ರೂಪದಲ್ಲಿ ಈ ನಿಲುವು, ಮುಕ್ತ ಮಾರುಕಟ್ಟೆ ವ್ಯವಸ್ಥೆಯ ಮೇಲಿನ ಆಳವಾದ ನಂಬಿಕೆ ಮತ್ತು ಸರ್ಕಾರವು ಆರ್ಥಿಕತೆಯನ್ನು ಅದರಷ್ಟಕ್ಕೆ ಬಿಟ್ಟಾಗ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತದೆಂಬ ವಿಶ್ವಾಸವನ್ನು ಬೆಂಬಲಿಸುತ್ತದೆ. ಹಸ್ತಕ್ಷೇಪರಹಿತ (laissez-faire) ಬಂಡವಾಳಶಾಹಿಯು ಸಮೃದ್ಧಿಯನ್ನು ಖಾತರಿಪಡಿಸುತ್ತದೆ ಹಾಗೂ ವೈಯಕ್ತಿಕ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುತ್ತದೆ. ಇದು ವ್ಯಕ್ತಿಗಳು ಅವರ ಯೋಗ್ಯತೆಗನುಸಾರವಾಗಿ ಏರಿಳಿತಗಳನ್ನು ಕಾಣುವಂತೆ ಮಾಡುವ ಮೂಲಕ ಸಾಮಾಜಿಕ ನ್ಯಾಯವನ್ನು ಖಾತರಿಪಡಿಸುತ್ತದೆ.

---

**ಪ್ರಗತಿ:** ಉನ್ನತಿಯೆಡೆಗಿನ ಚಲನೆಯೇ ಪ್ರಗತಿ. ಜ್ಞಾನ ಹಾಗೂ ತಿಳುವಳಿಕೆಯ ಸಂಚಯನವನ್ನು ಆಧರಿಸಿದ ಮಾನವನ ಮುನ್ನಡೆಯು ಇತಿಹಾಸದ ಗುಣಲಕ್ಷಣವೆಂಬ ಒಂದು ನಂಬಿಕೆಯಿದೆ.

---

**ಅರ್ಹತಾಶಾಹಿ:** ಪ್ರತಿಭೆಯುಳ್ಳವರ ಆಳ್ವಿಕೆ. ಜಾಣ್ಮೆಯ ಆಧಾರದ ಮೇಲೆ ಪುರಸ್ಕಾರ ಹಾಗೂ ಸ್ಥಾನಮಾನಗಳನ್ನು ನೀಡತಕ್ಕದ್ದೆಂಬ ನೀತಿ.

---

**ವ್ಯಕ್ತಿವಾದ:** ಸಮಾಜವು ಬಹುಮಟ್ಟಿಗೆ ಸ್ವಯಂಪೂರ್ಣತೆಯನ್ನು ಹೊಂದಿರುವ ವ್ಯಕ್ತಿಗಳ ಗುಂಪಾಗಿದ್ದು; ಈ ವ್ಯಕ್ತಿಗಳ ಪರಸ್ಪರ ಬಾಧ್ಯತೆಯು ಅಲ್ಪ ಪ್ರಮಾಣದಲ್ಲಿರುತ್ತದೆ ಅಥವ ಯಾವುದೇ ರೀತಿಯಿಂದಲೂ ಅವರು ಭಾಧ್ಯಸ್ಥರಾಗಿರುವುದಿಲ್ಲ ಎಂಬ ನಂಬಿಕೆಯನ್ನು ವ್ಯಕ್ತಿವಾದವು ವ್ಯಕ್ತಪಡಿಸುತ್ತದೆ.

**ಆರ್ಥಿಕ ಉದಾರವಾದ:** ಮಾರುಕಟ್ಟೆಯ ಸ್ವಯಂ ನಿಯಂತ್ರಿತ ಕಾರ್ಯಾವಳಿಯು; ಸ್ವಾಭಾವಿಕವಾಗಿ ಸಾರ್ವಲೌಕಿಕ (general) ಅಭ್ಯುದಯವನ್ನು ಮತ್ತು ಎಲ್ಲರಿಗೂ ಸದವಕಾಶಗಳನ್ನು ಒದಗಿಸುತ್ತದೆಂಬ ನಂಬಿಕೆಯನ್ನುಳ್ಳ ಸಿದ್ಧಾಂತ.

**ಬೃಹತ್ ಸರ್ಕಾರ:** ಆರ್ಥಿಕ ನಿರ್ವಹಣೆ ಮತ್ತು ಸಾಮಾಜಿಕ ನಿಬಂಧನೆಯನ್ನು ಸೂಚಿಸುತ್ತದೆಯೆಂದು ಭಾವಿಸಲಾದ ಹಸ್ತಕ್ಷೇಪವಾದಿ ಸರ್ಕಾರ.

## ಆಧುನಿಕ ಉದಾರವಾದ (Modern Liberalism)

ಆಧುನಿಕ ಉದಾರವಾದವು ರಾಜ್ಯದ ಹಸ್ತಕ್ಷೇಪವನ್ನು ಕುರಿತಂತೆ ಹೆಚ್ಚು ಸಹಾನುಭೂತಿಪರ ನಿಲುವನ್ನು ಹೊಂದಿದೆ. ವಾಸ್ತವವಾಗಿ ಅಮೇರಿಕಾದಲ್ಲಿ 'ಉದಾರ' ಎಂಬ ಪದವು, 'ಕನಿಷ್ಠ' ಸರ್ಕಾರಕ್ಕೆ ಬದಲಾಗಿ 'ಬೃಹತ್' ಸರ್ಕಾರಕ್ಕೆ ಬೆಂಬಲ ಎಂಬ ಅರ್ಥವನ್ನು ನೀಡುತ್ತದೆ. ಕೈಗಾರಿಕಾ ಬಂಡವಾಳಶಾಹಿಯು ಕೇವಲ ಹೊಸ ರೀತಿಯ ಅನ್ಯಾಯವನ್ನು ಹುಟ್ಟುಹಾಕಿತು ಹಾಗೂ ಬಹುಜನರನ್ನು ಮಾರುಕಟ್ಟೆಯ ಅಸ್ಥಿರತೆಗಳಿಗೆ ದೂಡಿತೆಂಬುದನ್ನು ಗುರುತಿಸಿದ ಕಾರಣದಿಂದಾಗಿ ಈ ಸ್ಥಾನಪಲ್ಲಟವು ಜನ್ಮತಾಳಿತು. ಜೆ. ಎಸ್. ಮಿಲ್‌ನ ಕಾರ್ಯದಿಂದ ಪ್ರಭಾವಕ್ಕೊಳಗಾದ ನವ–ಉದಾರವಾದಿಗಳು ಎಂದು ಕರೆಯಲ್ಪಡುತ್ತಿದ್ದ ಟಿ. ಎಚ್. ಗ್ರೀನ್ (1836–82), ಎಲ್. ಟಿ. ಹಾಬ್‌ಹೌಸ್ (1864–1929) ಮತ್ತು ಜೆ. ಎ. ಹಾಬ್‌ಸನ್ (1856–1940) ಅವರುಗಳು ಸ್ವಾತಂತ್ರ್ಯದ ವಿಶಾಲವಾದ ಹಾಗೂ 'ಸಕಾರಾತ್ಮಕ' ದೃಷ್ಟಿಕೋನವನ್ನು ಪ್ರತಿಪಾದಿಸಿದರು. ಈ ದೃಷ್ಟಿಯಿಂದ ನೋಡಿದಾಗ, ಸ್ವಾತಂತ್ರ್ಯ ಎಂದರೆ ಜನರನ್ನು ಕೇವಲ ಅವರಷ್ಟಕ್ಕೆ ಬಿಟ್ಟುಬಿಡುವುದಲ್ಲ. ಹಾಗೇನಾದರೂ ಬಿಟ್ಟಲ್ಲಿ ಅದು ಹಸಿವಿನಿಂದ ನರಳುವ ಸ್ವಾತಂತ್ರ್ಯ ಎಂಬುದಕ್ಕಿಂತ ಹೆಚ್ಚೇನೂ ಅಲ್ಲ. ಇದಕ್ಕೆ ಬದಲಾಗಿ ಸ್ವಾತಂತ್ರ್ಯವು ವೈಯಕ್ತಿಕ ಅಭಿವೃದ್ಧಿ ಹಾಗೂ ವ್ಯಕ್ತಿಯ ಸಮೃದ್ಧಿಯೊಡನೆ ಸಂಬಂಧವನ್ನು ಹೊಂದಿದೆ. ಸ್ವಾತಂತ್ರ್ಯವೆಂದರೆ, ಸಂತೃಪ್ತಿಯನ್ನು ಗಳಿಸುವ ಹಾಗೂ ಸ್ವಯಂ ಸಾಕ್ಷಾತ್ಕಾರವನ್ನು ಸಾಧಿಸುವ ವ್ಯಕ್ತಿಯ ಸಾಮರ್ಥ್ಯವಾಗಿದೆ.

ಈ ದೃಷ್ಟಿಕೋನವು ಸಾಮಾಜಿಕ ಅಥವಾ ಯೋಗಕ್ಷೇಮದ ಉದಾರವಾದಕ್ಕೆ ಆಧಾರವನ್ನು ಒದಗಿಸಿತು. ಸಾಮಾಜಿಕ ಯೋಗಕ್ಷೇಮದ ನಿಟ್ಟಿನ ರಾಜ್ಯದ ಹಸ್ತಕ್ಷೇಪವು, ಮುಖ್ಯವಾಗಿ ವೈಯಕ್ತಿಕ ಅಸ್ತಿತ್ವವನ್ನು ಭಂಗಪಡಿಸುವ ಸಾಮಾಜಿಕ ಅನಿಷ್ಟಗಳಿಂದ ವ್ಯಕ್ತಿಗಳನ್ನು ರಕ್ಷಿಸುವ ಮೂಲಕ ಸ್ವಾತಂತ್ರ್ಯವನ್ನು ವಿಸ್ತೃತಗೊಳಿಸಬಹುದೆಂದು ಗುರುತಿಸುವ ಲಕ್ಷಣವನ್ನು ಹೊಂದಿದೆ. ಯುನೈಟೆಡ್ ಕಿಂಗ್‌ಡಮ್‌ನಲ್ಲಿ 1942ರ ಬೆವೆರಿಜ್ ವರದಿಯು ಈ ಅನಿಷ್ಠಗಳನ್ನು 'ಐದು ದೈತ್ಯರು' ಎಂಬುದಾಗಿ ಗುರುತಿಸಿದೆ. ಅವೆಂದರೆ; ಬಯಕೆ, ಅಜ್ಞಾನ, ಸೋಮಾರಿತನ, ಕೊಳಕುತನ ಮತ್ತು ರೋಗ. ಅದೇ ರೀತಿ, ಆಧುನಿಕ ಉದಾರವಾದಿಗಳು ಜೆ. ಎಂ. ಕೇನ್ಸ್‌ರವರ ಒಳನೋಟದ ಫಲವಾಗಿ ಹಸ್ತಕ್ಷೇಪರಹಿತತೆಯ ಕುರಿತಾದ ತಮ್ಮ ನಂಬಿಕೆಯನ್ನು ತ್ಯಜಿಸಿದರು. ಕೇನ್ಸ್‌ರವರ ಪ್ರಕಾರ, ಬೆಳವಣಿಗೆ ಹಾಗೂ ಸಮೃದ್ಧಿಯನ್ನು ನಿರ್ವಹಿಸಲ್ಪಟ್ಟ ಅಥವಾ ನಿಯಂತ್ರಿಸಲ್ಪಟ್ಟ ಬಂಡವಾಳಶಾಹಿ ವ್ಯವಸ್ಥೆ ಹಾಗೂ ಪ್ರಮುಖ ಆರ್ಥಿಕ ಜವಾಬ್ದಾರಿಗಳನ್ನು ರಾಜ್ಯದ ಕೈಯಲ್ಲಿರಿಸುವ ಮೂಲಕವಷ್ಟೇ ಸಂರಕ್ಷಿಸಲು ಸಾಧ್ಯ. ಆದಾಗ್ಯೂ ಸಾಮೂಹಿಕ ಅವಕಾಶ ಹಾಗೂ ಸರ್ಕಾರದ ಹಸ್ತಕ್ಷೇಪದ ಕುರಿತಾದ ಆಧುನಿಕ

ಉದಾರವಾದಿಗಳ ಬೆಂಬಲವು ಯಾವಾಗಲೂ ಷರತ್ತುಗಳಿಗೊಳಪಟ್ಟಿತ್ತು. ಅವರ ಕಾಳಜಿಯು ದುರ್ಬಲರು, ಸುಲಭ ಪೀಡಿತರು ಹಾಗೂ ತಮಗೆ ತಾವೇ ಸಹಾಯ ಮಾಡಿಕೊಳ್ಳಲು ಸಾಧ್ಯವೇ ಇಲ್ಲದವರ ದುರವಸ್ಥೆಯ ಪರವಾಗಿತ್ತು. ತಮ್ಮ ಸನ್ನಿವೇಶಗಳಿಗೆ ಸಂಬಂಧಿಸಿದಂತೆ ವ್ಯಕ್ತಿಗಳು ತಾವೇ ಜವಾಬ್ದಾರಿಯನ್ನು ತೆಗೆದುಕೊಳ್ಳುವ ಹಾಗೂ ಸ್ವತಃ ನೈತಿಕ ಆಯ್ಕೆಗಳನ್ನು ಮಾಡಿಕೊಳ್ಳುವ ಮಟ್ಟಕ್ಕೆ ಅವರನ್ನು ಕೊಂಡೊಯ್ಯುವುದು ಆಧುನಿಕ ಉದಾರವಾದಿಗಳ ಗುರಿಯಾಗಿತ್ತು. ಉದಾರವಾದದ ತತ್ವಗಳನ್ನು ಯೋಗಕ್ಷೇಮ ಹಾಗೂ ಪುನರ್ ಹಂಚಿಕೆಯೊಂದಿಗೆ ಸಮನ್ವಯಗೊಳಿಸುವ ಕಾರ್ಯವನ್ನು ಕೈಗೊಂಡ ಅತ್ಯಂತ ಪ್ರಭಾವಶಾಲಿ ಆಧುನಿಕ ಪ್ರಯತ್ನ ಜಾನ್ ರಾಲ್ಸ್‌ದಾಗಿತ್ತು. (ಅಂತಾರಾಷ್ಟ್ರೀಯ ರಾಜಕೀಯಕ್ಕೆ ಉದಾರವಾದ ದೃಷ್ಟಿಕೋನವನ್ನು 18ನೇ ಅಧ್ಯಾಯದಲ್ಲಿ ಪರಿಶೀಲಿಸಲಾಗಿದೆ).

**ಸಂಪ್ರದಾಯವಾದ (Conservatism)**

ಸಂಪ್ರದಾಯವಾದಿ ವಿಚಾರಗಳು ಹಾಗೂ ತತ್ವಗಳು ಮೊದಲಿಗೆ ಹದಿನೆಂಟನೆ ಶತಮಾನದ ಅಂತ್ಯ ಹಾಗೂ ಹತ್ತೊಂಭತ್ತನೆ ಶತಮಾನದ ಪ್ರಾರಂಭದಲ್ಲಿ ಹೊರಹೊಮ್ಮಿದವು. ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಯ ಹೆಚ್ಚುತ್ತಿರುವ ಗತಿಕ್ರಮಕ್ಕೆ ಪ್ರತಿಕ್ರಿಯೆಯಾಗಿ ಇವು ಉಗಮವಾದವು. ಈ ಬದಲಾವಣೆಯು ಹಲವು ವಿಧಗಳಲ್ಲಿ ಫ್ರೆಂಚ್ ಕ್ರಾಂತಿಯ ಸಂಕೇತವನ್ನು ಒಳಗೊಂಡಿತ್ತು. ಈ ಅರ್ಥದಲ್ಲಿ ನೋಡಿದಾಗ ಸಂಪ್ರದಾಯವಾದವು 'ಪ್ರಾಚೀನ ಆಳ್ವಿಕೆ'ಯನ್ನು ನೆನಪಿಸುತ್ತದೆ. ಉದಾರವಾದ, ಸಮಾಜವಾದ ಹಾಗೂ ರಾಷ್ಟ್ರವಾದಗಳ ಬೆಳವಣಿಗೆಗಳು ಬಿಡುಗಡೆ ಮಾಡಿದ ಒತ್ತಡಗಳನ್ನು ವಿರೋಧಿಸುವ ಪ್ರಯತ್ನದಲ್ಲಿ ಸಂಪ್ರದಾಯವಾದವು ಸಾಂಪ್ರದಾಯಿಕ ಸಾಮಾಜಿಕ ವ್ಯವಸ್ಥೆಯ ಪರವಾಗಿ ನಿಂತಿತು. ಆದರೆ, ಪ್ರಾರಂಭದಿಂದಲೂ ಸಾಂಪ್ರದಾಯಿಕ ಚಿಂತನೆಯಲ್ಲಿ ವಿಭಜನೆಗಳು ಕಂಡುಬಂದವು. ಯುರೋಪ್ ಭೂಖಂಡದಲ್ಲಿ ಜೋಸೆಫ್ ಡಿ ಮೈಸ್ತ್ರೆಯವರಂತಹ (1753–1821) ಚಿಂತಕರ ಕಾರ್ಯದ ಲಕ್ಷಣವನ್ನೊಳಗೊಂಡ ಸಂಪ್ರದಾಯವಾದದ ರೂಪವೊಂದು ಹೊರಹೊಮ್ಮಿತು. ಈ ಸಂಪ್ರದಾಯವಾದವು ಸ್ಪಷ್ಟವಾಗಿ ನಿರಂಕುಶ ಹಾಗೂ ಪ್ರತಿಗಾಮಿಯಾಗಿದ್ದು, ಸುಧಾರಣೆಯ ಯಾವುದೇ ಚಿಂತನೆಗಳನ್ನು ಸಾರಾಸಗಟಾಗಿ ತಿರಸ್ಕರಿಸಿತು. ಆದರೆ, ಎಡ್ಮಂಡ್ ಬರ್ಕ್‌ನ 'ಸಂರಕ್ಷಣೆಗಾಗಿ ಬದಲಾವಣೆ'ಯ ನಂಬಿಕೆಯ ಲಕ್ಷಣಗಳನ್ನೊಳಗೊಂಡ, ಹೆಚ್ಚು ಜಾಗರೂಕತೆಯ, ಹೆಚ್ಚು ನಮ್ಯತೆಯ ಹಾಗೂ ಅಂತಿಮವಾಗಿ ಹೆಚ್ಚು ಯಶಸ್ವಿಯಾದ ಸಂಪ್ರದಾಯವಾದದ ರೂಪವು ಯುನೈಟೆಡ್ ಕಿಂಗ್‌ಡಂ ಮತ್ತು ಅಮೇರಿಕಾದಲ್ಲಿ ಅಭಿವೃದ್ಧಿಯಾಯಿತು. ಈ ನಿಲುವು ಹತ್ತೊಂಭತ್ತನೆ ಶತಮಾನದಲ್ಲಿ ಸಂಪ್ರದಾಯವಾದಿಗಳು 'ಒಂದು ದೇಶ'ವೆಂಬ ಪೈತೃಕ ನೀತಿಯ (paternalistic) ನಿಶಾನೆಯಡಿಯಲ್ಲಿ ಸಮಾಜ ಸುಧಾರಣೆಯ ಉದ್ದೇಶವನ್ನು ಸ್ವೀಕರಿಸಲು ಅನುವು ಮಾಡಿಕೊಟ್ಟಿತು. ಈ ಸಂಪ್ರದಾಯವಾದದ ಉನ್ನತ ಸ್ಥಿತಿಯು ಯುನೈಟೆಡ್ ಕಿಂಗ್‌ಡಮ್‌ನಲ್ಲಿ 1950ರಲ್ಲಿ ಕಂಡುಬಂದಿತು. ಕನ್ಸರ್ವೇಟಿವ್ ಪಕ್ಷವು ಯುದ್ಧೋತ್ತರ ಒಪ್ಪಂದವನ್ನು ಒಪ್ಪಿಕೊಂಡಿತಲ್ಲದೆ ಕೇನ್ಸ್‌ರವರ ಸಾಮಾಜಿಕ ಪ್ರಜಾಪ್ರಭುತ್ವದ ತನ್ನದೇ ಆದ ಪಾಠಾಂತರವನ್ನು (version) ಅಂಗೀಕರಿಸಿತು. ಆದರೆ, 1970ರ ನಂತರ ಹೊಸ ಹಕ್ಕಿನ (New Right) ಉಗಮದ ಕಾರಣದಿಂದಾಗಿ ಈ ವಿಚಾರಗಳು ಹೆಚ್ಚಿನ ಒತ್ತಡಕ್ಕೊಳಗಾದವು. ಹೊಸ ಹಕ್ಕಿನ ಆಮೂಲಾಗ್ರವಾದ ರಾಜ್ಯ ನಿಯಂತ್ರಣವಾದದ (Antistatist)
ವಿರೋಧಿ ಹಾಗೂ ಪಿತೃತ್ವ ವಿರೋಧಿ ಮಾದರಿಯ ಸಂಪ್ರದಾಯವಾದವು ಸಾಂಪ್ರದಾಯಿಕ ಉದಾರ ವಿಷಯಗಳು ಹಾಗೂ ಮೌಲ್ಯಗಳಿಂದ ಹೆಚ್ಚು ಪ್ರಭಾವಿಸಲ್ಪಟ್ಟಿದೆ.

**ಮರುಹಂಚಿಕೆ (Redistribution)**: ಪ್ರಗತಿಪರ ತೆರಿಗೆ ಹಾಗೂ ಯೋಗಕ್ಷೇಮ ಸೌಲಭ್ಯಗಳ ಸಂಯೋಜನೆಯ ಮೂಲಕ ಭೌತಿಕ ಅಸಮಾನತೆಗಳನ್ನು ಕಡಿಮೆ ಮಾಡುವುದು.

**ಪ್ರಾಚೀನ ಆಳ್ವಿಕೆ (Ancien regime):** ಫ್ರೆಂಚ್ ಶಬ್ದ. ಅಕ್ಷರಶಃ 'ಹಳೆ ವ್ಯವಸ್ಥೆ'; ಸಾಮಾನ್ಯವಾಗಿ ಫ್ರಾನ್ಸಿನ ಕ್ರಾಂತಿಗಿಂತ ಮುಂಚಿನ ನಿರಪೇಕ್ಷತಾವಾದಿ (absolutist) ಸಂರಚನೆಗಳಿಗೆ ಸಂಬಂಧಿಸಿದೆ.

**ಪೈತೃಕ ನೀತಿ (ಪಿತೃಸ್ಥಾನತ್ವ [Paternalism]):** ತಂದೆ ಹಾಗು ಮಗುವಿನ ನಡುವಿನ ಸಂಬಂಧದಲ್ಲಿರುವಂತೆ, ತಮಗೆ ತಾವು ಸಹಾಯ ಮಾಡಿಕೊಳ್ಳಲಾಗದವರ ಬಗ್ಗೆ ಪೋಷಣೆ ಅಥವಾ ಕಾಳಜಿಯನ್ನು ಪ್ರದರ್ಶಿಸುವ ಮನೋಭಾವ ಅಥವಾ ನೀತಿ.

**ಉದಾತ್ತ ಉಪಕಾರಭಾವ (Noblesse oblige):** ಫ್ರೆಂಚ್ ಶಬ್ದ. ನತದೃಷ್ಟರು ಅಥವಾ ಸೌಲಭ್ಯ ವಂಚಿತರಿಗೆ ಮಾರ್ಗದರ್ಶನ ನೀಡುವ ಅಥವಾ ಅವರನ್ನು ರಕ್ಷಿಸುವ ಜವಾಬ್ದಾರಿ.

**ಸಂಪ್ರದಾಯನಿಷ್ಠೆ (Toryism)**: ಸಂಪ್ರದಾಯವಾದದೊಳಗಿನ ಒಂದು ಸೈದ್ಧಾಂತಿಕ ನಿಲುವು. ಇದು ಶ್ರೇಣಿ ವ್ಯವಸ್ಥೆಯಲ್ಲಿ ನಂಬಿಕೆ, ಸಂಪ್ರದಾಯವಾದಕ್ಕೆ ಒತ್ತು ನೀಡುವಿಕೆ ಹಾಗೂ ಕರ್ತವ್ಯ ಮತ್ತು ಅಂಗವಾದವನ್ನು ಬೆಂಬಲಿಸುವ ಗುಣಲಕ್ಷಣವನ್ನು ಹೊಂದಿದೆ.

**ಸ್ವಾಭಾವಿಕ ಕುಲೀನಪ್ರಭುತ್ವ (Natural Aristocracy)**: ಪ್ರತಿಭೆ ಹಾಗೂ ನಾಯಕತ್ವಗಳು ಸಹಜವಾದವು ಅಥವಾ ಹುಟ್ಟಿನಿಂದ ಬಂದವು, ಅವುಗಳನ್ನು ಪ್ರಯತ್ನ ಅಥವಾ ಸ್ವಯಂಪ್ರಗತಿಯಿಂದ ಪಡೆದುಕೊಳ್ಳಲಾಗದೆಂಬ ನಂಬಿಕೆ.

## ಪೈತೃಕ ಸಂಪ್ರದಾಯವಾದ (Paternalistic Conservatism)

ಸಾಂಪ್ರದಾಯಿಕ ಚಿಂತನೆಯಲ್ಲಿನ ಪೈತೃಕ ಎಳೆಯು (strand) ಸಂಪೂರ್ಣವಾಗಿ; ಅಂಗವಾದ, ಶ್ರೇಣಿ ವ್ಯವಸ್ಥೆ ಮತ್ತು ಕರ್ತವ್ಯದ ತತ್ವಗಳಿಗನುಸಾರವಾಗಿಯೇ ಇದೆ. ಹೀಗಾಗಿ ಇದನ್ನು ಪಾರಂಪರಿಕ ಸಂಪ್ರದಾಯವಾದದ ಬೆಳವಣಿಗೆಯಾಗಿ ನೋಡಬಹುದು. ಬೆಂಜಮಿನ್ ಡಿಸ್ರೇಲಿ (1804–81) ಅವರ ಆರಂಭಿಕ ಬರವಣಿಗೆಗಳಲ್ಲಿ ಪಿತೃಸ್ಥಾನತ್ವವನ್ನು ಕಾಣಬಹುದು. ಪಿತೃಸ್ಥಾನತ್ವವು ದೂರದೃಷ್ಟಿ ಹಾಗೂ ತತ್ವಗಳ ಸಂಯೋಜನೆಯಿಂದ ಪ್ರಭಾವಿತವಾಗಿದೆ. ಯುನೈಟೆಡ್ ಕಿಂಗ್‌ಡಮ್ 'ಶ್ರೀಮಂತರ ಮತ್ತು ಬಡವರ ದೇಶ' ಎಂಬ ಎರಡು ದೇಶಗಳಾಗಿ ವಿಭಜಿಸಲ್ಪಡಬಹುದಾದ ಅಪಾಯದ ಬಗ್ಗೆ ಎಚ್ಚರಿಸುವ ಡಿಸ್ರೇಲಿ, ಸಾಮಾಜಿಕ ಕ್ರಾಂತಿಯ ವ್ಯಾಪಕ ಆತಂಕವನ್ನು ಸ್ಪಷ್ಟವಾಗಿ

ವ್ಯಕ್ತಪಡಿಸುತ್ತಾರೆ. ಈ ಎಚ್ಚರಿಕೆಯು ಎಲ್ಲ ಸೌಲಭ್ಯಗಳನ್ನು ಹೊಂದಿದವರ (ಬಲ್ಲಿದರ) ಸ್ವಹಿತಾಸಕ್ತಿಗೆ ಸಂಬಂಧಿಸಿದ ಒಂದು ಮನವಿಯಾಗಿತ್ತು. 'ತಳಮಟ್ಟದಲ್ಲಿನ ಕ್ರಾಂತಿ'ಗಿಂತ 'ಮೇಲ್ಮಟ್ಟದಲ್ಲಿನ ಸುಧಾರಣೆ'ಗೆ ಆದ್ಯತೆ ನೀಡಬೇಕೆಂಬುದನ್ನು ಈ ಬಲ್ಲಿದರು ಗುರುತಿಸಬೇಕೆಂಬುದು ಈ ಎಚ್ಚರಿಕೆಯ ಅರ್ಥವಾಗಿತ್ತು. ಈ ಸಂದೇಶವು, 'ಉದಾತ್ತ ಉಪಕಾರಭಾವ'ದಂತಹ (noblesse oblige) 'ನವ ಊಳಿಗಮಾನ್ಯ' (neofeudal) ವಿಚಾರಗಳಲ್ಲಿ ಬೇರೂರಿರುವ ಕರ್ತವ್ಯ ಹಾಗೂ ಸಾಮಾಜಿಕ ಹೊಣೆಗಾರಿಕೆಯ ತತ್ವಗಳಿಗೆ ಸಂಬಂಧಿಸಿದ ಒಂದು ಮನವಿಯಾಗಿತ್ತು. ಈ ದೃಷ್ಟಿಕೋನದ ಪ್ರಕಾರ, ಕರ್ತವ್ಯವು ಸೌಲಭ್ಯಗಳನ್ನು ಹೊಂದುವುದಕ್ಕೆ ನೀಡುವ ಬೆಲೆಯಾಗಿದ್ದು; ಬಲಶಾಲಿಗಳು ಹಾಗೂ ಸ್ಥಿತಿವಂತರು ಸಾಮಾಜಿಕ ಒಗ್ಗಟ್ಟು ಹಾಗೂ ಐಕ್ಯತೆಯ ಹಿತದೃಷ್ಟಿಯಿಂದ ಸೌಲಭ್ಯವಂಚಿತರ ಬಗ್ಗೆ ಕಾಳಜಿವಹಿಸಬೇಕಾದ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಇದರ ಫಲಸ್ವರೂಪವಾಗಿ ಹೊರಹೊಮ್ಮಿದ 'ಒಂದು ರಾಷ್ಟ್ರ' ಎಂಬ ತತ್ವವು ಹತ್ತೊಂಭತ್ತನೆ ಶತಮಾನದ ಪ್ರಾರಂಭದಿಂದ 'ಸಂಪ್ರದಾಯನಿಷ್ಠ' (Tory) ಎಂಬುದಾಗಿ ಕರೆಯಲ್ಪಡುವ ನಿಲುವಿನ ಅಡಿಗಲ್ಲಾಗಿದೆ. ಈ ಸಂಪ್ರದಾಯನಿಷ್ಠ ತತ್ವವು ಜೈವಿಕವಾಗಿ ಉಗಮವಾಗುವ ಒಗ್ಗಟ್ಟಿನ ಹಾಗೂ ಸ್ಥಿರ ಶ್ರೇಣಿ ವ್ಯವಸ್ಥೆಯಲ್ಲಿ ಕಂಡುಬರುವ ಸಾಮಾಜಿಕ ಸಮಾನತೆಯ ಆದರ್ಶವನ್ನು ಬಿಂಬಿಸುವುದಿಲ್ಲ.

'ಒಂದು ರಾಷ್ಟ್ರ'ದ ಸಂಪ್ರದಾಯವು ಸಾಮಾಜಿಕ ಸುಧಾರಣೆಯ ಕುರಿತಾದ ಮನೋಭಾವವನ್ನಷ್ಟೇ ಅಲ್ಲದೆ ಆರ್ಥಿಕ ನೀತಿಯ ಬಗೆಗಿನ ವ್ಯಾವಹಾರಿಕ ಮನೋಧರ್ಮವನ್ನು ವ್ಯಕ್ತಪಡಿಸುತ್ತದೆ. 1950ರ ದಶಕದಲ್ಲಿ ಯುನೈಟೆಡ್ ಕಿಂಗ್‌ಡಮ್‌ನ ಸಂಪ್ರದಾಯವಾದಿಗಳು ಅಳವಡಿಸಿಕೊಂಡ 'ಮಧ್ಯಮ ಮಾರ್ಗ'ದಲ್ಲಿ ಇದನ್ನು ನಾವು ಸ್ಪಷ್ಟವಾಗಿ ಕಾಣಬಹುದು. ಈ ದೃಷ್ಟಿಕೋನವು ಆರ್ಥಿಕ ಸಂಘಟನೆಯ ಎರಡು ಸೈದ್ಧಾಂತಿಕ ಮಾದರಿಗಳನ್ನು ತ್ಯಜಿಸಿತು. ಅವೆಂದರೆ; ಹಸ್ತಕ್ಷೇಪರಹಿತ ಬಂಡವಾಳಶಾಹಿ ಹಾಗೂ ರಾಜ್ಯ ಸಮಾಜವಾದ ಮತ್ತು ಕೇಂದ್ರೀಯ ಯೋಜನೆ. ಇವುಗಳಲ್ಲಿ ಮೊದಲನೆಯದನ್ನು; (ಹಸ್ತಕ್ಷೇಪರಹಿತ ಬಂಡವಾಳಶಾಹಿ) ಅದು ಎಲ್ಲರಿಗೂ ಮುಕ್ತವಾಗಿರುವುದರಿಂದ, ಸಾಮಾಜಿಕ ಒಗ್ಗಟ್ಟು ಅಸಾಧ್ಯವೆಂಬ ಹಾಗೂ ದುರ್ಬಲ ಮತ್ತು ಭೇದ್ಯರನ್ನು (Vulnerable) ದಂಡಿಸುವ ಸಾಧ್ಯತೆಯಿರುತ್ತದೆಂಬ ಕಾರಣದಿಂದ ತಿರಸ್ಕರಿಸಲಾಯಿತು. ಎರಡನೆಯದನ್ನು (ರಾಜ್ಯ ಸಮಾಜವಾದ), ಅದು ರಾಜ್ಯ ಅಖಂಡತ್ವವನ್ನು ಸೃಷ್ಟಿಸುತ್ತದೆ ಹಾಗೂ ಎಲ್ಲಾ ರೀತಿಯ ಸ್ವಾತಂತ್ರ್ಯ ಮತ್ತು ಉದ್ಯಮಶೀಲತೆಯನ್ನು ಹೊಸಕಿಹಾಕುತ್ತದೆಂಬ ಕಾರಣಕ್ಕೆ ನಿರಾಕರಿಸಲಾಯಿತು. ಹೀಗಾಗಿ, ಮಾರುಕಟ್ಟೆ ಪೈಪೋಟಿ ಹಾಗೂ ಸರ್ಕಾರದ ನಿಯಂತ್ರಣದ ಸಂಮಿಶ್ರಣದಲ್ಲಿ ಅಂದರೆ, 'ಸ್ವಾರ್ಥರಹಿತ ಖಾಸಗಿ ಉದ್ಯಮಶೀಲತೆ'ಯಲ್ಲಿ ಇದಕ್ಕೆ ಪರಿಹಾರವಿದೆ (ಎಚ್. ಮ್ಯಾಕ್‌ಮಿಲನ್).

1945ರ ನಂತರ ಖಂಡಾಂತರ ಯೂರೋಪಿನ ಸಂಪ್ರದಾಯವಾದಿಗಳೂ ಇದೇ ರೀತಿಯ ತೀರ್ಮಾನಕ್ಕೆ ಬಂದರು. ಜರ್ಮನ್ ಕ್ರಿಶ್ಚಿಯನ್ ಡೆಮಾಕ್ರಟ್‌ಗಳು (CDU) 'ಸಾಮಾಜಿಕ ಮಾರುಕಟ್ಟೆ' ತತ್ವದಲ್ಲಿ ತೀವ್ರವಾಗಿ ಅಭಿವೃದ್ಧಿಪಡಿಸಿದ 'ಕ್ರೈಸ್ತ ಪ್ರಜಾಪ್ರಭುತ್ವ'ದ (Christian Democracy) ತತ್ವಗಳನ್ನು ಇವರು ಸ್ವೀಕರಿಸಿದರು. ಮಾರುಕಟ್ಟೆಯ ಕಾರ್ಯನೀತಿಯನ್ನು ಅನುಸರಿಸುವ ಈ ತತ್ವವು, ಖಾಸಗಿ ಉದ್ಯಮಶೀಲತೆ ಹಾಗೂ ಪೈಪೋಟಿಯ ಗುಣಗಳನ್ನು ಎತ್ತಿತೋರಿಸುತ್ತದೆ. ಆದರೆ ಇದು ಸಾಮಾಜಿಕವೂ ಹೌದು, ಏಕೆಂದರೆ, ಲಭ್ಯವಾಗುವಂತಹ ಸಮೃದ್ಧಿಯನ್ನು ಒಟ್ಟಾರೆ ಸಮಾಜದ

ಅನುಕೂಲಕ್ಕಾಗಿ ಬಳಸಬೇಕೆಂಬುದು ಇದರ ನಂಬಿಕೆಯಾಗಿದೆ. ಇಂತಹ ನಿಲುವು ಕ್ಯಾಥೋಲಿಕ್ ಸಾಮಾಜಿಕ ಸಿದ್ಧಾಂತದಿಂದ ಬಂದುದಾಗಿದೆ. ಈ ಸಿದ್ಧಾಂತವು ಸಾಮಾಜಿಕ ಸಾಮರಸ್ಯಕ್ಕೆ ಒತ್ತುನೀಡುವ ಜೈವಿಕ ದೃಷ್ಟಿಕೋನವನ್ನು ಪ್ರತಿಪಾದಿಸುತ್ತದೆ. ಕ್ರೈಸ್ತ ಪ್ರಜಾಪ್ರಭುತ್ವವು 'ಸಾಮಾಜಿಕ ಸಹಭಾಗಿತ್ವ'ದ ಕಲ್ಪನೆಯಲ್ಲಿ ಪರಸ್ಪರ ಬಂಧಿಸಲ್ಪಟ್ಟಿರುವ ಚರ್ಚ್‌ಗಳು, ಒಕ್ಕೂಟಗಳು ಮತ್ತು ಉದ್ಯಮ (business) ಗುಂಪುಗಳಂತಹ ಮಧ್ಯವರ್ತಿ ಸಂಸ್ಥೆಗಳ ಮಹತ್ವವನ್ನು ಎತ್ತಿ ತೋರಿಸುತ್ತದೆ. ಆಧುನಿಕ ಸಂಪ್ರದಾಯವಾದ ಚಿಂತನೆಯ ಪೈತೃಕ ಎಳೆಗೆ 'ಅನುಕಂಪ ಸಂಪ್ರದಾಯವಾದ'ದ ಕಲ್ಪನೆಯೊಡನೆ ಸಂಬಂಧವನ್ನು ಕಲ್ಪಿಸಲಾಗುತ್ತದೆ.

---

**ಕ್ರೈಸ್ತ ಪ್ರಜಾಪ್ರಭುತ್ವ (Christian Democracy)**: ಸಾಮಾಜಿಕ ಮಾರುಕಟ್ಟೆ ತತ್ವಗಳಿಗೆ ಹಾಗೂ ಅರ್ಹ ಹಸ್ತಕ್ಷೇಪವಾದಕ್ಕೆ ಬದ್ಧವಾಗಿರುವ ಲಕ್ಷಣಗಳನ್ನೊಳಗೊಂಡ ಯೂರೋಪಿಯನ್ ಸಂಪ್ರದಾಯವಾದ ಒಂದು ಸೈದ್ಧಾಂತಿಕ ಪ್ರವೃತ್ತಿ.

---

**ಎಡ್ಮಂಡ್ ಬರ್ಕ್** (1729 –97)

ಡಬ್ಲಿನ್‌ನಲ್ಲಿ ಜನಿಸಿದ ಎಡ್ಮಂಡ್ ಬರ್ಕ್ ಯುನೈಟೆಡ್ ಕಿಂಗ್‌ಡಮ್‌ನ ರಾಜನೀತಿಜ್ಞ ಹಾಗೂ ರಾಜಕೀಯ ಸಿದ್ಧಾಂತಿ. ಇವರನ್ನು ಆಂಗ್ಲೋ ಅಮೇರಿಕನ್ ಸಂಪ್ರದಾಯ ಪರಂಪರೆಯ ಪಿತಾಮಹನೆಂದು ಪರಿಗಣಿಸಲಾಗುತ್ತದೆ. ಬರ್ಕ್, ತನ್ನ ಅನೇಕ ಕೃತಿಗಳಿಂದಾಗಿ ಶಾಶ್ವತ ಕೀರ್ತಿಯನ್ನು ಗಳಿಸಿದ್ದಾರೆ. ಇವರ ಅತ್ಯಂತ ಪ್ರಮುಖ ಕೃತಿಯೆಂದರೆ, ಫ್ರಾನ್ಸ್ ಕ್ರಾಂತಿಯನ್ನು ಟೀಕಿಸಿರುವ 'ರಿಫ್ಲೆಕ್ಷನ್ಸ್ ಆನ್ ದಿ ರೆವಲ್ಯೂಷನ್ ಇನ್ ಫ್ರಾನ್ಸ್' ([1790] 1968). ಅಮೇರಿಕಾದ ಕ್ರಾಂತಿಯ ಕುರಿತು ಬರ್ಕ್ ಸಹಾನುಭೂತಿಯನ್ನು ಹೊಂದಿದ್ದರಾದರೂ ಫ್ರೆಂಚ್ ರಾಜಕೀಯವನ್ನು ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳಂತಹ ಅಮೂರ್ತ ತತ್ವಗಳಿಗನುಸರವಾಗಿ ಪುನಃಸ್ಥಾಪಿಸುವ ಪ್ರಯತ್ನದ ಬಗ್ಗೆ ತೀವ್ರ ಟೀಕೆಯನ್ನು ಮಾಡುತ್ತಿದ್ದರು. ವಿವೇಕವು ಅನುಭವ, ಪರಂಪರೆ ಹಾಗೂ ಇತಿಹಾಸಗಳಲ್ಲಿ ಮನೆ ಮಾಡಿದೆಯೆಂಬುದು ಅವರ ವಾದವಾಗಿತ್ತು. ಫ್ರೆಂಚ್ ರಾಜಪ್ರಭುತ್ವವು ಅದರ ವಿಧಿಗೆ ಭಾಗಶಃ ಅದೇ ಕಾರಣವೆಂಬುದು ಬರ್ಕ್‌ನ ಅಭಿಪ್ರಾಯವಾಗಿತ್ತು. ಫ್ರೆಂಚ್ ರಾಜಪ್ರಭುತ್ವವು 'ಸಂರಕ್ಷಣೆಗಾಗಿ ಬದಲಾವಣೆ'ಯನ್ನು ಹಠಮಾರಿತನದಿಂದ ನಿರಾಕರಿಸಿತು. ಬರ್ಕ್, ಸರ್ಕಾರದ ಬಗ್ಗೆ ವಿಷಣ್ಣ ದೃಷ್ಟಿಕೋನವನ್ನು ಹೊಂದಿದ್ದನು. ಸರ್ಕಾರವು ಕೆಡುಕನ್ನು ತಡೆಯಬಹುದು ಆದರೆ ಒಳ್ಳೆಯದನ್ನು ಪ್ರೋತ್ಸಾಹಿಸುವುದು ಅಪರೂಪ ಎಂಬುದನ್ನು ಅವರು ಗುರುತಿಸಿದ್ದರು. 'ಪ್ರಕೃತಿ ನಿಯಮ'ವನ್ನು ಬಿಂಬಿಸುತ್ತದೆಂಬ ಆಧಾರದಲ್ಲಿ ಮುಕ್ತ ಮಾರುಕಟ್ಟೆಯನ್ನು ಬರ್ಕ್ ಬೆಂಬಲಿಸಿದರು.

## ಹೊಸ ಹಕ್ಕು (The New Right)

1945ರ ನಂತರದ ರಾಜ್ಯ ಹಸ್ತಕ್ಷೇಪದೆಡಗಿನ ಚಲನೆ ಹಾಗೂ ಉದಾರ ಅಥವಾ ಪ್ರಗತಿಪರ ಸಾಮಾಜಿಕ ಮೌಲ್ಯಗಳ ವಿರುದ್ಧದ ಒಂದು ರೀತಿಯ ಪ್ರತಿಕ್ರಾಂತಿಗೆ ಕಾರಣವಾದ ಸಾಂಪ್ರದಾಯಿಕ ಚಿಂತನೆಯಲ್ಲಿನ ನಿರ್ಗಮನವನ್ನು 'ಹೊಸ ಹಕ್ಕು' ಪ್ರತಿನಿಧಿಸುತ್ತದೆ. ಹೊಸ ಹಕ್ಕಿನ ವಿಚಾರಗಳು

1970ರ ದಶಕದಲ್ಲಿ ಪ್ರಾರಂಭವಾದವು. ಯುದ್ಧೋತರ ಉತ್ಕರ್ಷದ ಅಂತ್ಯವು ಸೂಚಿಸಿದ ಕೇನ್ಸ್‌ನ ಸಾಮಾಜಿಕ ಪ್ರಜಾಪ್ರಭುತ್ವದ ಸ್ಪಷ್ಟ ವೈಫಲ್ಯ ಹಾಗೂ ಸಾಮಾಜಿಕ ಸ್ಥಗಿತ ಮತ್ತು ಅಧಿಕಾರದ ಕುಸಿತದ ಕುರಿತಾದ ಹೆಚ್ಚುತ್ತಿರುವ ಕಾಳಜಿಗಳ ನಡುವಿನ ಸಂಯೋಗವು ಹೊಸ ಹಕ್ಕಿನ ಉಗಮಕ್ಕೆ ಕಾರಣವಾಯಿತು. ಈ ರೀತಿಯ ವಿಚಾರಗಳು ಯುನೈಟೆಡ್ ಕಿಂಗ್‌ಡಂ ಮತ್ತು ಅಮೇರಿಕಾದಲ್ಲಿ ಅತ್ಯಂತ ಹೆಚ್ಚಿನ ಪರಿಣಾಮವನ್ನು ತೋರಿದವು. ಇಲ್ಲಿ, 1980ರ ದಶಕದಲ್ಲಿ ಅನುಕ್ರಮವಾಗಿ ಥ್ಯಾಚರಿಸಮ್ ಹಾಗೂ ರೇಗನಿಸಮ್‌ಗಳ ರೂಪದಲ್ಲಿ ಈ ವಿಚಾರಗಳನ್ನು ವ್ಯಕ್ತಪಡಿಸಲಾಯಿತು. ರಾಜ್ಯದಿಂದ ಮಾರುಕಟ್ಟೆ–ಗುರಿನಿರ್ದೇಶಿತ ರೂಪದ ವ್ಯವಸ್ಥೆಗೆ ಸ್ಥಾನಪಲ್ಲಟಗೊಳಿಸುವುದಕ್ಕೆ ಸಂಬಂಧಿಸಿದಂತೆ ಹೆಚ್ಚು ವಿಶಾಲವಾದ, ವಿಶ್ವವ್ಯಾಪಿಯಾದ ಪ್ರಭಾವವನ್ನು ಈ ವಿಚಾರಗಳು ಹೊಂದಿದ್ದವು. ಆದರೆ ನವ ಉದಾರವಾದ (neoliberalism) ಹಾಗೂ 'ನವ ಸಂಪ್ರದಾಯವಾದ'ವೆಂದು (neoconservatism) ಸಾಮಾನ್ಯವಾಗಿ ಕರೆಯಲ್ಪಡುವ ಎರಡು ವಿಭಿನ್ನ ಸಂಪ್ರದಾಯಗಳನ್ನು ಒಟ್ಟುಗೂಡಿಸುವ ಒಂದು ಸುಸಂಬದ್ಧ ಮತ್ತು ವ್ಯವಸ್ಥಿತವಾದ ತತ್ವದ ಪ್ರಯತ್ನವಾಗಿ 'ಹೊಸ ಹಕ್ಕು' ಅಷ್ಟಾಗಿ ಕಂಡುಬರಲಿಲ್ಲ. ನವಉದಾರವಾದ ಹಾಗೂ ನವಸಂಪ್ರದಾಯವಾದಗಳ ನಡುವೆ ರಾಜಕೀಯ ಮತ್ತು ಸೈದ್ಧಾಂತಿಕ ಒತ್ತಡಗಳು ಇವೆಯಾದರೂ ಒಂದು ಸದೃಢವಾದ ಆದರೆ ಕನಿಷ್ಠ ಪ್ರಮಾಣದ ಸರ್ಕಾರಕ್ಕೆ ಬೆಂಬಲವಾಗುವ ರೀತಿಯಲ್ಲಿ ಇವೆರಡನ್ನೂ ಜೊತೆಗೂಡಿಸಬಹುದು. ಆಂಡ್ರ್ಯೂ ಗ್ಯಾಂಬಲ್ (1981) ಇದನ್ನು 'ಮುಕ್ತ ಆರ್ಥಿಕತೆ ಹಾಗೂ ಪ್ರಬಲ ರಾಜ್ಯ' ಎಂದಿದ್ದಾರೆ.

**ನವಉದಾರವಾದ (Neoliberalism):** ನವಉದಾರವಾದವು, ಮುಕ್ತ ಮಾರುಕಟ್ಟೆ ಅರ್ಥಶಾಸ್ತ್ರಜ್ಞರಾದ ಫ್ರೆಡ್‌ರಿಕ್ ಹಯೆಕ್ ಹಾಗೂ ಮಿಲ್ಟನ್ ಫ್ರೀಡ್‌ಮನ್ ಹಾಗೂ ರಾಬರ್ಟ್ ನೋಜಿಕ್‌ರಂತಹ ತತ್ವಶಾಸ್ತ್ರಜ್ಞರ ಬರವಣಿಗೆಗಳಲ್ಲಿ ಅಭಿವೃದ್ಧಿಗೊಂಡ ಸಾಂಪ್ರದಾಯಿಕ ರಾಜಕೀಯ ಅರ್ಥಶಾಸ್ತ್ರದ ಆಧುನಿಕ ರೂಪವಾಗಿದೆ. ಮಾರುಕಟ್ಟೆ ಮತ್ತು ವ್ಯಕ್ತಿಯು ನವಉದಾರವಾದದ ಪ್ರಮುಖ ಆಧಾರಸ್ತಂಭಗಳು. ಸರ್ಕಾರದ ಪಾತ್ರವನ್ನು ಕಡಿಮೆ ಮಾಡುವುದು ನವಉದಾರವಾದದ ಪ್ರಮುಖ ಗುರಿಯಾಗಿದ್ದು; ಅನಿಯಂತ್ರಿತ ಮಾರುಕಟ್ಟೆ ಬಂಡವಾಳಶಾಹಿಯು ದಕ್ಷತೆ, ಬೆಳವಣಿಗೆ ಹಾಗೂ ವ್ಯಾಪಕವಾದ ಸಮೃದ್ಧಿಯನ್ನು ತಂದುಕೊಡುತ್ತದೆಂಬ ನಂಬಿಕೆಯನ್ನು ಇದು ಒಳಗೊಂಡಿತ್ತು. ಈ ದೃಷ್ಟಿಕೋನದಲ್ಲಿ; ರಾಜ್ಯದ ಅಗೋಚರ ಪ್ರಭಾವವು ಉಪಕ್ರಮವನ್ನು ದುರ್ಬಲಗೊಳಿಸುತ್ತದೆ ಹಾಗೂ ಉದ್ಯಮಶೀಲತೆಯನ್ನು ನಿರುತ್ತೇಜನಗೊಳಿಸುತ್ತದೆ. ಸರ್ಕಾರವು ಎಷ್ಟೇ ಒಳ್ಳೆಯ ಉದ್ದೇಶವನ್ನು ಹೊಂದಿದ್ದರೂ, ಅದು ಮನುಷ್ಯನ ವ್ಯವಹಾರಗಳ ಮೇಲೆ ಸ್ಥಿರಸ್ವರೂಪದ ವಿನಾಶಕಾರಿ ಪರಿಣಾಮವನ್ನು ಹೊಂದಿರುತ್ತದೆ. ಮಾಲೀಕತ್ವದ ರಾಜಕೀಯ ಮತ್ತು ರಾಜ್ಯ ಉದ್ಯಮಶೀಲತೆ ಅಥವಾ ರಾಷ್ಟ್ರೀಕರಣಕ್ಕಿಂತ ಹೆಚ್ಚಿನ ಆದ್ಯತೆಯನ್ನು ಖಾಸಗಿ ಉದ್ಯಮಶೀಲತೆಗೆ ನೀಡುವಲ್ಲಿನ ಉದಾರ ಹೊಸ ಹಕ್ಕಿನ ಕಾಳಜಿಯಲ್ಲಿ ಇದು ವ್ಯಕ್ತವಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, 'ಖಾಸಗಿ, ಉತ್ತಮ; ಸಾರ್ವಜನಿಕ, ಕೆಟ್ಟದ್ದು'. ಮಾರ್ಗರೇಟ್ ಥ್ಯಾಚರ್‌ರವರ, 'ಸಮಾಜವೆಂಬುದು ಯಾವುದೂ ಇಲ್ಲ, ಕೇವಲ ವ್ಯಕ್ತಿಗಳು ಹಾಗೂ ಅವರ ಕುಟುಂಬಗಳು ಮಾತ್ರ ಇರುತ್ತವೆ' ಎಂಬ ಜನಪ್ರಿಯ ನಿಶ್ಚಿತ ಹೇಳಿಕೆಯಲ್ಲಿ ವ್ಯಕ್ತವಾದಂತೆ; ಇಂತಹ ವಿಚಾರಗಳು ಅಶಿಷ್ಟ ವ್ಯಕ್ತಿವಾದದ ರೂಪದಲ್ಲಿ ಕಂಡುಬರುತ್ತವೆ. 'ನ್ಯಾನಿ ರಾಜ್ಯ'ವು (Nanny State) ಅವಲಂಬನೆಯ ಸಂಸ್ಕೃತಿಯನ್ನು ಬೆಳೆಸುತ್ತದೆ ಹಾಗೂ

ಮಾರುಕಟ್ಟೆಯಲ್ಲಿ ಆಯ್ಕೆಯ ಸ್ವಾತಂತ್ರ್ಯವೆಂದು ಗ್ರಹಿಸಲ್ಪಟ್ಟ ಸ್ವಾತಂತ್ರ್ಯವನ್ನು ಕಡೆಗಣಿಸುತ್ತದೆ. ಇದಕ್ಕೆ ಬದಲಾಗಿ, ಸ್ವಸಹಾಯ, ವೈಯಕ್ತಿಕ ಜವಾಬ್ದಾರಿ ಹಾಗೂ ಉದ್ಯಮಶೀಲತೆಯಲ್ಲಿ ವಿಶ್ವಾಸವಿಡಲಾಗುತ್ತದೆ. ಜಾಗತೀಕರಣದ ಪ್ರಕ್ರಿಯೆಯ ಮೂಲಕ ಇಂತಹ ವಿಚಾರಗಳನ್ನು ವ್ಯಾಪಕವಾಗಿ ಪ್ರಚಾರಗೊಳಿಸುವಂತೆ ಕಂಡುಬರುತ್ತದೆ. ಇದನ್ನೇ ಕೆಲವರು ನವಉದಾರ ಜಾಗತೀಕರಣವಾಗಿ ಕಾಣುತ್ತಾರೆ.

---

**ನ್ಯಾನಿ ಸ್ಟೇಟ್ (Nanny State)**: ವ್ಯಾಪಕವಾದ ಸಾಮಾಜಿಕ ಜವಾಬ್ದಾರಿಗಳಿರುವ ಒಂದು ರಾಜ್ಯ; ಈ ಪದವು; ಯೋಗಕ್ಷೇಮ ಕಾರ್ಯಕ್ರಮಗಳು ವ್ಯಕ್ತಿಗೆ ಅಸಮರ್ಥನೀಯ ಹಾಗೂ ಅಗೌರವ ತರುವಂಥವು ಎಂಬ ಅರ್ಥವನ್ನು ನೀಡುತ್ತದೆ.

---

**ನವಸಂಪ್ರದಾಯವಾದ (Neoconservatism):** ನವಸಂಪ್ರದಾಯವಾದವು ಹತ್ತೊಂಬತ್ತನೆ ಶತಮಾನದ ಸಾಂಪ್ರದಾಯಿಕ ಸಾಮಾಜಿಕ ತತ್ವಗಳನ್ನು ಪುನರ್‌ಪ್ರತಿಪಾದಿಸುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ; ಅಧಿಕಾರವನ್ನು ಪುನರ್‌ಸ್ಥಾಪಿಸಿ, ಮುಖ್ಯವಾಗಿ ಕುಟುಂಬ, ಧರ್ಮ ಹಾಗೂ ರಾಷ್ಟ್ರಕ್ಕೆ ಸಂಬಂಧಿಸಿದ ಸಾಂಪ್ರದಾಯಿಕ ಮೌಲ್ಯಗಳಿಗೆ ಹಿಂತಿರುಗುವುದನ್ನು ಹೊಸ ಹಕ್ಕು ಇಚ್ಛಿಸುತ್ತದೆ. ಅಧಿಕಾರವು ಸಾಮಾಜಿಕ ಸ್ಥಿರತೆಯನ್ನು ಖಾತರಿಪಡಿಸುತ್ತದೆಂದು ಪರಿಗಣಿಸಲಾಗುತ್ತದೆ. ಹಂಚಿಕೊಂಡ ಮೌಲ್ಯಗಳು ಮತ್ತು ಸಾಮಾನ್ಯ ಸಂಸ್ಕೃತಿಯು ಸಾಮಾಜಿಕ ಒಗ್ಗಟ್ಟನ್ನು ಹುಟ್ಟುಹಾಕುವ ಮೂಲಕ ನಾಗರಿಕ ಅಸ್ತಿತ್ವವನ್ನು ಸಾಧ್ಯವಾಗಿಸುತ್ತವೆ ಎಂಬ ನಂಬಿಕೆಯ ಆಧಾರದಲ್ಲಿ ಇದು ಶಿಸ್ತು ಹಾಗೂ ಗೌರವವನ್ನು ಸೃಷ್ಟಿಸುತ್ತದೆ. ಆದ್ದರಿಂದ 1960ರ ದಶಕದಲ್ಲಿ ಮೌಲ್ಯಗಳೆಂದು ಪರಿಗಣಿಸಲಾಗುತ್ತಿದ್ದ ಅನುಮೋದನತ್ವ, ಸ್ವಯಂಆರಾಧನೆ ಹಾಗೂ 'ತನ್ನ ಕೆಲಸವನ್ನು ತಾನೇ ಮಾಡಿಕೊಳ್ಳುವ' ಪ್ರಕ್ರಿಯೆಗಳು ನವ ಸಂಪ್ರದಾಯವಾದದ ಶತೃಗಳು. ವಾಸ್ತವವಾಗಿ, ಅಮೇರಿಕಾದಲ್ಲಿ ತಮ್ಮನ್ನು ತಾವು ನವಉದಾರವಾದಿಗಳಂತೆ ಪ್ರತಿಬಿಂಬಿಸಿಕೊಳ್ಳುವವರು ಕೆನಡಿ–ಜಾನ್‌ಸನ್ ಯುಗದ ಪ್ರಗತಿಪರ ಸುಧಾರಣೆಗಳಿಂದ ಭ್ರಮನಿರಸನಗೊಂಡ ಈ ಹಿಂದಿನ ಉದಾರವಾದಿಗಳು. ಬಹುಸಂಸ್ಕೃತಿಯ ಹಾಗೂ ಬಹುಧರ್ಮೀಯ ಸಮಾಜಗಳು ಸಂಘರ್ಷಗಳಿಂದ ಕೂಡಿದ್ದು, ಆಂತರಿಕವಾಗಿ ಅಸ್ಥಿರವಾಗಿವೆಯೆಂಬ ಆಧಾರದಲ್ಲಿ ಅವುಗಳ ಉದಯವನ್ನು ಕುರಿತ ಕಾಳಜಿಯುಕ್ತ ಅವಲೋಕನವು ನವಸಂಪ್ರದಾಯವಾದದ ಮತ್ತೊಂದು ಪ್ರವೃತ್ತಿಯಾಗಿದೆ. ಬಹುಸಂಸ್ಕೃತಿವಾದ ಹಾಗೂ ವಿಶ್ವಸಂಸ್ಥೆ ಮತ್ತು ಯೂರೋಪಿಯನ್ ಯೂನಿಯನ್‌ಗಳಂತಹ ಅಂತಾರಾಷ್ಟ್ರೀಯ ಸಂಸ್ಥೆಗಳ ಪ್ರಭಾವವು ಹೆಚ್ಚಾಗುತ್ತಿರುವ ಬಗ್ಗೆ ಸಂಶಯಾತ್ಮಕವಾಗಿರುವ ಸಂಕುಚಿತ ರೂಪದ ರಾಷ್ಟ್ರೀಯತೆಯೊಂದಿಗೆ ಸಂಬಂಧ ಕಲ್ಪಿಸುವ ಪ್ರವೃತ್ತಿಯನ್ನು ಈ ನಿಲುವು ಹೊಂದಿದೆ. ನವಸಂಪ್ರದಾಯವಾದವು ಮುಖ್ಯವಾಗಿ ಅಮೇರಿಕಾದಲ್ಲಿ ಜಾರ್ಜ್ ಬುಷ್ ಜೂನಿಯರ್‌ರವರ ಆಡಳಿತದಲ್ಲಿ ವಿದೇಶಾಂಗ ನೀತಿಯ ವಿಭಿನ್ನ ದೃಷ್ಟಿಕೋನವಾಗಿ ಅಭಿವೃದ್ಧಿಯಾಯಿತು. ಭಾಗಶಃ ಸೈನ್ಯವು ಹೇರಿದ 'ಆಡಳಿತ ಬದಲಾವಣೆ'ಯ ಮೂಲಕ ಅಮೇರಿಕಾದ ಜಾಗತಿಕ ಪ್ರಾಬಲ್ಯವನ್ನು ಬಲಪಡಿಸುವ ಪ್ರಯತ್ನಗಳೊಂದಿಗೆ ಇದಕ್ಕೆ ಸಂಬಂಧವನ್ನು ಕಲ್ಪಿಸಲಾಗಿದೆ.

### ಫ್ರೈಡ್‌ರಿಕ್ ವಾನ್ ಹಯೆಕ್ (1899–1992)

ಆಸ್ಟ್ರಿಯಾದ ಅರ್ಥಶಾಸ್ತ್ರಜ್ಞ ಹಾಗೂ ರಾಜಕೀಯ ಚಿಂತಕ. ಹಯೆಕ್ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್, ಚಿಕಾಗೊ, ಫ್ರೀಬರ್ಗ್ ಹಾಗೂ ಸಾಲ್ಜ್‌ಬರ್ಗ್ ವಿಶ್ವವಿದ್ಯಾನಿಲಯಗಳಲ್ಲಿ ಬೋಧಿಸಿದ ವಿದ್ವಾಂಸ. 1974ರಲ್ಲಿ ಅರ್ಥಶಾಸ್ತ್ರ ವಿಷಯದಲ್ಲಿ ನೊಬೆಲ್ ಪಾರಿತೋಷಕ ಪಡೆದರು. 'ಆಸ್ಟ್ರಿಯನ್ ಸ್ಕೂಲ್' ಎಂದು ಕರೆಯಲ್ಪಡುವ ಆರ್ಥಿಕ ಚಿಂತನೆಯ ಪ್ರತಿಪಾದಕರಾಗಿದ್ದರು. ಹಯೆಕ್ ವ್ಯಕ್ತಿವಾದ ಹಾಗೂ ಮಾರುಕಟ್ಟೆ ವ್ಯವಸ್ಥೆಯಲ್ಲಿ ದೃಢವಾದ ವಿಶ್ವಾಸ ಹೊಂದಿದ್ದರು ಹಾಗೂ ಸಮಾಜವಾದದ ನಿರ್ದಯ ಟೀಕಾಕಾರಾಗಿದ್ದರು. ಇವರ ಮೇರು ಕೃತಿ 'ದಿ ರೋಡ್ ಟು ಸರ್ಫ್‌ಡಮ್' (1948) ಆರ್ಥಿಕ ಹಸ್ತಕ್ಷೇಪವಾದದ ಮೇಲೆ ದಾಳಿ ಮಾಡಿತು. ಇವರ ನಂತರದ ಕೃತಿಗಳಾದ 'ದಿ ಕಾನ್‌ಸ್ಟಿಟ್ಯೂಷನ್ ಆಫ್ ಲಿಬರ್ಟಿ' (1960) ಹಾಗೂ 'ಲಾ, ಲೆಜಿಸ್ಲೇಷನ್ ಅಂಡ್ ಲಿಬರ್ಟಿ'ಗಳಲ್ಲಿ (1979) ಹಯೆಕ್, ರಾಜಕೀಯ ತತ್ವಶಾಸ್ತ್ರದಲ್ಲಿ ಸಿದ್ಧಾಂತಗಳನ್ನು ಅಭಿವೃದ್ಧಿಪಡಿಸಿದರು. ಹಯೆಕ್‌ರ ಬರವಣಿಗೆಗಳು ಉದಾರ ಮತ್ತು ಸಾಂಪ್ರದಾಯಿಕ ಅಂಶಗಳನ್ನು ಒಂದುಗೂಡಿಸಿದವು ಹಾಗೂ ಹೊಸ ಹಕ್ಕಿನ ಉಗಮದ ಮೇಲೆ ಗಣನೀಯವಾದ ಪರಿಣಾಮವನ್ನು ಬೀರಿದವು.

## ಸಮಾಜವಾದ (Socialism)

ಸಮಾಜವಾದಿ ವಿಚಾರಗಳು ಹದಿನೇಳನೆ ಶತಮಾನದ 'ಸಮತಾವಾದಿಗಳು ಹಾಗೂ ಅನ್ವೇಷಕರಲ್ಲಿ' (ಲೆವಲರ್ಸ್ ಹಾಗೂ ಡಿಗ್ಗರ್ಸ್) ಅಥವಾ ಥಾಮಸ್ ಮೂರ್‌ನ 'ಯುಟೋಪಿಯಾ' ([1516] 1965) ಅಥವಾ ಪ್ಲೇಟೋರ 'ರಿಪಬ್ಲಿಕ್'ಗಳಲ್ಲಿ ಕಂಡುಬಂದರೂ, ಹತ್ತೊಂಭತ್ತನೆ ಶತಮಾನದ ಪ್ರಾರಂಭದವರೆಗೂ ಸಮಾಜವಾದವು ಒಂದು ರಾಜಕೀಯ ಪಂಥವಾಗಿ ರೂಪುಗೊಳ್ಳಲಿಲ್ಲ. ಕೈಗಾರಿಕಾ ಬಂಡವಾಳಶಾಹಿಯ ಉಗಮಕ್ಕೆ ವಿರೋಧವನ್ನು ಸೂಚಿಸುವ ಪ್ರತಿಕ್ರಿಯೆಯಾಗಿ ಇದು ಅಭಿವೃದ್ಧಿಗೊಂಡಿತು. ಕಾರ್ಖಾನೆ ಉತ್ಪಾದನೆಯ ಹರಡುವಿಕೆಯಿಂದ ಅಪಾಯಕ್ಕೊಳಗಾದ ಕುಶಲಕರ್ಮಿಗಳು ಹಾಗೂ ಕಸುಬುಗಾರರ ಹಿತಾಸಕ್ತಿಯನ್ನು ಇದು ವ್ಯಕ್ತಪಡಿಸಿತು, ಆದರೆ ಇದನ್ನು ಹೆಚ್ಚಾಗುತ್ತಿದ್ದ ಕೈಗಾರಿಕಾ ದುಡಿಯುವ ವರ್ಗಕ್ಕೆ (ಇವರನ್ನು ಕೈಗಾರಿಕೀಕರಣದ ಪ್ರಾರಂಭದ 'ಕಾರ್ಖಾನೆ ಮೇವು' ಎನ್ನಲಾಗುತ್ತದೆ) ಶೀಘ್ರದಲ್ಲೇ ಸಂಪರ್ಕಿಸಲಾಯಿತು. ಇದರ ಅತ್ಯಂತ ಪ್ರಾರಂಭಿಕ ರೂಪಗಳಲ್ಲಿ ಸಮಾಜವಾದವು ಮೂಲಭೂತವಾದಿ, ಕಾಲ್ಪನಿಕ ಆದರ್ಶಾತ್ಮಕ ಹಾಗೂ ಕ್ರಾಂತಿಕಾರಕ ಲಕ್ಷಣವನ್ನು ಹೊಂದಿತ್ತು. ಇದರ ಗುರಿ ಮಾರುಕಟ್ಟೆ ವಿನಿಮಯ ಆಧಾರಿತವಾಗಿದ್ದ ಬಂಡವಾಳಶಾಹಿ ಆರ್ಥಿಕತೆಯನ್ನು ನಿರ್ಮೂಲನೆ ಮಾಡಿ, ಅದರ ಸ್ಥಾನದಲ್ಲಿ ಸಾಮಾನ್ಯ ಒಡೆತನದ ತತ್ವದ ಮೇಲೆ ಗುಣಾತ್ಮಕವಾಗಿ ವಿಭಿನ್ನವಾದ ಸಮಾಜವಾದಿ ಸಮಾಜವನ್ನು ನಿರ್ಮಿಸುವುದಾಗಿತ್ತು. ಕಾರ್ಲ್‌ಮಾರ್ಕ್ಸ್, ಈ ಮಾದರಿಯ ಸಮಾಜವಾದದ ಅತ್ಯಂತ ಪ್ರಭಾವಶಾಲಿ ರಾಯಭಾರಿಯಾಗಿದ್ದರು. ಇವರ ವಿಚಾರಗಳು ಇಪ್ಪತ್ತನೆ ಶತಮಾನದ ಕಮ್ಯೂನಿಸಮ್‌ಗೆ ಅಡಿಪಾಯಗಳನ್ನು ಒದಗಿಸಿದವು.

ಹತ್ತೊಂಭತ್ತನೆ ಶತಮಾನದ ಕೊನೆಯ ಭಾಗದಿಂದ ಸುಧಾರಣಾವಾದಿ ಸಾಮಾಜಿಕ ಸಂಪ್ರದಾಯದ ಉಗಮವಾಯಿತು. ಕೆಲಸದ ಪರಿಸ್ಥಿತಿಗಳಲ್ಲಿ ಹಾಗೂ ಕೂಲಿಗಳಲ್ಲಿ ಸುಧಾರಣೆ, ಕಾರ್ಮಿಕ ಸಂಘಟನೆಗಳು ಮತ್ತು ಸಮಾಜವಾದಿ ರಾಜಕೀಯ ಪಕ್ಷಗಳ ಬೆಳವಣಿಗೆಯ ಮೂಲಕ

ದುಡಿಯುವ ವರ್ಗವು ಬಂಡವಾಳಶಾಹಿ ಸಮಾಜದೊಂದಿಗೆ ಕ್ರಮೇಣ ಮಿಳಿತವಾಗುವುದನ್ನು ಇದು ಪ್ರತಿಬಿಂಬಿಸಿತು. ಈ ಮಾದರಿಯ ಸಮಾಜವಾದವು 'ಸಂಸದೀಯ ಮಾರ್ಗ'ವನ್ನು ಅಳವಡಿಸಿಕೊಳ್ಳುವ ಮೂಲಕ ಸಮಾಜವಾದದೆಡೆಗಿನ ಶಾಂತಿಯುತ, ಅನುಕ್ರಮಿಕ ಹಾಗೂ ಕಾನೂನಾತ್ಮಕ ಪರಿವರ್ತನೆಯ ಸಾಧ್ಯತೆಯನ್ನು ಘೋಷಿಸಿತು. ಸುಧಾರಣಾವಾದಿ ಸಮಾಜವಾದವು ಎರಡು ಮೂಲಗಳಿಂದ ತನ್ನ ವಿಚಾರಗಳನ್ನು ಪಡೆದುಕೊಂಡಿತು. ಮೊದಲನೆಯದು, ರಾಬರ್ಟ್ ಒವೆನ್ (1771–1858), ಚಾರ್ಲ್ಸ್ ಫೋರಿಯರ್ (1772–1837) ಹಾಗೂ ವಿಲಿಯಮ್ ಮಾರಿಸ್ (1834–96) ಅವರಂತಹ ಚಿಂತಕರು ಪ್ರತಿಪಾದಿಸಿದ ಮಾನವೀಯ ಸಂಪ್ರದಾಯದ ನೈತಿಕ ಸಮಾಜವಾದ. ಎಡ್ವರ್ಡ್ ಬರ್ನ್‌ಸ್ಟೀನ್ ಪ್ರಮುಖವಾಗಿ ಅಭಿವೃದ್ಧಿಪಡಿಸಿದ ಪರಿಷ್ಕೃತ ಮಾರ್ಕ್ಸಿಸಮ್ (revisionist Marxism) ರೂಪದ ಸಮಾಜವಾದವು ಎರಡನೆಯದು. ಹೀಗೆ ಇಪ್ಪತ್ತನೆ ಶತಮಾನದ ಬಹುಭಾಗದಲ್ಲಿ ಸಮಾಜವಾದಿ ಚಳುವಳಿಯು ಎರಡು ಪ್ರತಿಸ್ಪರ್ಧಿ ಗುಂಪುಗಳ ನಡುವೆ ವಿಭಜನೆಗೊಂಡಿತ್ತು. ಲೆನಿನ್ ಹಾಗೂ ಬೊಲ್ಶೆವಿಕ್ಸ್‌ನ ಉದಾಹರಣೆಗಳನ್ನು ಅನುಸರಿಸಿದ ಕ್ರಾಂತಿಕಾರಿ ಸಮಾಜವಾದಿಗಳು ತಮ್ಮನ್ನು 'ಕಮ್ಯೂನಿಸ್ಟ್‌ಗಳೆಂದು' ಕರೆದುಕೊಂಡರು. ಸಾಂವಿಧಾನಿಕ ರಾಜನೀತಿಯನ್ನು ಪಾಲಿಸಿದ ಸುಧಾರಣಾವಾದಿ ಸಮಾಜವಾದಿಗಳು 'ಸಾಮಾಜಿಕ ಪ್ರಜಾಪ್ರಭುತ್ವ'ವೆಂದು ಕರೆಯಲ್ಪಡುತ್ತಿದ್ದ ಮಾದರಿಯನ್ನು ತಮ್ಮದಾಗಿಸಿಕೊಂಡರು. ಈ ಪ್ರತಿಸ್ಪರ್ಧೆಯು ಸಮಾಜವಾದವನ್ನು ಸಾಧಿಸಲು ಅನುಸರಿಸಬೇಕಾದ ಮಾರ್ಗಗಳಷ್ಟೇ ಅಲ್ಲದೆ, ಸಮಾಜವಾದಿ ಗುರಿಯ ಸ್ವರೂಪದ ಮೇಲೂ ತನ್ನ ಗಮನವನ್ನು ಹರಿಸಿತು. ಸಾಮಾಜಿಕ ಪ್ರಜಾಪ್ರಭುತ್ವವಾದಿಗಳು ಸಾಮಾನ್ಯ ಒಡೆತನ ಹಾಗೂ ಯೋಜನೆಗಳಂತಹ ಮೂಲಭೂತವಾದಿ ತತ್ವಗಳಿಗೆ ತಮ್ಮ ಬೆನ್ನು ತಿರುಗಿಸಿದರು. ಇವರು ಯೋಗಕ್ಷೇಮ, ಮರುಹಂಚಿಕೆ ಮತ್ತು ಆರ್ಥಿಕ ನಿರ್ವಹಣೆಯ ನಿಟ್ಟಿನಲ್ಲಿ ಸಮಾಜವಾದವನ್ನು ಪುನರ್‌ಸ್ಥಾಪಿಸಿದರು. ಆದಾಗ್ಯೂ ಈ ಎರಡೂ ರೂಪದ ಸಮಾಜವಾದವು ಇಪ್ಪತ್ತನೆ ಶತಮಾನದ ಅಂತ್ಯಭಾಗದಲ್ಲಿ ಬಿಕ್ಕಟ್ಟನ್ನು ಅನುಭವಿಸಿತು. ಇದನ್ನು 'ಸಮಾಜವಾದದ ಸಾವು' ಹಾಗೂ ಸಮಾಜವಾದೋತ್ತರ ಸಮಾಜದ ಉದಯ ಎಂದು ಘೋಷಿಸಲು ಕೆಲವರನ್ನು ಇದು ಉತ್ತೇಜಿಸಿತು. 1989–91ರಲ್ಲಿ ಪೂರ್ವ ಯೂರೋಪಿನ ಕ್ರಾಂತಿಗಳು ಉಂಟುಮಾಡಿದ ಕಮ್ಯೂನಿಸಮ್‌ನ ಅವನತಿಯು ಈ ಪ್ರಕ್ರಿಯೆಯ ಅತ್ಯಂತ ನಾಟಕೀಯ ಘಟನೆಯಾಗಿತ್ತು. ಆದರೆ, ಸಾಂಪ್ರದಾಯಿಕ ತತ್ವಗಳಿಂದ ಸಾಮಾಜಿಕ ಪ್ರಜಾಪ್ರಭುತ್ವದ ಹಿಂಸರಿಯುವಿಕೆಯೂ ಸಹಾ ಮುಂದುವರಿಯಿತು. ಕೆಲವರು ವಾದಿಸಿದಂತೆ, ಇದು ಆಧುನಿಕ ಉದಾರವಾದದಿಂದ ಸಮಾಜವಾದವನ್ನು ಗುರುತಿಸಲಾಗದಂತೆ ಮಾಡಿತು.

**ಅನುಮೋದನತ್ವ (Permissiveness)**: ಜನರು ತಮ್ಮದೇ ಆದ ನೈತಿಕ ಆಯ್ಕೆಗಳನ್ನು ಮಾಡಿಕೊಳ್ಳಲು ಅನುವು ಮಾಡಿಕೊಡುವ ಇಚ್ಛೆ; ಅನುಮೋದನತ್ವವು, ಅಧಿಕೃತ ಮೌಲ್ಯಗಳಿಲ್ಲವೆಂಬುದನ್ನು ಸೂಚಿಸುತ್ತದೆ.

**ಪರಿಷ್ಕರಣವಾದ (Revisionism)**: ಮೂಲ ಅಥವಾ ಸ್ಥಾಪಿತ ನಂಬಿಕೆಗಳ ಮಾರ್ಪಡಿಸುವಿಕೆ; ತತ್ವದ ತ್ಯಜಿಸುವಿಕೆ ಅಥವಾ ನಿಶ್ಚಿತಾಭಿಪ್ರಾಯದ ನಷ್ಟವೆಂದು ಪರಿಷ್ಕರಣವಾದವನ್ನು ಅರ್ಥೈಸಬಹುದು.

**ಸಂಪ್ರದಾಯವಾದ: ಪ್ರಮುಖ ವಿಚಾರಗಳು**

**ಸಂಪ್ರದಾಯ (Tradition):** ಸಂಪ್ರದಾಯವಾದ ಚಿಂತನೆಯ ಕೇಂದ್ರೀಯ ವಿಷಯವಾದ 'ಸಂರಕ್ಷಿಸುವ ಅಪೇಕ್ಷೆ'ಯು ಕಾಲಾಂತರದಿಂದ ಅಸ್ತಿತ್ವದಲ್ಲಿರುವ ಸಂಪ್ರದಾಯದ ಗ್ರಹಿಸಲ್ಪಟ್ಟ ಗುಣಗಳು, ಸ್ಥಾಪಿತ ಸಂಪ್ರದಾಯಗಳು ಹಾಗೂ ಸಂಸ್ಥೆಗಳ ಬಗೆಗಿನ ಗೌರವದೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದೆ. ಈ ದೃಷ್ಟಿಯಿಂದ ನೋಡಿದಾಗ, ಭೂತಕಾಲದ ಸಂಗ್ರಹಿತ ಜ್ಞಾನ ಹಾಗೂ ಸಮಯದ ಪರೀಕ್ಷೆಗೆ ಒಳಗಾದ ಸಂಸ್ಥೆಗಳು ಮತ್ತು ಆಚರಣೆಗಳನ್ನು ಸಂಪ್ರದಾಯವು ಪ್ರತಿಬಿಂಬಿಸುತ್ತದೆ. ಜೀವನದ ಅನುಕೂಲಕ್ಕಾಗಿ ಹಾಗೂ ಮುಂಬರುವ ಜನಾಂಗಗಳಿಗಾಗಿ ಇದನ್ನು ಸಂರಕ್ಷಿಸತಕ್ಕದ್ದು. ಸಂಪ್ರದಾಯವು ಸಾಮಾಜಿಕ ಹಾಗೂ ಐತಿಹಾಸಿಕ ಸಂಬಂಧದ ಭಾವನೆಯನ್ನು ಉತ್ತೇಜಿಸುವ ಗುಣವನ್ನು ಸಹಾ ಹೊಂದಿದೆ.

**ವಾಸ್ತವಿಕವಾದ(Pragmatism):** ನಾವು ಜೀವಿಸುವ ವಿಶ್ವದ ಅಮಿತವಾದ ಸಂಕೀರ್ಣತೆಯಿಂದಾಗಿ ಉದ್ಭವವಾಗುವ ಮನುಷ್ಯನ ವೈಚಾರಿಕತೆಯ ಮಿತಿಗಳತ್ತ ಸಂಪ್ರದಾಯವಾದಿಗಳು ಪರಂಪರೆಯಿಂದಲೂ ನಮ್ಮ ಗಮನ ಸೆಳೆದಿದ್ದಾರೆ. ಅಮೂರ್ತ ತತ್ವಗಳು ಹಾಗೂ ಚಿಂತನೆಯ ವ್ಯವಸ್ಥೆಗಳನ್ನು ನಂಬದೆ, ಇದಕ್ಕೆ ಬದಲಾಗಿ ಅನುಭವ, ಇತಿಹಾಸ ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ವಾಸ್ತವಿಕವಾದದ ಮೇಲೆ ವಿಶ್ವಾಸವಿಡಲಾಗುತ್ತದೆ. ಪ್ರಾಯೋಗಿಕ ಸಂದರ್ಭಗಳು ಹಾಗೂ ಪ್ರಾಯೋಗಿಕ ಗುರಿಗಳು, ಅಂದರೆ 'ಯಾವುದು ಸಾಧ್ಯ ಎಂಬುದರ ಗ್ರಹಿಕೆಯು ನಮ್ಮ ಕ್ರಿಯೆಯನ್ನು ರೂಪಿಸಬೇಕೆಂಬ ನಂಬಿಕೆಯು ವಾಸ್ತವಿಕವಾದವಾಗಿದೆ. ಸಂಪ್ರದಾಯವಾದಿಗಳು ತಮ್ಮ ಸ್ವಂತ ನಂಬಿಕೆಗಳನ್ನು ಒಂದು ಸಿದ್ಧಾಂತವೆಂಬುದಕ್ಕೆ ಬದಲಾಗಿ ಮನೋಧೋರಣೆ ಅಥವಾ ಜೀವನದ ದೃಷ್ಟಿಕೋನವೆಂದು ವಿವರಿಸಲು ಆದ್ಯತೆ ನೀಡುತ್ತಾರೆ. ಇದು ತತ್ವರಹಿತ ಅವಕಾಶವಾದವೆಂಬ ಕಲ್ಪನೆಯನ್ನು ಅವರು ತಿರಸ್ಕರಿಸುತ್ತಾರೆ.

**ಮಾನವ ಅಪರಿಪೂರ್ಣತೆ (Human Imperfection)**

ಮಾನವನ ಸ್ವರೂಪದ ಕುರಿತಾದ ಸಾಂಪ್ರದಾಯಿಕ ದೃಷಿಕೋನವು ಬಹುಮಟ್ಟಿಗೆ ನಿರಾಶಾವಾದವಾಗಿದೆ. ಈ ದೃಷ್ಟಿಕೋನದ ಪ್ರಕಾರ, ಮಾನವರು ಸೀಮಾಬದ್ಧರು. ಅವರು ಅವಲಂಬಿಗಳು ಹಾಗೂ ರಕ್ಷಣೆ ಬಯಸುವ ಜೀವಿಗಳಾಗಿದ್ದು ಪರಿಚಿತ ಮತ್ತು ಪ್ರಯತ್ನಿಸಲ್ಪಟ್ಟ ಹಾಗೂ ಪರೀಕ್ಷೆಗೊಳಪಟ್ಟ ವಿಷಯಗಳತ್ತ ವಾಲುತ್ತಾರಲ್ಲದೆ ಸ್ಥಿರ ಮತ್ತು ಸುವ್ಯವಸ್ಥಿತವಾದ ಸಮುದಾಯಗಳಲ್ಲಿ ಬದುಕಲಿಚ್ಛಿಸುತ್ತಾರೆ. ಇದರ ಜೊತೆಗೆ ವ್ಯಕ್ತಿಗಳು ನೈತಿಕವಾಗಿ ಭ್ರಷ್ಟರಾಗಿದ್ದು; ಸ್ವಾರ್ಥ, ದುರಾಸೆ, ಹಾಗೂ ಅಧಿಕಾರ ದಾಹಗಳಿಂದ ಕಳಂಕಿತರಾಗಿರುತ್ತಾರೆ. ಹೀಗಾಗಿ, ಅಪರಾಧ ಮತ್ತು ಅವ್ಯವಸ್ಥೆಗಳ ಬೇರುಗಳು ಸಮಾಜದ ಬದಲಾಗಿ ವ್ಯಕ್ತಿಗಳಲ್ಲಿ ಬೇರೂರಿರುತ್ತವೆ. ಆದ್ದರಿಂದ ಸುವ್ಯವಸ್ಥೆಯ ನಿರ್ವಹಣೆಯು ಪ್ರಬಲ ಸರ್ಕಾರ, ಕಟ್ಟುನಿಟ್ಟಾದ ಕಾನೂನುಗಳ ಜಾರಿ ಹಾಗು ಕಠಿಣ ದಂಡಗಳನ್ನು ಬಯಸುತ್ತದೆ.

**ಘಟಕವಾದ (Organicism)**: ಸಮಾಜವನ್ನು ಮಾನವನ ಜಾಣ್ಮೆಯ ಉತ್ಪನ್ನವಾದ ಕಲಾಕೃತಿಯಾಗಿ ನೋಡುವುದಕ್ಕೆ ಬದಲಾಗಿ, ಅದನ್ನು ಒಂದು ಪರಿಪೂರ್ಣ ಸಜೀವ ಘಟಕವೆಂದು ಸಂಪ್ರದಾಯವಾದಿಗಳು ಭಾವಿಸುತ್ತಾರೆ. ಸಮಾಜವು ವಿವಿಧ ಸಂಸ್ಥೆಗಳು ಅಥವಾ 'ಸಮಾಜದ ಚೌಕಟ್ಟು'ಗಳಿಂದ (ಕುಟುಂಬಗಳು, ಸ್ಥಳೀಯ ಸಮುದಾಯಗಳು, ರಾಷ್ಟ್ರ ಇತ್ಯಾದಿ) ಕೂಡಿದ ಸ್ವಾಭಾವಿಕ ಅವಶ್ಯಕತೆಯಿಂದ ಸಂರಚಿತವಾಗಿದ್ದು, ಇವು ಸಮಾಜದ ಆರೋಗ್ಯ ಹಾಗೂ ಸ್ಥಿರತೆಗೆ ಕಾರಣವಾಗುತ್ತವೆ. ಪೂರ್ಣ ಸಮಾಜವು ಅದರ ವೈಯಕ್ತಿಕ ಭಾಗಗಳ ಮೊತ್ತಕ್ಕಿಂತ ಹೆಚ್ಚಾಗಿರುತ್ತದೆ. ಸಮುದಾಯದ ನಿರ್ವಹಣೆ ಹಾಗೂ ಸಾಮಾಜಿಕ ಸಂಬದ್ಧತೆಗೆ ಹಂಚಿಕೊಂಡ (ಅನೇಕ ಸಲ, ಸಾಂಪ್ರದಾಯಿಕ) ಮೌಲ್ಯಗಳು ಹಾಗೂ ಸಾಮಾನ್ಯ ಸಂಸ್ಕೃತಿಯು ಪ್ರಮುಖವೆಂದು ಪರಿಗಣಿಸಲಾಗುತ್ತದೆ.

**ಶ್ರೇಣಿ ವ್ಯವಸ್ಥೆ (Hierarchy)**: ಸಾಂಪ್ರದಾಯಿಕ ದೃಷ್ಟಿಯಲ್ಲಿ, ಒಂದು ಜೈವಿಕ ಸಮಾಜದಲ್ಲಿನ ಸಾಮಾಜಿಕ ಸ್ಥಾನ ಹಾಗೂ ಅಂತಸ್ತುಗಳ ಶ್ರೇಣೀಕರಣವು ಸ್ವಾಭಾವಿಕ ಹಾಗೂ ಅನಿವಾರ್ಯ. ಇವು ಮಾಲೀಕರು ಮತ್ತು ಕೆಲಸಗಾರರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಹಾಗೂ ಪೋಷಕರು ಮತ್ತು ಮಕ್ಕಳ ವಿವಿಧ ಪಾತ್ರಗಳು ಮತ್ತು ಜವಾಬ್ದಾರಿಗಳನ್ನು ಪ್ರತಿಫಲಿಸುತ್ತವೆ. ಆದಾಗ್ಯೂ, ಈ ದೃಷ್ಟಿಯಿಂದ ನೋಡಿದಾಗ ಶ್ರೇಣಿ ವ್ಯವಸ್ಥೆ ಹಾಗೂ ಅಸಮಾನತೆಗಳು ಸಂಘರ್ಷದ ಉಗಮಕ್ಕೆ ಕಾರಣವಾಗುವುದಿಲ್ಲ. ಏಕೆಂದರೆ ಸಮಾಜವು ಪರಸ್ಪರ ಕಟ್ಟುಪಾಡುಗಳು ಹಾಗೂ ಪರಸ್ಪರ ಕರ್ತವ್ಯಗಳಿಂದ ಬಂಧಿಸಲ್ಪಟ್ಟಿದೆ. ವಾಸ್ತವವಾಗಿ ಒಬ್ಬ ವ್ಯಕ್ತಿಯ 'ಜೀವನದಲ್ಲಿನ ನಿಲ್ದಾಣ'ವು ಮುಖ್ಯವಾಗಿ ಅದೃಷ್ಟ ಹಾಗೂ ಹುಟ್ಟಿನ ಆಕಸ್ಮಿಕದಿಂದ ನಿರ್ಧಾರವಾದರೆ, ಶ್ರೀಮಂತರು ಹಾಗೂ ಸೌಲಭ್ಯವಂತರು ನತದೃಷ್ಟರ ಬಗ್ಗೆ ಕಾಳಜಿವಹಿಸುವ ನಿರ್ದಿಷ್ಟ ಜವಾಬ್ದಾರಿಯನ್ನು ಪಡೆದುಕೊಳ್ಳುತ್ತಾರೆ.

**ಅಧಿಕಾರ (Authority)**: ಸಂಪ್ರದಾಯವಾದಿಗಳ ಪ್ರಕಾರ ತಮ್ಮ ಸ್ವಹಿತಾಸಕ್ತಿಗೆ ಸಂಬಂಧಿಸಿದಂತೆ ಬುದ್ಧಿವಂತಿಕೆಯಿಂದ ವರ್ತಿಸಲು ಬೇಕಾದ ತಿಳುವಳಿಕೆ, ಅನುಭವ ಅಥವಾ ಶಿಕ್ಷಣದ ಕೊರತೆಯಿರುವವರಿಗೆ ನಾಯಕತ್ವ, ಮಾರ್ಗದರ್ಶನ ಹಾಗೂ ಬೆಂಬಲವನ್ನು ಒದಗಿಸಲು ಸ್ವಲ್ಪ ಮಟ್ಟಿಗೆ ಅಧಿಕಾರವನ್ನು 'ಮೇಲಿನಿಂದ' ಪ್ರಯೋಗಿಸಲಾಗುತ್ತದೆ (ಇದಕ್ಕೆ ಒಂದು ಉದಾಹರಣೆಯೆಂದರೆ, ಮಕ್ಕಳ ಮೇಲಿನ ಪೋಷಕರ ಅಧಿಕಾರ). 'ಸ್ವಾಭಾವಿಕ ಕುಲೀನ ಪ್ರಭುತ್ವದ' ಕಲ್ಪನೆಯು ಒಂದು ಕಾಲದಲ್ಲಿ ಪ್ರಭಾವಶಾಲಿಯಾಗಿತ್ತಾದರೂ, ಅಧಿಕಾರ ಮತ್ತು ನಾಯಕತ್ವಗಳು ಅನುಭವ ಹಾಗೂ ತರಬೇತಿಯ ಫಲಿತವೆಂಬುದಾಗಿ ಈಗ ಸಾಮಾನ್ಯವಾಗಿ ಭಾವಿಸಲಾಗುತ್ತದೆ. ಅಧಿಕಾರದ ಗುಣವೇನೆಂದರೆ, ಇದು ಸಾಮಾಜಿಕ ಐಕ್ಯತೆಯ ಒಂದು ಮೂಲವಾಗಿದ್ದು, ಜನರಿಗೆ ಅವರು ಯಾರು ಹಾಗೂ ಅವರಿಂದ ಏನನ್ನು ನಿರೀಕ್ಷಿಸಲಾಗುತ್ತದೆಂಬ ಸ್ಪಷ್ಟ ಭಾವವನ್ನುಂಟು ಮಾಡುತ್ತದೆ. ಹೀಗಾಗಿ, ಸ್ವಾತಂತ್ರ್ಯ ಮತ್ತು ಜವಾಬ್ದಾರಿಗಳು ಜೊತೆಯಾಗಿರಬೇಕು; ಆದ್ದರಿಂದ ಇದು ಬಾಧ್ಯತೆಗಳು ಹಾಗೂ ಕರ್ತವ್ಯಗಳ ಇಚ್ಛಾಪೂರ್ವಕ ಒಪ್ಪಿಗೆಯನ್ನು ಒಳಗೊಂಡಿದೆ.

**ಆಸ್ತಿ (Property):** ಸಂಪ್ರದಾಯವಾದಿಗಳು ಆಸ್ತಿಯ ಒಡೆತನವು ಪ್ರಮುಖವಾದುದೆಂದು ಭಾವಿಸುತ್ತಾರೆ. ಏಕೆಂದರೆ, ಇದು ಜನರಿಗೆ ಸುರಕ್ಷತೆಯನ್ನು ನೀಡುವುದರ ಜೊತೆಗೆ ಸರ್ಕಾರದಿಂದ ಸ್ವಲ್ಪಮಟ್ಟಿನ ಸ್ವಾತಂತ್ರ್ಯವನ್ನು ನೀಡುತ್ತದೆ ಹಾಗೂ ಕಾನೂನು ಮತ್ತು ಇತರರ ಆಸ್ತಿಯನ್ನು ಗೌರವಿಸುವುದನ್ನು ಉತ್ತೇಜಿಸುತ್ತದೆ. ಆಸ್ತಿಯು ಜನರ ವ್ಯಕ್ತಿತ್ವದ ಬಾಹ್ಯರೂಪವೂ ಆಗಿದೆ. ಮನೆಗಳು, ಕಾರುಗಳು ಮುಂತಾಗಿ ಅವರು ಏನನ್ನು ಹೊಂದಿರುತ್ತಾರೊ ಅವುಗಳಲ್ಲಿ ಅವರು ತಮ್ಮನ್ನು ತಾವು ಕಾಣುತ್ತಾರೆ. ಆಸ್ತಿಯ ಒಡೆತನವು ಕರ್ತವ್ಯಗಳು ಹಾಗೂ ಹಕ್ಕುಗಳನ್ನು ಒಳಗೊಂಡಿದೆ. ಈ ದೃಷ್ಟಿಯಿಂದ ನೋಡಿದರೆ, ಒಂದು ರೀತಿಯಲ್ಲಿ ನಾವು ಹಿಂದಿನ ತಲೆಮಾರುಗಳಿಂದ ಲಭಿಸಿದ ಅಥವಾ ಮುಂದಿನ ತಲೆಮಾರಿಗೆ ಮೌಲ್ಯಯುತವಾಗಬಹುದಾದ ಆಸ್ತಿಯ ರಕ್ಷಕರಷ್ಟೆ.

**ಸಮಾಜವಾದ : ಪ್ರಮುಖ ವಿಚಾರಗಳು.**

**ಸಮುದಾಯ (Community):** ಒಂದು ಸಾಮಾನ್ಯ ಮಾನವೀಯತೆಯ ಅಸ್ತಿತ್ವದೊಂದಿಗೆ ಸಂಬಂಧವನ್ನು ಹೊಂದಿರುವ ಸಾಮಾಜಿಕ ಜೀವಿಗಳನ್ನಾಗಿ ಮನುಷ್ಯರನ್ನು ನೋಡುವುದು ಸಮಾಜವಾದದ ತಿರುಳಾಗಿದೆ. ಕವಿ ಜಾನ್ ಡಾನ್ ಹೇಳಿರುವಂತೆ 'ಯಾವುದೇ ಮನುಷ್ಯ ತನ್ನಲ್ಲಿ ತಾನೇ ಒಂದು ಸಂಪೂರ್ಣ ದ್ವೀಪವಲ್ಲ; ಪ್ರತಿಯೊಬ್ಬ ಮನುಷ್ಯನೂ ಭೂಖಂಡದ ಒಂದು ತುಣುಕು, ಪ್ರಧಾನದ ಒಂದು ಭಾಗ'. ಇದು ಸಮುದಾಯದ ಮಹತ್ವವನ್ನು ಸೂಚಿಸುತ್ತದೆಯಲ್ಲದೆ, ಸಾಮಾಜಿಕ ಒಡನಾಟ, ಸಾಮಾಜಿಕ ಗುಂಪುಗಳು ಹಾಗೂ ಸಾಮೂಹಿಕ ನಿಕಾಯಗಳ ಸದಸ್ಯತ್ವದ ಮೂಲಕ ವೈಯಕ್ತಿಕ ಅಸ್ಮಿತೆಯು ರೂಪುಗೊಳ್ಳುವ ಪ್ರಮಾಣವನ್ನು ಎತ್ತಿತೋರಿಸುತ್ತದೆ. ಸಮಾಜವಾದಿಗಳು ಪ್ರಕೃತಿಗಿಂತ ಪೋಷಣೆಗೆ ಹಾಗೂ ವ್ಯಕ್ತಿಗಳ ವರ್ತನೆಯನ್ನು ಅಂತರ್ಗತ ಗುಣಗಳಿಗೆ ಬದಲಾಗಿ ಸಾಮಾಜಿಕ ಅಂಶಗಳ ಮೂಲಕ ವಿವರಿಸಲು ಹೆಚ್ಚಿನ ಒತ್ತು ನೀಡುತ್ತಾರೆ.

**ಭ್ರಾತೃತ್ವ (Fraternity):** ಮಾನವರು ಒಂದು ಸಾಮಾನ್ಯವಾದ ಮಾನವೀಯತೆಯನ್ನು ಹಂಚಿಕೊಂಡಿರುವುದರಿಂದಾಗಿ, ಒಡನಾಡಿತನ ಅಥವಾ ಭ್ರಾತೃತ್ವದ ಭಾವನೆಯಿಂದ ಬಂಧಿಸಲ್ಪಟ್ಟಿದ್ದಾರೆ. (ಭ್ರಾತೃತ್ವದ ಸಾಹಿತ್ಯಕ ಅರ್ಥ; ಸಹೋದರತ್ವವಾದರೂ, ಇಲ್ಲಿನ ಸಂದರ್ಭದಲ್ಲಿ ಎಲ್ಲಾ ಮಾನವರನ್ನು ಸ್ವೀಕರಿಸುವುದಾಗಿದೆ). ಪ್ರತಿಸ್ಪರ್ಧೆಗೆ ಬದಲಾಗಿ ಸಹಕಾರಕ್ಕೆ ಹಾಗೂ ವೈಯಕ್ತಿಕತೆಗೆ ಬದಲಾಗಿ ಸಾಮುದಾಯಿಕತೆಗೆ ಆದ್ಯತೆ ನೀಡಲು ಇದು ಸಮಾಜವಾದಿಗಳನ್ನು ಉತ್ತೇಜಿಸುತ್ತದೆ. ಈ ದೃಷ್ಟಿಯಿಂದ ನೋಡಿದರೆ, ತಮ್ಮ ಸಾಮೂಹಿಕ ಶಕ್ತಿಗಳನ್ನು ಸಜ್ಜುಗೊಳಿಸಲು ಹಾಗೂ ಸಮುದಾಯದ ಬಂಧಗಳನ್ನು ಬಲಪಡಿಸಲು ಸಹಕಾರವು ಜನರನ್ನು ಸಕ್ಷಮಗೊಳಿಸಿದರೆ ಸ್ಪರ್ಧೆಯು ಅಸಹನೆ, ಸಂಘರ್ಷ ಹಾಗೂ ವೈರತ್ವವನ್ನು ಹುಟ್ಟುಹಾಕುವ ಮೂಲಕ ವ್ಯಕ್ತಿಗಳು ಒಬ್ಬರ ವಿರುದ್ಧ ಇನ್ನೊಬ್ಬರು ನಿಲ್ಲುವಂತೆ ಮಾಡುತ್ತದೆ.

**ಸಾಮಾಜಿಕ ಸಮಾನತೆ** (Social Equality)**:** ಸಮಾನತೆಯು ಸಮಾಜವಾದದ ಕೇಂದ್ರೀಯ ಮೌಲ್ಯವಾಗಿದೆ. ಸಮಾಜವಾದವನ್ನು ಕೆಲವೊಮ್ಮೆ ಸಮಾನತಾವಾದದ ಒಂದು ರೂಪವಾಗಿ ಬಿಂಬಿಸಲಾಗುತ್ತದೆ. ಸಮಾನತಾವಾದವೆಂದರೆ ಇತರೆ ಮೌಲ್ಯಗಳಿಗಿಂತ ಸಮಾನತೆಯು

ಪ್ರಮುಖವಾದುದೆಂಬ ನಂಬಿಕೆಯಾಗಿದೆ. ನಿರ್ದಿಷ್ಟವಾಗಿ, ಸಮಾಜವಾದಿಗಳು ಸಾಮಾಜಿಕ ಸಮಾನತೆಯ ಪ್ರಾಮುಖ್ಯತೆಗೆ ಒತ್ತು ನೀಡುತ್ತಾರೆ. ಸಾಮಾಜಿಕ ಸಮಾನತೆಯು ಅವಕಾಶದ ಸಮಾನತೆಗಿಂತ ಹೆಚ್ಚಾಗಿ ಫಲಿತಾಂಶದ ಸಮಾನತೆಯಾಗಿದೆ. ವ್ಯಕ್ತಿಗಳನ್ನು ಇತರೆ ಮನುಷ್ಯರೊಡನೆ ಗುರುತಿಸಿಕೊಳ್ಳಲು ಉತ್ತೇಜಿಸುವ ಸಾಮಾಜಿಕ ಸ್ಥಿರತೆ ಮತ್ತು ಬಾಂಧವ್ಯದ ಅತ್ಯವಶ್ಯಕ ಖಾತರಿಯು ಸಾಮಾಜಿಕ ಸಮಾನತೆಯ ಮಾಪನವೆಂದು ಸಮಾಜವಾದಿಗಳು ನಂಬುತ್ತಾರೆ. ಕಾನೂನಾತ್ಮಕ ಹಾಗೂ ರಾಜಕೀಯ ಹಕ್ಕುಗಳನ್ನು ಬಳಸಲು ಸಹಾ ಇದು ಆಧಾರವನ್ನು ಒದಗಿಸುತ್ತದೆ. ಆದಾಗ್ಯೂ ಸಾಮಾಜಿಕ ಸಮಾನತೆಯನ್ನು ಎಷ್ಟರಮಟ್ಟಿಗೆ ತರಬಹುದು ಮತ್ತು ತರತಕ್ಕದ್ದು ಎಂಬ ಬಗ್ಗೆ ಸಮಾಜವಾದಿಗಳಲ್ಲಿ ಭಿನ್ನಾಭಿಪ್ರಾಯಗಳಿವೆ. ಉತ್ಪಾದನಾ ಆಸ್ತಿಯನ್ನು ಒಗ್ಗೂಡಿಸುವ ಮೂಲಕ ತರಲಾಗುವ ನಿರಪೇಕ್ಷ ಸಾಮಾಜಿಕ ಸಮಾನತೆಯಲ್ಲಿ ಮಾರ್ಕ್ಸ್‌ವಾದಿಗಳು ನಂಬಿಕೆಯನ್ನಿಟ್ಟಿದ್ದು; ಸಾಮಾಜಿಕ ಪ್ರಜಾಪ್ರಭುತ್ವವಾದಿಗಳು ಕೇವಲ ಭೌತಿಕ ಅಸಮಾನತೆಗಳನ್ನು ಕಡಿಮೆ ಮಾಡುವುದಕ್ಕೆ ಆದ್ಯತೆ ನೀಡಿದ್ದಾರೆ. ಫಲಿತಾಂಶಗಳ ಸಮಾನತೆಗಿಂತ ಅವಕಾಶಗಳನ್ನು ಸಮಾನಗೊಳಿಸುವ ಬಗ್ಗೆ ಅವರು ಕಾಳಜಿ ತೋರುತ್ತಾರೆ.

**ಅವಶ್ಯಕತೆ (Need)**: ಸಮಾನತೆಯ ಕುರಿತಾದ ಸಹಾನುಭೂತಿಯು; ಭೌತಿಕ ಅನುಕೂಲಗಳನ್ನು ಕೇವಲ ಅರ್ಹತೆ ಅಥವಾ ಕೆಲಸದ ಆಧಾರದ ಬದಲು ಅವಶ್ಯಕತೆಗನುಗುಣವಾಗಿ ಹಂಚಬೇಕೆಂಬ ಸಾಮಾಜಿಕ ನಂಬಿಕೆಯನ್ನು ವ್ಯಕ್ತಪಡಿಸುತ್ತದೆ. ಈ ತತ್ವದ ಅತ್ಯುತ್ತಮ ನಿರೂಪಣೆಯು ಮಾರ್ಕ್ಸ್‌ನ ವಿತರಣೆಯ ಕಮ್ಯೂನಿಸ್ಟ್ ತತ್ವದಲ್ಲಿ ಕಂಡುಬರುತ್ತದೆ: **‘**ಪ್ರತಿಯೊಬ್ಬರಿಂದ ಅವರ ಸಾಮರ್ಥ್ಯಕ್ಕನುಗುಣವಾಗಿ, ಪ್ರತಿಯೊಬ್ಬರಿಗೆ ಅವರ ಅವಶ್ಯಕತೆಗನುಗುಣವಾಗಿ**’**. ಮೂಲಭೂತ ಅವಶ್ಯಕತೆಗಳ (ಹಸಿವು, ದಾಹ, ವಸತಿ, ಆರೋಗ್ಯ, ವೈಯಕ್ತಿಕ ಭದ್ರತೆ ಇತ್ಯಾದಿ) ತೃಪ್ತಿಪಡಿಸುವಿಕೆಯು ಮಾನವನ ಯೋಗ್ಯವಾದ ಮಾನವನ ಅಸ್ತಿತ್ವಕ್ಕೆ ಮತ್ತು ಸಾಮಾಜಿಕ ಜೀವನದಲ್ಲಿನ ಭಾಗವಹಿಸುವಿಕೆಗೆ ಪೂರ್ವಾಪೇಕ್ಷಿತವಾದುದು ಎಂಬ ನಂಬಿಕೆಯನ್ನು ಇದು ಬಿಂಬಿಸುತ್ತದೆ. ಅವಶ್ಯಕತೆಗನುಗುಣವಾದ ವಿತರಣೆಯು ಜನರು ಭೌತಿಕ ವಸ್ತುಗಳಿಂದ ಪ್ರೇರೆಪಿತಗೊಳ್ಳುವುದಕ್ಕೆ ಬದಲಾಗಿ ನೈತಿಕ ಪ್ರೋತ್ಸಾಹಕಗಳಿಂದ ಸ್ಫೂರ್ತಿ ಪಡೆಯಬೇಕೆಂದು ಬಯಸುತ್ತದೆ.

**ಸಾಮಾಜಿಕ ವರ್ಗ (Social Class)**: ಸಮಾಜವಾದವು ಅನೇಕ ಸಲ ವರ್ಗ ರಾಜಕೀಯದೊಡನೆ ಸಂಬಂಧವನ್ನು ಹೊಂದಿರುತ್ತದೆ. ಮೊದಲನೆಯದಾಗಿ, ಆದಾಯ ಅಥವಾ ಸಂಪತ್ತಿನ ವಿತರಣೆಯ ರೂಪದಲ್ಲಿ ಸಮಾಜವನ್ನು ವಿಶ್ಲೇಷಿಸುವ ಪ್ರವೃತ್ತಿ ಸಮಾಜವಾದಿಗಳಲ್ಲಿ ಕಂಡುಬರುತ್ತದೆ. ಹೀಗಾಗಿ ಅವರು ಸಾಮಾಜಿಕ ವರ್ಗವನ್ನು ಮಹತ್ವದ ಸಾಮಾಜಿಕ ವಿಭಜನೆಯೆಂದು (ಸಾಮಾನ್ಯವಾಗಿ ಅತ್ಯಂತ ಮಹತ್ವವಾದುದು) ಪರಿಗಣಿಸುತ್ತಾರೆ. ಎರಡನೆಯದಾಗಿ, ಸಮಾಜವಾದವು ಸಾಂಪ್ರದಾಯಿಕವಾಗಿ ದಮನಿತ ಮತ್ತು ಶೋಷಿತ ದುಡಿಯುವ ವರ್ಗದ (ಇದನ್ನು ಹೇಗಾದರೂ ವ್ಯಾಖ್ಯಾನಿಸಿರಲಿ) ಹಿತಾಸಕ್ತಿಗೆ ಸಂಬಂಧಿಸಿದೆ. ಹಾಗೆಯೆ ದುಡಿಯುವ ವರ್ಗವನ್ನು ಸಾಮಾಜಿಕ ಬದಲಾವಣೆ ಹಾಗೂ ಸಾಮಾಜಿಕ ಕ್ರಾಂತಿಯ ಪ್ರತಿನಿಧಿಯೆಂದು ಸಾಂಪ್ರದಾಯಿಕವಾಗಿ ಪರಿಗಣಿಸಲಾಗುತ್ತದೆ. ಆದಾಗ್ಯೂ, ವರ್ಗ ವಿಭಜನೆಗಳು ಪರಿಹರಿಸಬಹುದಾದಂತಹವು: ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯ

ನಿರ್ಮೂಲನೆ ಅಥವಾ ಅವುಗಳನ್ನು ಗಣನೀಯವಾಗಿ ಕಡಿಮೆ ಮಾಡುವುದು ಸಮಾಜವಾದಿ ಗುರಿಯಾಗಿದೆ.

**ಸಾಮಾನ್ಯ ಮಾಲಿಕತ್ವ (Common Ownership):** ಸಮಾಜವಾದ ಹಾಗೂ ಸಾಮಾನ್ಯ ಮಾಲೀಕತ್ವ ನಡುವಿನ ಸಂಬಂಧವು ಅತ್ಯಂತ ವಿವಾದಾಸ್ಪದವಾದುದು. ಕೆಲವರು ಇದನ್ನು ಸಮಾಜವಾದದ ಅಂತ್ಯವೆಂದು ಪರಿಗಣಿಸಿದರೆ, ಇತರರು ಇದನ್ನು ಕೇವಲ ವ್ಯಾಪಕವಾದ ಸಮಾನತೆಯನ್ನು ಸೃಷ್ಟಿಸುವ ಮಾರ್ಗವಾಗಿ ಪರಿಗಣಿಸುತ್ತಾರೆ. ಎಲ್ಲರ ಒಳಿತಿಗಾಗಿ ಭೌತಿಕ ಸಂಪನ್ಮೂಲಗಳನ್ನು ಸಜ್ಜುಗೊಳಿಸುವುದು, ಸಾಮಾನ್ಯ ಮಾಲೀಕತ್ವಕ್ಕೆ ಸಂಬಂಧಿಸಿದ ಸಮಾಜವಾದಿ ಕಲ್ಪನೆಯಾಗಿದೆ (ಸೋವಿಯೆಟ್ ಮಾದರಿಯ ರಾಜ್ಯ ಸಾಮೂಹಿಕರಣ ಅಥವಾ ಆಯ್ದ ರಾಷ್ಟ್ರೀಕರಣ ('ಮಿಶ್ರ ಆರ್ಥಿಕತೆ')). ಖಾಸಗಿ ಆಸ್ತಿಯು ಸ್ವಾರ್ಥ, ಸ್ವಾಧೀನತೆ ಹಾಗೂ ಸಾಮಾಜಿಕ ವಿಭಜನೆಯನ್ನು ಪ್ರೋತ್ಸಾಹಿಸುತ್ತದೆಂದು ಪರಿಗಣಿಸಲಾಗುತ್ತದೆ. ಆದರೆ, ಆಧುನಿಕ ಸಮಾಜವಾದವು ಒಡೆತನ ರಾಜಕೀಯದ ಈ ಸಂಕುಚಿತ ಕಾಳಜಿಯಿಂದ ದೂರ ಸರಿದಿದೆ.

### ಮಾರ್ಕ್ಸ್‌ವಾದ (Marxism)

ಒಂದು ಸೈದ್ಧಾಂತಿಕ ವ್ಯವಸ್ಥೆಯಾಗಿ ಮಾರ್ಕ್ಸ್‌ವಾದವು (Marxism); ಆಧುನಿಕ ಯುಗದಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿ ಹಾಗು ಬೌದ್ಧಿಕ ವಿಚಾರಣೆಯ ಮೇಲೆ ಪ್ರಭಾವವನ್ನು ಹೊಂದಿದ್ದ ಉದಾರ ವಿಚಾರವಾದಕ್ಕೆ ಒಂದು ಪ್ರಧಾನ ಪರ್ಯಾಯವನ್ನು ಹುಟ್ಟುಹಾಕಿತು. ಮಾರ್ಕ್ಸ್‌ವಾದವನ್ನು ಅಂತಾರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯ ರೂಪದ ಒಂದು ರಾಜಕೀಯ ಶಕ್ತಿಯಾಗಿ ಹಾಗೂ ಪಾಶ್ಚಿಮಾತ್ಯ ಬಂಡವಾಳಶಾಹಿಯ ಪ್ರಮುಖ ಶತೃವಾಗಿ(ಕನಿಷ್ಠ ಪಕ್ಷ 1917–91ರ ಅವಧಿಯಲ್ಲಿ) ನೋಡಲಾಗುತ್ತದೆ. ಇದು, ಮಾರ್ಕ್ಸ್‌ವಾದವನ್ನು ಕುರಿತಾದ ಒಂದು ಪ್ರಮುಖ ಸಮಸ್ಯೆಯನ್ನು ಎತ್ತಿ ತೋರಿಸುತ್ತದೆ: ಇದು, ಕಾರ್ಲ್‌ಮಾರ್ಕ್ಸ್ ಹಾಗೂ ಫ್ರೈಡರಿಕ್ ಏಂಜೆಲ್ಸ್ (1820–95) ಅವರ ಪ್ರಧಾನ ಬರಹಗಳಿಂದ ಪಡೆಯಲಾದ ಸಮಾಜವಾದಿ ತತ್ವವಾಗಿ ಮಾರ್ಕ್ಸ್‌ವಾದ ಹಾಗೂ ಪರಿಷ್ಕೃತ ಸಾಂಪ್ರದಾಯಿಕ ತತ್ವಗಳಿಂದ ಅನೇಕ ರೀತಿಗಳಲ್ಲಿ ವಿಮುಖವಾದ ಇಪ್ಪತ್ತನೆ ಶತಮಾನದ ಕಮ್ಯೂನಿಸಮ್‌ನ ವಿದ್ಯಮಾನಗಳ ನಡುವಿನ ವ್ಯತ್ಯಾಸವಾಗಿದೆ. ಹೀಗಾಗಿ ಇಪ್ಪತ್ತನೇ ಶತಮಾನದ ಕೊನೆಯಲ್ಲಿ ಸಂಭವಿಸಿದ ಕಮ್ಯೂನಿಸಮ್‌ನ ಅವನತಿಯು ಒಂದು ರಾಜಕೀಯ ಸಿದ್ಧಾಂತವಾಗಿ ಮಾರ್ಕ್ಸ್‌ವಾದದ ಅಂತ್ಯವನ್ನೇನೂ ಸೂಚಿಸುವುದಿಲ್ಲ. ವಾಸ್ತವವಾಗಿ ಲೆನಿನ್‌ವಾದ ಮತ್ತು ಸ್ಟಾಲಿನ್‌ವಾದದ ಪ್ರಭಾವದಿಂದ ದೂರವಾದ ಮಾರ್ಕ್ಸ್‌ವಾದಕ್ಕೆ ಒಂದು ಹೊಸ ಜೀವನವನ್ನು ಇದು ನೀಡಬಹುದು.

ಮಾರ್ಕ್ಸ್‌ನ ಜೀವನಪರ್ಯಂತ ಸಹಯೋಗಿಯಾಗಿದ್ದ ಎಂಜೆಲ್ಸ್, ಜರ್ಮನಿಯ ಸಮಾಜವಾದಿ ನಾಯಕ ಕಾರ್ಲ್ ಕೌಟ್‌ಸ್ಕಿ (1854–1938) ಹಾಗೂ ರಷ್ಯಾದ ಸಿದ್ಧಾಂತಿ ಜಾರ್ಜಿ ಪ್ಲೆಖನೋವ್ (1856–1918) ಇವರ ಬರಹಗಳ ಮೂಲಕ ಮಾರ್ಕ್ಸ್‌ನ ವಿಚಾರಗಳು ಮತ್ತು ಸಿದ್ಧಾಂತಗಳು ಅವರ ಮರಣಾನಂತರ ಹೆಚ್ಚಿನ ಸಂಖ್ಯೆಯ ಶ್ರೋತೃಗಳನ್ನು ತಲುಪಿತು. 'ದ್ವಂದ್ವಾತ್ಮಕ ಭೌತಿಕವಾದ' (dialectical materialism) ಎಂಬ (ಈ ಶಬ್ದವನ್ನು ಪ್ಲೆಖನೋವ್ ಬಳಕೆಗೆ

ತಂದಿದ್ದಾನೆ, ಮಾರ್ಕ್ಸ್ ಅಲ್ಲ) ಒಂದು ಸಾಂಪ್ರದಾಯಿಕ ಮಾರ್ಕ್ಸ್‌ವಾದವು ಅಸ್ತಿತ್ವಕ್ಕೆ ಬಂದಿತು. ಇದನ್ನು ಅನಂತರ ಸೋವಿಯೆಟ್ ಕಮ್ಯೂನಿಸಮ್‌ನ ಆಧಾರವಾಗಿ ಉಪಯೋಗಿಸಲಾಯಿತು. ಈ 'ಅಸಭ್ಯ' ಮಾರ್ಕ್ಸ್‌ವಾದವು ಮಾರ್ಕ್ಸ್‌ನ ಬರಹಗಳಿಗಿಂತ ನಿಸ್ಸಂದೇಹವಾಗಿಯೂ ಹೆಚ್ಚಿನ ಭಾರದ ಒತ್ತಡವನ್ನು ಯಾಂತ್ರಿಕ ಸಿದ್ಧಾಂತಗಳು (mechanistic theories) ಹಾಗೂ ಐತಿಹಾಸಿಕ ನಿಯತಿವಾದಗಳ (historical determinism) ಮೇಲೆ ಹಾಕಿತು.

### ಸಾಂಪ್ರದಾಯಿಕ ಮಾರ್ಕ್ಸ್‌ವಾದ (Classical Marxism)

ಸಾಂಪ್ರದಾಯಿಕ ಮಾರ್ಕ್ಸ್‌ವಾದದ ತಿರುಳು – ಮಾರ್ಕ್ಸ್‌ನ ಮಾರ್ಕ್ಸ್‌ವಾದವು – ಇತಿಹಾಸದ ಒಂದು ತತ್ವವಾಗಿದೆ. ಇದನ್ನು ಎಂಜೆಲ್ಸ್, 'ಇತಿಹಾಸದ ಭೌತಿಕವಾದಿ ಕಲ್ಪನೆ' (materialist conception of history) ಅಥವಾ 'ಐತಿಹಾಸಿಕ ಭೌತಿಕವಾದ'ವೆಂದು (historical materialism) ವಿವರಿಸಿದ್ದಾರೆ. ಆರ್ಥಿಕ ಜೀವನ ಹಾಗೂ ಜನರು ಅವರ ಜೀವನಾಧಾರಗಳನ್ನು ಉತ್ಪಾದಿಸುವ ಹಾಗೂ ಪುನರುತ್ಪಾದಿಸುವ ಪರಿಸ್ಥಿತಿಗಳ ಮಹತ್ವವನ್ನು ಇದು ಎತ್ತಿ ತೋರಿಸುತ್ತದೆ. ಮಾರ್ಕ್ಸ್‌ನ ಅಭಿಪ್ರಾಯದಂತೆ, ಮೂಲತಃ ಉತ್ಪಾದನಾ ವಿಧಾನ ಅಥವಾ ಆರ್ಥಿಕ ವ್ಯವಸ್ಥೆ, ಪರಿಸ್ಥಿತಿಗಳನ್ನು ಒಳಗೊಂಡಿರುವ ಆರ್ಥಿಕ 'ಆಧಾರ'ವು ಸೈದ್ಧಾಂತಿಕ ಹಾಗೂ ರಾಜಕೀಯ 'ಸಿದ್ಧಾಂತವನ್ನು' ನಿರ್ಧರಿಸುತ್ತದೆ. ಹೆಗಲ್‌ನ್ನು ಅನುಸರಿಸುವ ಮಾರ್ಕ್ಸ್, ಐತಿಹಾಸಿಕ ಬದಲಾವಣೆಯ ಚಾಲನಾ ಶಕ್ತಿಯು ಜಿಜ್ಞಾಸೆಯಿಂದ ಕೂಡಿದ್ದು; ಅದು ಉನ್ನತ ಮಟ್ಟದ ಅಭಿವೃದ್ಧಿಯನ್ನುಂಟುಮಾಡುವ ಪ್ರತಿಸ್ಪರ್ಧಿ ಶಕ್ತಿಗಳ ಪರಸ್ಪರ ಕ್ರಿಯೆಯ ಪ್ರಕ್ರಿಯೆಯಾಗಿದೆಯೆಂದು ನಂಬುತ್ತಾರೆ. ಐತಿಹಾಸಿಕ ಬದಲಾವಣೆಯು ವರ್ಗ ಸಂಘರ್ಷದಲ್ಲಿ ವ್ಯಕ್ತವಾಗುವ 'ಉತ್ಪಾದನಾ ವಿಧಾನ'ವೊಂದರೊಳಗಿನ ಆಂತರಿಕ ಭಿನ್ನಾಭಿಪ್ರಾಯಗಳ ಪರಿಣಾಮವೆಂಬುದು ಈ ಮಾದರಿಯ ಭೌತಿಕ ಆವೃತ್ತಿಯ ಅರ್ಥವಾಗಿದೆ. ಈ ಹಿಂದಿನ ಎಲ್ಲಾ ವರ್ಗ ಸಮಾಜಗಳಂತೆಯೆ ಅವನತಿಯು ಬಂಡವಾಳಶಾಹಿಯ ಹಣೆಬರಹವಾಗಿದೆ. ಉತ್ಪಾದಕ ಆಸ್ತಿಯ ಮಾಲೀಕರಾದ ಬೂರ್ಜ್ವಾಗಳು ಅಥವಾ ಬಂಡವಾಳಶಾಹಿ ವರ್ಗ ಹಾಗೂ ಪರಿಣಾಮದಲ್ಲಿ 'ಕೂಲಿ ಗುಲಾಮ'ರಾಗಿರುವ ಕಾರ್ಮಿಕ ವರ್ಗದವರ ನಡುವಿನ ಸಂಘರ್ಷದಿಂದಾಗಿ ಬಂಡವಾಳಶಾಹಿಯು ಅವನತಿಯನ್ನು ಕಾಣಲಿದೆ. ಈ ಸಂಘರ್ಷವು ರಾಜಿ ಮಾಡಲಾಗದ ಸಂಗತಿ. ಏಕೆಂದರೆ ದುಡಿಯುವ ವರ್ಗವನ್ನು ಬಂಡವಾಳಶಾಹಿಯಡಿಯಲ್ಲಿ ಅವಶ್ಯಕವಾಗಿ ಹಾಗೂ ವ್ಯವಸ್ಥಿತವಾಗಿ ಶೋಷಿಸಲಾಗುತ್ತಿದೆ. ಬೂರ್ಜ್ವಾಗಳು ಶ್ರಮಿಕರಿಂದ 'ಮಿಗುತೆ ಮೌಲ್ಯ'ವನ್ನು ಹೊರತೆಗೆಯುವ ಮೂಲಕ ಬದುಕುತ್ತಿದ್ದಾರೆ.

ಮಾರ್ಕ್ಸ್‌ನ ಪ್ರಕಾರ, ಆಳವಾದ ಬಿಕ್ಕಟ್ಟುಗಳ ಸರಣಿಯು ದುಡಿಯುವ ವರ್ಗದಲ್ಲಿ ವರ್ಗ ಪ್ರಜ್ಞೆಯನ್ನು ಸಂಪೂರ್ಣವಾಗಿ ಮೂಡಿಸಿದಾಗ ಅನಿವಾರ್ಯವಾಗಿ ಕಾರ್ಮಿಕ ಕ್ರಾಂತಿಯು ಸಂಭವಿಸಲಿದೆ. ಇದು ದುಡಿಯುವ ಬಹುಸಂಖ್ಯಾತರು ಅವರ ಶೋಷಣೆಯ ವಾಸ್ತವವನ್ನು ಗುರುತಿಸಿ ಒಂದು ಕ್ರಾಂತಿಕಾರಕ ಶಕ್ತಿಯಾಗಲು ಅನುವು ಮಾಡಿಕೊಡಲಿದೆ. ಕಾರ್ಮಿಕ ಕ್ರಾಂತಿಯು ಅಭಿವೃದ್ಧಿಯ ಪರಿವರ್ತನಾ 'ಸಾಮಾಜಿಕ' ಕಾಲವೊಂದನ್ನು ಸೃಷ್ಟಿಸಿ, 'ದುಡಿಯುವ ವರ್ಗದ ನಿರಂಕುಶಾಧಿಕಾರ'ದ ಲಕ್ಷಣವನ್ನು ಹೊಂದಿರಲಿದೆ. ಆದರೆ ವರ್ಗ ವಿರೋಧಗಳು ಮಸುಕಾಗಿ, ಪೂರ್ಣವಾದ ಕಮ್ಯೂನಿಸ್ಟ್

ಸಮಾಜವು ಅಸ್ತಿತ್ವಕ್ಕೆ ಬಂದಾಗ ಈ ಕಾರ್ಮಿಕ ರಾಜ್ಯವು ಕ್ಷೀಣಿಸಲಿದೆ. ಇದರರ್ಥವೇನೆಂದರೆ, ಕಮ್ಯೂನಿಸ್ಟ್ ಸಮಾಜವು ವರ್ಗರಹಿತ ಹಾಗೂ ರಾಜ್ಯರಹಿತವಾಗಲಿದೆ. 'ಸರಕು ಉತ್ಪಾದನೆ' ವ್ಯವಸ್ಥೆಯು 'ಉಪಯೋಗಕ್ಕಾಗಿ ಉತ್ಪಾದನೆ' ಆಧಾರಿತ ಉತ್ಪಾದನೆಯ ಉಗಮಕ್ಕೆ ಎಡೆಮಾಡಿಕೊಟ್ಟು, ಮಾನವನ ನಿಜವಾದ ಅವಶ್ಯಕತೆಗೆ ಸಿದ್ಧವಾದಾಗ, 'ಪ್ರತಿಯೊಬ್ಬರ ಮುಕ್ತ ಅಭಿವೃದ್ಧಿಯು ಎಲ್ಲರ ಮುಕ್ತ ಅಭಿವೃದ್ಧಿಗೆ ಪೂರ್ವಷರತ್ತಾಗಲಿದೆ' (ಮಾರ್ಕ್ಸ್).

**ಸಾಂಪ್ರದಾಯಿಕ ಕಮ್ಯೂನಿಸಮ್ (Orthodox Communism)**

ಮಾರ್ಕ್ಸ್‌ವಾದವು ಆಚರಣೆಯಲ್ಲಿ ಸೋವಿಯತ್ ಕಮ್ಯೂನಿಸಮ್‌ನ ಅನುಭವದೊಂದಿಗೆ ಜಟಿಲವಾದ ಸಂಬಂಧವನ್ನು ಹೊಂದಿದೆ. ಅದರಲ್ಲೂ ವಿಶೇಷವಾಗಿ ಮೊದಲ ಇಬ್ಬರು ಸೋವಿಯೆಟ್ ನಾಯಕರಾದ ವಿ.ಐ. ಲೆನಿನ್ ಹಾಗೂ ಜೋಸೆಫ್ ಸ್ಟಾಲಿನ್ (1879–1953) ಅವರ ಕೊಡುಗೆಯೊಂದಿಗೆ ಸಂಬಂಧವನ್ನು ಹೊಂದಿದೆ. ವಾಸ್ತವವಾಗಿ, ಇಪ್ಪತ್ತನೆ ಶತಮಾನದ ಕಮ್ಯೂನಿಸಮ್‌ನ್ನು ಮಾರ್ಕ್ಸಿಸಮ್–ಲೆನಿನಿಸಮ್ ರೂಪದ ಕಮ್ಯೂನಿಸಮ್ ಆಗಿ ಅರ್ಥಮಾಡಿಕೊಳ್ಳಬಹುದಾಗಿದೆ; ಅಂದರೆ, ಲೆನಿನ್‌ನ ಸಿದ್ಧಾಂತಗಳು ಹಾಗೂ ತತ್ವಗಳಿಂದ ಮಾರ್ಪಾಡು ಮಾಡಲಾದ ಸಾಂಪ್ರದಾಯಿಕ ಮಾರ್ಕ್ಸ್‌ವಾದ ಎಂಬುದು ಇದರ ಅರ್ಥ. ಕ್ರಾಂತಿಕಾರಿ ಸಿದ್ಧಾಂತ ಅಥವಾ ವ್ಯಾನ್‌ಗಾರ್ಡ್ ಪಕ್ಷವು ಮಾರ್ಕ್ಸ್‌ವಾದಕ್ಕೆ ಲೆನಿನ್‌ನ ಪ್ರಮುಖ ಬಳುವಳಿಯಾಗಿದೆ. ಬೂರ್ಜ್ವಾಗಳ ವಿಚಾರಗಳು ಮತ್ತು ನಂಬಿಕೆಗಳಿಂದ ಭ್ರಮೆಗೊಳಗಾಗುವ ದುಡಿಯುವ ವರ್ಗವು ಅದರ ಕ್ರಾಂತಿಕಾರಿ ಸಾಮರ್ಥ್ಯವನ್ನು ಅರ್ಥಮಾಡಿಕೊಳ್ಳುವುದಿಲ್ಲ. ಈ ವರ್ಗವು 'ಕಾರ್ಮಿಕ ಸಂಘಟನೆಯ ಪ್ರಜ್ಞೆ'ಯಿಂದಾಚೆಗೆ ಅಭಿವೃದ್ಧಿಯಾಗಲಿಲ್ಲವೆಂಬ ಲೆನಿನ್‌ನ ಆತಂಕವನ್ನು ಇದು ವ್ಯಕ್ತಪಡಿಸುತ್ತದೆ. ಏಕೆಂದರೆ, ಕಾರ್ಮಿಕ ಸಂಘಟನೆಯ ಪ್ರಜ್ಞೆಯು ಕೆಲಸ ಮಾಡುವ ಹಾಗೂ ದುಡಿಯುವ ಪರಿಸ್ಥಿತಿಗಳ ಸುಧಾರಣೆಯನ್ನು ಬಯಸುತ್ತದೆಯೆ ಹೊರತು ಬಂಡವಾಳಶಾಹಿಯನ್ನು ಉರುಳಿಸಲು ಬಯಸುವುದಿಲ್ಲ. 'ದುಡಿಯುವ ವರ್ಗದ ನೇತೃತ್ವವಾಗಿ' ಕಾರ್ಯನಿರ್ವಹಿಸಲು ಮಾರ್ಕ್ಸ್‌ವಾದದಿಂದ ಸಜ್ಜಿತವಾದ ಒಂದು ಕ್ರಾಂತಿಕಾರಿ ಪಕ್ಷದ ಅವಶ್ಯಕತೆಯಿತ್ತು. ಕಾಲಾಂತರದಲ್ಲಿ, ವೃತ್ತಿಪರರು ಹಾಗೂ ಸಮರ್ಪಿತ ಕ್ರಾಂತಿಕಾರಿಗಳನ್ನೊಳಗೊಂಡ 'ವ್ಯಾನ್‌ಗಾರ್ಡ್' ಅಥವಾ 'ಲೆನಿನಿಸ್ಟ್' ಪಕ್ಷವು ವಿಶ್ವದಾದ್ಯಂತ ಕಮ್ಯೂನಿಸ್ಟ್ ಪಕ್ಷಗಳಿಗೆ ಮಾದರಿಯಾಯಿತು.

ಸೋವಿಯತ್ ಒಕ್ಕೂಟವು (USSR) 1917ರ ಬೊಲ್ಶೆವಿಕ್ ಕ್ರಾಂತಿಗಿಂತ 1930ರ ಸ್ಟಾಲಿನ್‌ನ ಎರಡನೆ ಕ್ರಾಂತಿಯಿಂದ ಹೆಚ್ಚು ಗಾಢವಾದ ಪರಿಣಾಮಕ್ಕೆ ಒಳಗಾಯಿತು. ಸೋವಿಯೆಟ್ ಸಮಾಜವನ್ನು ಪುನರ್‌ರೂಪಿಸುವಾಗ ಸಾಂಪ್ರದಾಯಿಕ ಕಮ್ಯೂನಿಸಮ್‌ನ ಮಾದರಿಯೊಂದನ್ನು ಸ್ಟಾಲಿನ್ ನಿರ್ಮಾಣ ಮಾಡಿದನು. 1945ರ ನಂತರದ ಅವಧಿಯಲ್ಲಿ ಈ ಮಾದರಿಯನ್ನು ಚೀನಾ, ಉತ್ತರ ಕೊರಿಯಾ, ಕ್ಯೂಬಾ ಹಾಗೂ ಪೂರ್ವ ಯುರೋಪಿನಾದ್ಯಂತ ಅನುಸರಿಸಲಾಯಿತು. 'ಆರ್ಥಿಕ ಸ್ಟಾಲಿನ್‌ವಾದ' ಎಂದು ಕರೆಯಬಹುದಾದ ಆರ್ಥಿಕ ವ್ಯವಸ್ಥೆಯನ್ನು 1928ರಲ್ಲಿ ಪ್ರಥಮ ಪಂಚವಾರ್ಷಿಕ ಯೋಜನೆಯ ಮೂಲಕ ಪ್ರಾರಂಭಿಸಲಾಯಿತು. ಇದು ಖಾಸಗಿ ಉದ್ಯಮವನ್ನು ತ್ವರಿತವಾಗಿ ಹಾಗೂ ಸಂಪೂರ್ಣವಾಗಿ ನಿರ್ಮೂಲನೆ ಮಾಡಿತು. ಇದರ ನಂತರ 1929ರಲ್ಲಿ ಕೃಷಿಯ ಸಾಮೂಹಿಕರಣವಾಯಿತು. ಎಲ್ಲಾ ಸಂಪನ್ಮೂಲಗಳನ್ನು ಸರ್ಕಾರದ ನಿಯಂತ್ರಣಕ್ಕೆ ತರಲಾಯಿತಲ್ಲದೆ,

ರಾಜ್ಯ ಯೋಜನಾ ಸಮಿತಿಯ (Gosplan) ನಿಯಂತ್ರಣಕ್ಕೊಳಪಟ್ಟ ಕೇಂದ್ರೀಯ ಯೋಜನಾ ವ್ಯವಸ್ಥೆಯನ್ನು ಸ್ಥಾಪಿಸಲಾಯಿತು. ಸ್ಟಾಲಿನ್‌ನ ರಾಜಕೀಯ ಬದಲಾವಣೆಗಳು ಕಡಿಮೆ ನಾಟಕೀಯವಾಗೇನೂ ಇರಲಿಲ್ಲ. 1930ರ ದಶಕದಲ್ಲಿ ಕಮ್ಯೂನಿಸ್ಟ್ ಪಾರ್ಟಿ, ರಾಜ್ಯ ಅಧಿಕಾರಶಾಹಿ ಹಾಗೂ ಸೈನ್ಯದಿಂದ ಎಲ್ಲಾ ವಿರೋಧ ಮತ್ತು ಚರ್ಚೆಯ ಕುರುಹುಗಳನ್ನು ಸರಣಿ ಪರಿಷ್ಕರಣಗಳ ಮೂಲಕ ತೊಡೆದು ಹಾಕಿ, ವ್ಯವಸ್ಥಿತವಾದ ಬೆದರಿಕೆ, ದಮನಕಾರಿ ಹಾಗೂ ಭಯಹುಟ್ಟಿಸುವ ಕಾರ್ಯಾಚರಣೆಯ ಮೂಲಕ ಸ್ಟಾಲಿನ್, ಸೋವಿಯೆಟ್ ಒಕ್ಕೂಟವನ್ನು  ಒಂದು ನಿರಂಕುಶ ಸರ್ವಾಧಿಕಾರವನ್ನಾಗಿ ಬದಲಾಯಿಸಿದರು.

1953ರಲ್ಲಿ ಸ್ಟಾಲಿನ್‌ರ ಮರಣಾನಂತರ ಸಾಂಪ್ರದಾಯಿಕ ಕಮ್ಯೂನಿಸಮ್‌ನ ಕ್ರೂರ ಲಕ್ಷಣಗಳು ಉಳಿದುಕೊಳ್ಳಲಿಲ್ಲವಾದರೂ, ಲೆನಿನಿಸ್ಟ್ ಪಾರ್ಟಿಯ ಪ್ರಮುಖ ತತ್ವಗಳು (ಶ್ರೇಣೀಕೃತ ಸಂಘಟನೆ ಹಾಗೂ ಶಿಸ್ತು) ಹಾಗೂ ಸ್ಟಾಲಿನಿಸಮ್‌ನ ಆರ್ಥಿಕ ತತ್ವಗಳು (ರಾಜ್ಯ ಸಾಮೂಹೀಕರಣ ಮತ್ತು ಕೇಂದ್ರ ಯೋಜನೆ) ಸುಧಾರಣೆಯ ಒತ್ತಡಗಳನ್ನು ಪಟ್ಟುಬಿಡದೆ ವಿರೋಧಿಸಿದವು. ಇದನ್ನು ಗೋರ್ಬಚೇವ್‌ನ 'ಪೆರೆಸ್ಟ್ರಾಇಕ' ಸುಧಾರಣಾ ಪ್ರಕ್ರಿಯೆಯು (1985–91) ಸ್ಪಷ್ಟಪಡಿಸುತ್ತದೆ. ಕೇವಲ ಯೋಜನಾ ವ್ಯವಸ್ಥೆಯ ವೈಫಲ್ಯಗಳನ್ನು ಬಹಿರಂಗಪಡಿಸುವಲ್ಲಿ ಹಾಗೂ ದೀರ್ಘಕಾಲದಿಂದ ನಿಗ್ರಹಿಸಲಾಗಿದ್ದ ರಾಜಕೀಯ ಶಕ್ತಿಗಳನ್ನು ಬಿಡುಗಡೆಗೊಳಿಸುವಲ್ಲಿ ಪೆರೆಸ್ಟ್ರಾಇಕ ಯಶಸ್ವಿಯಾಯಿತು. ಇದು ವಿಭಿನ್ನವಾದ ಸನ್ನಿವೇಶಗಳಲ್ಲಿ ಟ್ರಾಟ್‌ಸ್ಕಿ ಕರೆದಂತಹ 'ಇತಿಹಾಸದ ಕಸದಬುಟ್ಟಿ'ಗೆ ಸೋವಿಯೇಟ್ ಕಮ್ಯೂನಿಸಮ್‌ನ್ನು ಅಂತಿಮವಾಗಿ ರವಾನಿಸಿತು. ಚೀನಾದಲ್ಲಿ ಮಾರುಕಟ್ಟೆ ಸುಧಾರಣೆಗಳನ್ನು ಸ್ವೀಕರಿಸಲಾಗಿದ್ದರೂ ಅಲ್ಲಿ ರಾಜಕೀಯ ಸ್ಟಾಲಿನ್‌ವಾದವು ಅಸ್ತಿತ್ವದಲ್ಲಿದ್ದು, ಉತ್ತರ ಕೊರಿಯಾ ಸಾಂಪ್ರದಾಯಿಕ ಕಮ್ಯೂನಿಸ್ಟ್ ಆಳ್ವಿಕೆಯನ್ನು ಈಗಲೂ ಸಂಪೂರ್ಣವಾಗಿ ಅನುಸರಿಸುತ್ತಿದೆ. 1989–91ರ ಅವಧಿಯಲ್ಲಿನ ಕಮ್ಯೂನಿಸಮ್‌ನ ಕುಸಿತವನ್ನು ಆಧುನಿಕ ಯುಗದ ಅತ್ಯಂತ ಮಹತ್ವದ ಸೈದ್ಧಾಂತಿಕ ಘಟನೆಯಾಗಿ ಪರಿಗಣಿಸಲಾಗುತ್ತದೆ.

### ನವ–ಮಾರ್ಕ್ಸ್‌ವಾದ (Neo- Marxism)

ಇನ್ನೂ ಹೆಚ್ಚಿನ ಸಂಕೀರ್ಣ ಹಾಗೂ ಸೂಕ್ಷ್ಮರೂಪದ ಮಾರ್ಕ್ಸ್‌ವಾದವು ಪಾಶ್ಚಿಮಾತ್ಯ ಯುರೋಪಿನಲ್ಲಿ ಅಭಿವೃದ್ಧಿಯಾಯಿತು. ಸೋವಿಯೆಟ್ ಮಾರ್ಕ್ಸ್‌ವಾದದ ಯಾಂತ್ರಿಕ ಹಾಗೂ ಸ್ಪಷ್ಟವಾದ ವೈಜ್ಞಾನಿಕ ಕಲ್ಪನೆಗಳಿಗೆ ವ್ಯತಿರಿಕ್ತವಾಗಿ ಪಾಶ್ಚಿಮಾತ್ಯ ಮಾರ್ಕ್ಸ್‌ವಾದ ಅಥವಾ ನವ–ಮಾರ್ಕ್ಸ್‌ವಾದವು  ಹೆಗೆಲಿಯನ್ ವಿಚಾರಗಳು ಹಾಗೂ ಮಾರ್ಕ್ಸ್‌ನ ಪ್ರಾರಂಭಿಕ ಬರವಣಿಗೆಗಳಲ್ಲಿ ಕಂಡುಬರುವ 'ಮನುಷ್ಯನೆಂಬ ಸೃಷ್ಟಿಕೃರ್ತ' ಎಂಬುದರ ಮೇಲಿನ ಒತ್ತಡದಿಂದ ಪ್ರಭಾವಿಸಲ್ಪಡುವ ಪ್ರವೃತ್ತಿಯನ್ನು ಹೊಂದಿದೆ. ಅಂದರೆ ಮನುಷ್ಯರನ್ನು ಕೇವಲ ವ್ಯಕ್ತಿಗೆ ಸಂಬಂಧವಿಲ್ಲದ ಭೌತಿಕ ಶಕ್ತಿಗಳಿಂದ ನಿಯಂತ್ರಿಸಲ್ಪಡುವ ಕೈಗೊಂಬೆಗಳಂತಲ್ಲದೆ ಇತಿಹಾಸದ ನಿರ್ಮಾತೃಗಳಾಗಿ ನೋಡಲಾಯಿತು. ಅರ್ಥಶಾಸ್ತ್ರ ಮತ್ತು ರಾಜನೀತಿಗಳ ನಡುವೆ ಹಾಗೂ ಜೀವನದ ಭೌತಿಕ ಸನ್ನಿವೇಶಗಳು ಮತ್ತು ತಮ್ಮ ಭವಿಷ್ಯವನ್ನು ತಾವೇ ರೂಪಿಸುವ ಮನುಷ್ಯರ ಸಾಮರ್ಥ್ಯದ ನಡುವೆ ಪರಸ್ಪರ ಕ್ರಿಯೆಯಿದೆಯೆಂದು ಆಗ್ರಹಿಸುವ ಮೂಲಕ ನವ–ಮಾರ್ಕ್ಸ್‌ವಾದಿಗಳು ಕಠಿಣ

'ಆಧಾರಭೂತ–ತತ್ವಗಳ' ಸಂಕೋಲೆಯಿಂದ ತಮ್ಮನ್ನು ಬಿಡಿಸಿಕೊಳ್ಳಲು ಸಾಧ್ಯವಾಯಿತು. ವರ್ಗ ಸಂಘರ್ಷವನ್ನು ಸಾಮಾಜಿಕ ವಿಶ್ಲೇಷಣೆಯ ಆರಂಭ ಹಾಗೂ ಅಂತ್ಯವೆಂದು ಪರಿಗಣಿಸಲು ನಿರಾಕರಿಸುವುದನ್ನು ಇದು ಸೂಚಿಸುತ್ತದೆ.

ಹಂಗರಿಯ ಮಾರ್ಕ್ಸ್‌ವಾದಿ ಜಾರ್ಜ್ ಲೂಕಾಸ್ (1885–1971), ಮಾರ್ಕ್ಸ್‌ವಾದವನ್ನು ಒಂದು ಮಾನವಿಕ ತತ್ವಶಾಸ್ತ್ರವಾಗಿ ಪ್ರತಿಪಾದಿಸಿದವರಲ್ಲಿ ಮೊದಲಿಗರಾಗಿದ್ದಾರೆ. ಮೂರ್ತೀಕರಣ (reification) ಪ್ರಕ್ರಿಯೆಗೆ ಇವರು ಒತ್ತು ನೀಡಿದ್ದಾರೆ. ಈ ಪ್ರಕ್ರಿಯೆಯ ಮೂಲಕ ಕಾರ್ಮಿಕರನ್ನು ನಿಷ್ಕ್ರಿಯ ವಸ್ತುಗಳು ಅಥವಾ ಮಾರಾಟದ ಸರಕುಗಳಾಗಿಸುವ ಮೂಲಕ ಬಂಡವಾಳಶಾಹಿಯು ಅವರನ್ನು ಅಮಾನವೀಯಗೊಳಿಸುತ್ತದೆ. ಆಂಟೋನಿ ಗ್ರಾಮ್‌ಸ್ಕಿ 1929–35ರಲ್ಲಿ ಬರೆದ 'ಪ್ರಿಸನ್ ನೋಟ್‌ಬುಕ್ಸ್'ನಲ್ಲಿ ಬಂಡವಾಳಶಾಹಿಯು ಆರ್ಥಿಕ ಪ್ರಾಬಲ್ಯದಿಂದಷ್ಟೆ ಅಲ್ಲದೆ ರಾಜಕೀಯ ಹಾಗೂ ಸಾಂಸ್ಕೃತಿಕ ಅಂಶಗಳಿಂದಲೂ ಯಾವ ಮಟ್ಟದಲ್ಲಿ ನಿರ್ವಹಿಸಲ್ಪಡುತ್ತದೆಂಬ ಕುರಿತು ಒತ್ತಿ ಹೇಳುತ್ತಾರೆ. ಇದನ್ನು ಅವರು ಸೈದ್ಧಾಂತಿಕ 'ಅಧಿಪತ್ಯ'ವೆಂದು (hegemony) ಕರೆಯುತ್ತಾರೆ. ಮಾರ್ಕ್ಸಿಸಮ್‌ನ ಇನ್ನೂ ಹೆಚ್ಚು ಬಹಿರಂಗ ಹೆಗೆಲಿಯನ್ ಮಾದರಿಯನ್ನು 'ಫ್ರಾಂಕ್‌ಫರ್ಟ್ ಸ್ಕೂಲ್' ಎಂದು ಕರೆಯಲ್ಪಡುವ ಪಂಥದವರು ಅಭಿವೃದ್ಧಿಪಡಿಸಿದ್ದಾರೆ. ಈ ಪಂಥದ ಮುಂಚೂಣಿ ಸದಸ್ಯರೆಂದರೆ ಥಿಯೋಡೋರ್ ಅಡೊರ್ನೊ (1903–69), ಮ್ಯಾಕ್ಸ್ ಹಾರ್ಖೀಮರ್ (1895–1973) ಹಾಗೂ ಹರ್ಬರ್ಟ್ ಮಾರ್ಕ್ಯೂಸ್. ಫ್ರಾಂಕ್‌ಫರ್ಟ್ ಸಿದ್ಧಾಂತಿಗಳು 'ವಿಮರ್ಶಾತ್ಮಕ ಸಿದ್ಧಾಂತ' (critical theory) ಎಂದು ಕರೆಯಲ್ಪಡುತ್ತಿದ್ದ ಸಿದ್ಧಾಂತವನ್ನು ಅಭಿವೃದ್ಧಿಪಡಿಸಿದರು. ಇದು ಮಾರ್ಕ್ಸ್‌ನ ರಾಜಕೀಯ ಅರ್ಥಶಾಸ್ತ್ರ, ಹೆಗೆಲ್ ಅವರ ತತ್ವಶಾಸ್ತ್ರ ಹಾಗೂ ಫ್ರಾಯ್ಡ್ ಅವರ ಮನೋವಿಜ್ಞಾನಗಳ ಮಿಶ್ರಣವಾಗಿತ್ತು. ಇದು 1960ರ ದಶಕದಲ್ಲಿ ಹೊಸ ಎಡಪಂಥದ ಮೇಲೆ ಗಣನೀಯ ಪರಿಣಾಮವನ್ನು ಹೊಂದಿತ್ತು. ಫ್ರಾಂಕ್‌ಪರ್ಟ್ ಸದಸ್ಯರ ನಂತರದ ಜನಾಂಗವು ಜುರ್ಗೆನ್ ಹ್ಯಾಬೆರ್ಮಸ್ ಅವರನ್ನು ಒಳಗೊಂಡಿತ್ತು.

ಪ್ರಾರಂಭಿಕ ವಿಮರ್ಶಾತ್ಮಕ ಸಿದ್ಧಾಂತಿಗಳು ಮುಖ್ಯವಾಗಿ ಪ್ರತ್ಯೇಕ ಸಮಾಜಗಳ ವಿಶ್ಲೇಷಣೆಯ ಬಗ್ಗೆ ಕಾಳಜಿ ಹೊಂದಿದ್ದರೆ, ನಂತರದ ಸಿದ್ಧಾಂತಿಗಳು ಪ್ರಾಪಂಚಿಕ ವ್ಯವಹಾರಗಳಲ್ಲಿ ಕಂಡುಬರುವ ಅಸಮಾನತೆಗಳು ಹಾಗೂ ಅಸಮರೂಪತೆಗಳನ್ನು ಅನಾವರಣಗೊಳಿಸಲು ಹೆಚ್ಚು ಗಮನವನ್ನು ನೀಡಿದರು. ಅಮೆರಿಕಾದ ಅಧಿಪತ್ಯದ ಶಕ್ತಿಯ ಮೇಲೆ ನೀಡಲಾಗುವ ಒತ್ತು (ಕಾಕ್ಸ್, 1987) ಹಾಗೂ ಒಂದು 'ವಿಶ್ವ–ವ್ಯವಸ್ಥೆ'ಯಾಗಿ ಬಂಡವಾಳಶಾಹಿಯ (ವ್ಯಾಲೆರ್‌ಸ್ಟೀನ್, 1984) ವಿಶ್ಲೇಷಣೆಯಲ್ಲಿ ಇದು ಸ್ಪಷ್ಟವಾಗಿದೆ.

---

**ಲೆನಿನ್‌ವಾದ (Leninism)**: ಮಾರ್ಕ್ಸ್‌ವಾದಕ್ಕೆ ಲೆನಿನ್ನರ ಸೈದ್ಧಾಂತಿಕ ಕೊಡುಗೆ, ವಿಶೇಷವಾಗಿ; ದುಡಿಯುವ ವರ್ಗದ ಎಲ್ಲರನ್ನು ವರ್ಗ ಪ್ರಜ್ಞೆಯ ಎತ್ತರಕ್ಕೇರಿಸಲು 'ವ್ಯಾನ್‌ಗಾರ್ಡ್' ಪಾರ್ಟಿಯ ಅವಶ್ಯಕತೆಯಿದೆಯೆಂಬ ಅವರ ನಂಬಿಕೆ.

---

**ಸ್ಟಾಲಿನ್‌ವಾದ (Stalinsim)**: ಸ್ಟಾಲಿನ್‌ರ ಸೋವಿಯೆತ್ ಒಕ್ಕೂಟದ ಸಂರಚನೆಗಳು, ವಿಶೇಷವಾಗಿ, ವ್ಯವಸ್ಥಿತವಾದ ಹಾಗೂ ಕ್ರೂರ ರಾಜಕೀಯ ದಬ್ಬಾಳಿಕೆಯೊಡನೆ ಸಂಬಂಧ ಹೊಂದಿರುವ ಕೇಂದ್ರೀಯ ಸ್ಥಾನದಲ್ಲಿರುವ ಆರ್ಥಿಕತೆ.

---

**ದ್ವಂದ್ವಾತ್ಮಕ ಭೌತವಾದ (Dialectical Materialism)**:ಸಾಂಪ್ರದಾಯಿಕ ಕಮ್ಯೂನಿಸ್ಟ್ ರಾಜ್ಯಗಳಲ್ಲಿ ಬೌದ್ಧಿಕ ಜೀವನದ ಮೇಲೆ ಪ್ರಾಬಲ್ಯ ಹೊಂದಿದ್ದ ಮಾರ್ಕ್ಸಿಸಂನ ಕಚ್ಚಾ ಹಾಗೂ ನಿರ್ಣಾಯಕ ರೂಪ.

---

**ಐತಿಹಾಸಿಕ ಭೌತವಾದ (Historical Materialism)**: ಆರ್ಥಿಕ ಪರಿಸ್ಥಿತಿಗಳು ಅಂತಿಮವಾಗಿ ಕಾನೂನು, ರಾಜಕೀಯ, ಸಂಸ್ಕೃತಿ ಹಾಗೂ ಸಾಮಾಜಿಕ ಅಸ್ತಿತ್ವದ ಇತರೆ ಅಂಶಗಳನ್ನು ರಚಿಸುತ್ತವೆಂದು ಭಾವಿಸುವ ಮಾರ್ಕ್ಸಿಸ್ಟ್ ಸಿದ್ಧಾಂತ.

---

**ಕಾರ್ಮಿಕರ ಸರ್ವಾಧಿಕಾರ (Dictatorship of the Proliteriat)**: ಒಂದು ತಾತ್ಕಾಲಿಕ ಕಾರ್ಮಿಕರ ರಾಜ್ಯ, ಪ್ರತಿ–ಕ್ರಾಂತಿಯನ್ನು ತಡೆಯಲು ಹಾಗೂ ಬಂಡವಾಳಶಾಹಿಯಿಂದ ಕಮ್ಯೂನಿಸ಼ಮ್‌ಗೆ ಪರಿವರ್ತನೆಯಾಗುವುದನ್ನು ಮೇಲ್ವಿಚಾರಿಸಲು ಸ್ಥಾಪಿಸಲಾದುದು.

---

**ಪೆರೆಸ್ಟ್ರಾಇಕ (Perestroika)** : ರಷ್ಯನ್ ಪದ. 'ಪುನರ್ ಸಂರಚನೆ' ಎಂಬ ಅರ್ಥ ನೀಡುತ್ತದೆ; ಕಮ್ಯೂನಿಸ್ಟ್ ಚೌಕಟ್ಟಿನೊಳಗಡೆ ಸೋವಿಯೆಟ್ ವ್ಯವಸ್ಥೆಯನ್ನು ಉದಾರೀಕರಣಗೊಳಿಸುವ ಹಾಗೂ ಪ್ರಜಾಸತ್ತಾತ್ಮಕಗೊಳಿಸುವ ಪ್ರಯತ್ನವನ್ನು ಸೂಚಿಸುವ ಒಂದು ಘೋಷವಾಕ್ಯ.

---

**ಕಾರ್ಲ್‌ಮಾರ್ಕ್ಸ್ (1818–1883)**

ಜರ್ಮನ್ ತತ್ವಶಾಸ್ತ್ರಜ್ಞ, ಅರ್ಥಶಾಸ್ತ್ರಜ್ಞ ಹಾಗೂ ರಾಜಕೀಯ ಚಿಂತಕ. ಇಪ್ಪತ್ತನೆ ಶತಮಾನದ ಕಮ್ಯೂನಿಸ಼ಮ್‌ನ ಪಿತಾಮಹನೆಂದು ಸಾಮಾನ್ಯವಾಗಿ ಬಿಂಬಿಸಲಾಗುತ್ತದೆ. ಸ್ವಲ್ಪ ಕಾಲದವರೆಗೆ ವಿಶ್ವವಿದ್ಯಾನಿಲಯದಲ್ಲಿ ಬೋಧಕರಾಗಿದ್ದ ಮಾರ್ಕ್ಸ್, ಪತ್ರಿಕೋದ್ಯಮಕ್ಕೆ ಕಾಲಿಟ್ಟು, ಸಮಾಜವಾದಿ ಚಳುವಳಿಯಲ್ಲಿ ವ್ಯಾಪಕವಾಗಿ ತೊಡಗಿಸಿಕೊಂಡರು. ಪ್ರಷ್ಯಾದಿಂದ ಹೊರಹಾಕಲ್ಪಟ್ಟ ನಂತರ ಲಂಡನ್‌ನಲ್ಲಿ ನೆಲೆ ನಿಂತು, ತನ್ನ ಸ್ನೇಹಿತ ಹಾಗೂ ಆಜನ್ಮ ಸಹಯೋಗಿ, ಫ್ರೈಡ್‌ರಿಕ್ ಎಂಜೆಲ್ಸ್‌ರ ಬೆಂಬಲದೊಂದಿಗೆ ಸಕ್ರಿಯ ಕ್ರಾಂತಿಕಾರಿ ಹಾಗೂ ಬರಹಗಾರರಾಗಿ ತನ್ನ ಉಳಿದ ಜೀವನವನ್ನು ಕಳೆದರು. 1864ರಲ್ಲಿ 'ಫಸ್ಟ್ ಇಂಟರ್‌ನ್ಯಾಷನಲ್' (First International) ಸ್ಥಾಪನೆಗೆ ಇವರು ಸಹಾಯ ನೀಡಿದರು. ಮಾರ್ಕ್ಸರ ಬೆಂಬಲಿಗರು ಹಾಗೂ ಬಕುನಿನ್‌ರ ನಾಯಕತ್ವದಲ್ಲಿನ

ಅರಾಜಕತಾವಾದಿಗಳ ನಡುವಿನ ವಿರೋಧವು ಹೆಚ್ಚಾಗುತ್ತಿದ್ದ ಕಾರಣ, ಇದು 1871ರಲ್ಲಿ ಅವನತಿ ಹೊಂದಿತು. ಮೂರು ಸಂಪುಟಗಳಲ್ಲಿರುವ 'ಕ್ಯಾಪಿಟಲ್' ([1867, 1885, 1894] 1970), ಮಾರ್ಕ್ಸ್‌ನ ಶ್ರೇಷ್ಠ ಕೃತಿ. 'ಕಮ್ಯೂನಿಸ್ಟ್ ಮ್ಯಾನಿಫೆಸ್ಟೊ' ([1848] 1967) ಅವರ ಪ್ರಸಿದ್ಧ ಹಾಗೂ ಗ್ರಾಹ್ಯ ಕೃತಿಯಾಗಿದೆ.

**ಹರ್ಬರ್ಟ್ ಮರ್ಕ್ಯೂಸ್ (1898 –1979)**

ಜರ್ಮನ್ ರಾಜಕೀಯ ತತ್ವಶಾಸ್ತ್ರಜ್ಞ, ಸಾಮಾಜಿಕ ಸಿದ್ಧಾಂತಿ ಮತ್ತು 'ಫ್ರಾಂಕ್‌ಫರ್ಟ್ ಸ್ಕೂಲ್'ನ ಸಹಸ್ಥಾಪಕ. ಹಿಟ್ಲರ್‌ನ ಜರ್ಮನಿಯ ನಿರಾಶ್ರಿತರಾಗಿದ್ದ ಇವರು 1934ರಿಂದ ಅಮೆರಿಕಾದಲ್ಲಿ ವಾಸವಿದ್ದರು. ಹೆಗೆಲ್ ಮತ್ತು ಫ್ರಾಯ್ಡ್ ಚಿಂತನೆಗಳಿಂದ ಪ್ರಭಾವಿತವಾದ ನವ–ಮಾರ್ಕ್ಸ್‌ವಾದದ ರೂಪವೊಂದನ್ನು ಅಭಿವೃದ್ಧಿಪಡಿಸಿದರು. 1960ರ ದಶಕದಲ್ಲಿ ಹೊಸ ಎಡಪಂಥದ ಪ್ರಮುಖ ಚಿಂತಕರಾಗಿ ಹಾಗೂ ವಿದ್ಯಾರ್ಥಿ ಚಳುವಳಿಯ 'ಗುರು'ವಾಗಿ ಪ್ರಸಿದ್ಧರಾದರು. ಮುಂದುವರಿದ ಕೈಗಾರಿಕಾ ಸಮಾಜವನ್ನು; ವಾದ ಮತ್ತು ಚರ್ಚೆಯನ್ನು ನಿಗ್ರಹಿಸುವ, ವಿರೋಧವನ್ನು ಹೀರಿಕೊಳ್ಳುವ, ಎಲ್ಲವನ್ನೂ ಒಳಗೊಂಡ ದಮನಕಾರಿ ವ್ಯವಸ್ಥೆಯಾಗಿ ಚಿತ್ರಿಸಿದರು. ಅಭಿವೃದ್ಧಿಶೀಲ ವಿಶ್ವದಲ್ಲಿನ ಕಾರ್ಮಿಕ ವರ್ಗಕ್ಕೆ ಬದಲಾಗಿ ವಿದ್ಯಾರ್ಥಿಗಳು, ಜನಾಂಗೀಯ ಅಲ್ಪಸಂಖ್ಯಾತರು, ಮಹಿಳೆಯರು ಮತ್ತು ದುಡಿಯುವ ಅಂಚಿನ ಗುಂಪುಗಳ ಮೇಲೆ ಮರ್ಕ್ಯೂಸ್ ವಿಶ್ವಾಸವಿಟ್ಟಿದ್ದರು. ಇವರ ಅತ್ಯಂತ ಪ್ರಮುಖ ಕೃತಿಗಳೆಂದರೆ; 'ರೀಸನ್ ಅಂಡ್ ರೆವಲ್ಯೂಷನ್' (1941), 'ಎರೋಸ್ ಅಂಡ್ ಸಿವಿಲೈಸ್ೇಷನ್' (1958) ಹಾಗೂ 'ಒನ್ ಡೈಮೆನ್ಷನಲ್ ಮ್ಯಾನ್' (1964).

**ಎಡ್ವರ್ಡ್ ಬರ್ನ್‌ಸ್ಟೀನ್ (1850–1932)**

ಜರ್ಮನ್ ಸಮಾಜವಾದಿ ರಾಜಕಾರಣಿ ಹಾಗೂ ಸಿದ್ಧಾಂತಿ. ಜರ್ಮನ್ ಸೋಷಿಯಲ್ ಡೆಮಾಕ್ರಾಟಿಕ್ ಪಾರ್ಟಿಯ (SPD) ಪ್ರಾರಂಭಿಕ ಸದಸ್ಯರು. ಸಾಂಪ್ರದಾಯಿಕ ಮಾರ್ಕ್ಸ್‌ವಾದವನ್ನು ಪರಿಷ್ಕರಿಸುವ ಹಾಗೂ ಆಧುನೀಕರಣಗೊಳಿಸುವ ಪ್ರಯತ್ನವಾದ 'ಪರಿಷ್ಕರಣವಾದ'ದ (revisionism) ಪ್ರಮುಖ ಪ್ರತಿಪಾದಕರಲ್ಲೊಬ್ಬರು. ಬ್ರಿಟಿಷ್ ಫೇಬಿಯನ್‌ವಾದ (Fabianism) ಹಾಗೂ ಕಾಂಟ್‌ರ ತತ್ವಗಳಿಂದ ಪ್ರಭಾವಿತರಾಗಿ ವರ್ಗ ಸಂಘರ್ಷವಿಲ್ಲದ ಹಾಗೂ ಸಮಾಜವಾದಕ್ಕೆ ಶಾಂತಿಯುತ ಪರಿವರ್ತನೆಯ ಘೋಷಣೆಯನ್ನು ಒತ್ತಿ ಹೇಳಿದ ಪ್ರಾಯೋಗಿಕ ವಿಮರ್ಶೆಯನ್ನು ಅಭಿವೃದ್ಧಿಪಡಿಸಿದರು. ಇದನ್ನು 'ಎವಲ್ಯೂಷನರಿ ಸೋಷಿಯಲಿಸಮ್'ನಲ್ಲಿ ([1898] 1962) ವಿವರಿಸಲಾಗಿದೆ. ಪ್ರಥಮ ವಿಶ್ವಯುದ್ಧವನ್ನು ವಿರೋಧಿಸಿ SPDಯನ್ನು ತೊರೆದರಾದರೂ ಆ ನಂತರ ಪಕ್ಷಕ್ಕೆ ಹಿಂತಿರುಗಿ ಎಬರ್ಟ್ ಸರ್ಕಾರದಲ್ಲಿ (1918–19) ಆರ್ಥಿಕ ಹಾಗೂ ಹಣಕಾಸು ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದರು. ಆಧುನಿಕ ಸಾಮಾಜಿಕ ಪ್ರಜಾಪ್ರಭುತ್ವದ ಸ್ಥಾಪಕರಲ್ಲೊಬ್ಬರಾಗಿ ಬರ್ನ್‌ಸ್ಟೀನ್‌ರನ್ನು ಪರಿಗಣಿಸಲಾಗುತ್ತದೆ.

**ಸಾಮಾಜಿಕ ಪ್ರಜಾಪ್ರಭುತ್ವ (Social Democracy)**

ಸಾಮಾಜಿಕ ಪ್ರಜಾಪ್ರಭುತ್ವದಲ್ಲಿ ಸಾಂಪ್ರದಾಯಿಕ ಉದಾರವಾದ ಅಥವಾ ಮೂಲಭೂತವಾದಿ ಸಮಾಜವಾದದಲ್ಲಿರುವ ಸೈದ್ಧಾಂತಿಕ ಸುಸಂಬದ್ಧತೆಯಿಲ್ಲ. ಮೊದಲನೆಯದು ತಾತ್ವಿಕವಾಗಿ ಮಾರುಕಟ್ಟೆಗೆ ಬದ್ಧವಾಗಿದ್ದರೆ ಎರಡನೆಯದು ಸಾಮಾನ್ಯ ಮಾಲೀಕತ್ವದ ಪರವಾಗಿದೆ. ಸಾಮಾಜಿಕ ಪ್ರಜಾಪ್ರಭುತ್ವವು ಮಾರುಕಟ್ಟೆ ಮತ್ತು ರಾಜ್ಯದ ನಡುವಿನ ಹಾಗೂ ವ್ಯಕ್ತಿ ಮತ್ತು ಸಮುದಾಯದ ನಡುವಿನ ಸಮತೋಲನದ ಪರವಾಗಿದೆ. ಸಂಪತ್ತನ್ನು ಸೃಷ್ಟಿಸಲು ಬಂಡವಾಳಶಾಹಿಯು ಮಾತ್ರವೇ ವಿಶ್ವಾಸಾರ್ಹವಾದ ವಿಧಾನವಾಗಿದೆ ಎಂಬುದು ಒಂದು ಕಡೆಯಾದರೆ, ಮಾರುಕಟ್ಟೆ ತತ್ವಗಳಿಗೆ ಬದಲಾಗಿ ನೈತಿಕ ತತ್ವಗಳ ಪ್ರಕಾರ ಸಂಪತ್ತಿನ ಹಂಚಿಕೆಯಾಗಬೇಕೆಂಬ ಅಪೇಕ್ಷೆ ಇನ್ನೊಂದು ಕಡೆಗಿದ್ದು; ಸಾಮಾಜಿಕ ಪ್ರಜಾಪ್ರಭುತ್ವದ ಆಂತರ್ಯದಲ್ಲಿ ಇವೆರಡರ ರಾಜಿಯನ್ನು ಕಾಣಬಹುದಾಗಿದೆ. ಸಮಾಜವಾದಿಗಳಿಗೆ ಈ ಮಾರುಕಟ್ಟೆ ಪರಿವರ್ತನೆಯು ಕಷ್ಟಕರವೂ, ಕೆಲವೊಮ್ಮೆ ನೋವಿನದೂ ಆಗಿತ್ತು. ಈ ಪ್ರಕ್ರಿಯೆಯು ಸೈದ್ಧಾಂತಿಕ ನಂಬಿಕೆಗಿಂತ ಹೆಚ್ಚಾಗಿ ಪ್ರಾಯೋಗಿಕ ಸನ್ನಿವೇಶಗಳು ಹಾಗೂ ಚುನಾವಣಾ ಲಾಭಗಳಿಂದ ಆಜ್ಞಾಪಿಸಲ್ಪಡುತ್ತದೆ.

ಆಧುನಿಕ ಸಾಮಾಜಿಕ ಪ್ರಜಾಪ್ರಭುತ್ವ ಚಿಂತನೆಯ ಪ್ರಧಾನ ಲಕ್ಷಣವೇನೆಂದರೆ ಸಮಾಜದಲ್ಲಿರುವ ದುರ್ಬಲರು ಮತ್ತು ಅಸಹಾಯಕರ ಬಗೆಗಿನ ಕಾಳಜಿಯಾಗಿದೆ. ಸಾಮಾಜಿಕ ಪ್ರಜಾಪ್ರಭುತ್ವವನ್ನು ಕೇವಲ ಸಾಮಾಜಿಕ ಸಂಪ್ರದಾಯಕ್ಕೆ ಸೀಮಿತಗೊಳಿಸಲಾಗದೆಂಬ ಒಂದು ಭಾವನೆಯೂ ಇದೆ. ಅನುಕಂಪ ಮತ್ತು ಸಾಮಾನ್ಯ ಮಾನವೀಯತೆ, ಸಕಾರಾತ್ಮಕ ಸ್ವಾತಂತ್ರ ಮತ್ತು ಸಮಾನ ಅವಕಾಶಗಳೆಡೆಗಿನ ಉದಾರ ಬದ್ಧತೆ ಅಥವಾ ಪಿತೃಕರ್ತವ್ಯ ಮತ್ತು ಆರೈಕೆಯ ನಿಟ್ಟಿನ ಸಂಪ್ರದಾಯವಾದಿ ಭಾವನೆಗಳಿಂದ ಇದು ಪ್ರಭಾವಿತವಾಗಿದೆ. ಅದರ ಮೂಲಗಳು ಏನೇ ಇರಲಿ, ಯೋಗಕ್ಷೇಮವಾದ, ಮರುವಿತರಣೆ ಹಾಗೂ ಸಾಮಾಜಿಕ ನ್ಯಾಯದ ತತ್ವಗಳ ಮೇಲೆ ಇದನ್ನು ಅಭಿವ್ಯಕ್ತಗೊಳಿಸಲಾಗುತ್ತದೆ. ಎರಡನೇ ವಿಶ್ವಯುದ್ಧದ ನಂತರದ ಪ್ರಾರಂಭದ ಅವಧಿಯಲ್ಲಿ ವ್ಯಾಪಕವಾಗಿ ಒಪ್ಪಿಕೊಳ್ಳಲಾದ ಕೇನ್ಸ್‌ನ ಸಾಮಾಜಿಕ ಪ್ರಜಾಪ್ರಭುತ್ವದ ರೂಪದಲ್ಲಿದ್ದ ಇದು ರಾಜ್ಯ ಹಸ್ತಕ್ಷೇಪದ ಮೂಲಕ ಬಂಡವಾಳಶಾಹಿಯನ್ನು 'ಮಾನವೀಕೃತ'ಗೊಳಿಸುವ ಸ್ಪಷ್ಟ ಅಪೇಕ್ಷೆಯನ್ನೊಳಗೊಂಡಿತ್ತು. ಕೇನ್ಸ್‌ರ ಆರ್ಥಿಕ ನೀತಿಗಳು ಪೂರ್ಣೋದ್ಯೋಗವನ್ನು ಸೃಷ್ಟಿಸುತ್ತವೆ. ಮಿಶ್ರ ಆರ್ಥಿಕತೆಯು ಸರ್ಕಾರವು ಆರ್ಥಿಕ ಚಟುವಟಿಕೆಯನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ ಹಾಗೂ ಪ್ರಗತಿಪರ ತೆರಿಗೆಯ ಮೂಲಕ ಹಣಕಾಸು ಒದಗಿಸಲಾದ ಸಮಗ್ರ ಕಲ್ಯಾಣದ ನಿಟ್ಟಿನ ವ್ಯವಸ್ಥೆಗಳು ಶ್ರೀಮಂತರು ಮತ್ತು ಬಡವರ ನಡುವಿನ ಅಂತರವನ್ನು ಕಡಿಮೆ ಮಾಡುತ್ತದೆಂದು ನಂಬಲಾಗಿತ್ತು.

1980ರ ದಶಕದಿಂದೀಚೆಗೆ ಸಾಮಾಜಿಕ ಪ್ರಜಾಪ್ರಭುತ್ವದಲ್ಲಿ ಪರಿಷ್ಕರಣವಾದದ ಮುಂದುವರಿದ ಪ್ರಕ್ರಿಯೆಯು ನಡೆಯಿತು. ಇದು ಅನೇಕ ಕಾರಣಗಳಿಂದಾಗಿ ಸಂಭವಿಸಿತು. ಮೊದಲಿಗೆ, ವರ್ಗ ಸಂರಚನೆಯಲ್ಲಿನ ಬದಲಾವಣೆಗಳು; ಅದರಲ್ಲೂ ಮುಖ್ಯವಾಗಿ ವೃತ್ತಿಪರ ಮತ್ತು ಗುಮಾಸ್ತ ವೃತ್ತಿಗಳ ಬೆಳವಣಿಗೆಯು, ಸಾಂಪ್ರದಾಯಿಕ ಶ್ರಮಿಕ ವರ್ಗದ ಹಿತಾಸಕ್ತಿಯನ್ನು ಗುರಿಯಾಗಿರಿಸಿಕೊಂಡು ರೂಪಿಸಿದ ಸಾಮಾಜಿಕ ಪ್ರಜಾಸತ್ತಾತ್ಮಕ ನೀತಿಗಳು ಚುನಾವಣಾ ದೃಷ್ಟಿಯಿಂದ ಕಾರ್ಯಸಾಧುವಲ್ಲ ಎಂಬುದನ್ನು ಸ್ಪಷ್ಟಪಡಿಸಿತು. ಎರಡನೆಯದಾಗಿ, ಕೇನ್ಸ್‌ವಾದದಂತಹ (Keynisianism) ಎಲ್ಲಾ

ನಿರ್ದಿಷ್ಟ ರಾಷ್ಟ್ರೀಯ ರೂಪದ ಆರ್ಥಿಕ ನಿರ್ವಹಣೆಯನ್ನು ಜಾಗತೀಕರಣವು ನಿರರ್ಥಕಗೊಳಿಸಿದಂತೆ ಕಂಡುಬಂದಿತು. ಮೂರನೆಯದಾಗಿ, ಮುಖ್ಯವಾಗಿ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ರಾಷ್ಟ್ರೀಕೃತ ಕೈಗಾರಿಕೆಗಳು ಹಾಗೂ ಆರ್ಥಿಕ ಯೋಜನೆಯು ಅದಕ್ಷವಾದುದೆಂಬುದು ಖಾತರಿಯಾಯಿತು. ನಾಲ್ಕನೆಯದಾಗಿ, ಕಮ್ಯೂನಿಸ಼ಮ್‌ನ ಕುಸಿತವು ಕೇವಲ ರಾಜ್ಯ ಸಾಮೂಹಿಕೀಕರಣವನ್ನಷ್ಟೇ (collectivization) ಅಲ್ಲದೆ, 'ಮೇಲಿನಿಂದ ಕೆಳ ಹಂತದವರೆಗಿನ' (top-down) ಎಲ್ಲ ಸಾಮಾಜಿಕ ಮಾದರಿಗಳ ಬೌದ್ಧಿಕ ಹಾಗೂ ಸೈದ್ಧಾಂತಿಕ ವಿಶ್ವಾಸಾರ್ಹತೆಯನ್ನು ದುರ್ಬಲಗೊಳಿಸಿತು. ಇಂತಹ ಸನ್ನಿವೇಶದಲ್ಲಿ, 'ಸಾಂಪ್ರದಾಯಿಕ' ಸಾಮಾಜಿಕ ಪ್ರಜಾಪ್ರಭುತ್ವವನ್ನು ಕುರಿತ ಮರುಚಿಂತನೆ ಅಥವಾ ಪರಿಷ್ಕರಣೆಯು ರಾಜಕಾರಣಿಗಳು ಹಾಗೂ ರಾಜಕೀಯ ಪಕ್ಷಗಳಿಗೆ ಫ್ಯಾಷನ್ ಎಂಬಂತಾಗಿ, ಈ ಪ್ರವೃತ್ತಿಯು ಕ್ರಮೇಣ ವರ್ಧಿಸತೊಡಗಿತು.

---

**ಮೂಲಭೂತವಾದಿ ಸಮಾಜವಾದ (Fundamentalist Socialism):** ಬಂಡವಾಳಶಾಹಿಯನ್ನು ನಿರ್ಮೂಲನೆ ಮಾಡಿ, ಅದರ ಬದಲಿಗೆ ಗುಣಾತ್ಮಕವಾಗಿ ವಿಭಿನ್ನ ರೂಪದ ಸಮಾಜವನ್ನು ಸ್ಥಾಪಿಸಬೇಕೆನ್ನುವ ಸಮಾಜವಾದದ ಒಂದು ರೂಪ.

---

**ಜಾನ್ಸ್ ರಾಲ್ಸ್ (1921–2002)**

ಅಮೆರಿಕಾದ ವಿದ್ವಾಂಸ ಹಾಗೂ ರಾಜಕೀಯ ಚಿಂತಕ. ಇವರ ಪ್ರಮುಖ ಕೃತಿ, 'ಎ ಥಿಯರಿ ಆಫ್ ಜಸ್ಟೀಸ್'ನ್ನು (1970) ಎರಡನೆ ವಿಶ್ವಯುದ್ಧದ ನಂತರ ಬರೆಯಲಾದ ರಾಜಕೀಯ ತತ್ವಶಾಸ್ತ್ರದ ಅತ್ಯಂತ ಮಹತ್ವದ ಇಂಗ್ಲಿಷ್ ಕೃತಿಯೆಂದು ಪರಿಗಣಿಸಲಾಗುತ್ತದೆ. ಇದು ಆಧುನಿಕ ಉದಾರವಾದಿಗಳು ಹಾಗು ಸಾಮಾಜಿಕ ಪ್ರಜಾಪ್ರಭುತ್ವವಾದಿಗಳನ್ನು ಸಮಾನವಾಗಿ ಪ್ರಭಾವಿಸಿದೆ. ಸಾಮಾಜಿಕ ಅಸಮಾನತೆಯು ಕನಿಷ್ಠ ಅನುಕೂಲತೆ ಪಡೆಯುವವರಿಗೆ ಲಾಭ ತಂದುಕೊಡುವುದಾದರೆ ಮಾತ್ರ ಅದನ್ನು ಒಪ್ಪಿಕೊಳ್ಳಬಹುದೆಂಬ ಆಧಾರದ ಮೇಲೆ 'ನಿಷ್ಪಕ್ಷತೆಯಾಗಿ ನ್ಯಾಯ' (Justice as Fairness) ಎಂಬ ಸಿದ್ಧಾಂತವನ್ನು ರಾಲ್ಸ್ ಪ್ರತಿಪಾದಿಸಿದರು. ಸಮಾನತೆಯ ಕುರಿತಾದ ಈ ಕಲ್ಪನೆಯು, ಬಹುತೇಕ ಜನರು ಅವರ ಸ್ವಂತ ಪ್ರತಿಭೆಗಳು ಮತ್ತು ಸಾಮರ್ಥ್ಯಗಳ ಅರಿವಿಲ್ಲದೆ ಸಮಾನತಾವಾದಿ ಸಮಾಜದಲ್ಲಿ ಬದುಕುವುದನ್ನು ಆಯ್ಕೆ ಮಾಡಿಕೊಳ್ಳುತ್ತಾರೆಯೆ ಹೊರತು ಅಸಮಾನತಾವಾದಿ ಸಮಾಜದಲ್ಲಲ್ಲ ಎಂಬ ರಾಲ್ಸ್‌ನ ಆಳವಾದ ನಂಬಿಕೆಯಿಂದ ಬಂದುದಾಗಿತ್ತು. ಬಹುತೇಕ ಜನರಿಗೆ ಶ್ರೀಮಂತರಾಗಬೇಕೆಂಬ ಅಪೇಕ್ಷೆಗಿಂತ ತಾವು ಬಡವರಾಗಿದ್ದೇವೆ ಎಂಬ ಭಯವು ಹೆಚ್ಚಾಗಿರುತ್ತದೆ. ಯೋಗಕ್ಷೇಮದ ಮರುಹಂಚಿಕೆಯನ್ನು ನಿಷ್ಪಕ್ಷತೆಯ ಆಧಾರದಲ್ಲಿ ಸಮರ್ಥಿಸಿಕೊಳ್ಳಬಹುದು. 'ಪೊಲಿಟಿಕಲ್ ಲಿಬರಲಿಸಮ್' (1993) ಹಾಗೂ 'ಲಾಸ್ ಆಫ್ ಪೀಪಲ್ಸ್' (1999) ರಾಲ್ಸ್‌ನ ಇತರ ಕೃತಿಗಳಾಗಿವೆ.

**'ಹೊಸ' ಸಾಮಾಜಿಕ ಪ್ರಜಾಪ್ರಭುತ್ವ ('New' Social Democracy)**

'ಹೊಸ' ಸಾಮಾಜಿಕ ಪ್ರಜಾಪ್ರಭುತ್ವವು (ಕೆಲವೊಮ್ಮೆ ಇದನ್ನು 'ನವ–ಪರಿಷ್ಕರಣವಾದ' ಅಥವಾ 'ಮೂರನೆ ಮಾರ್ಗ' ಎನ್ನಲಾಗುತ್ತದೆ). ಜರ್ಮನಿ, ಇಟಲಿ, ನೆದರ್ಲೆಂಡ್ಸ್, ಯುನೈಟೆಡ್ ಕಿಂಗ್‌ಡಮ್, ನ್ಯೂಜಿಲೆಂಡ್ ಮುಂತಾದ ದೇಶಗಳಲ್ಲಿ ಸಾಮಾಜಿಕ ಪ್ರಜಾಸತ್ತಾತ್ಮಕ ಪಕ್ಷಗಳ ವಿವಿಧ ಪ್ರಯತ್ನಗಳನ್ನು ಸೂಚಿಸುವ ಪದವಾಗಿದೆ. ಈ ಪ್ರಯತ್ನಗಳ ಗುರಿಯು, ಹಳೆಯ ಶೈಲಿಯ ಸಾಮಾಜಿಕ ಪ್ರಜಾಪ್ರಭುತ್ವವನ್ನು, ಕನಿಷ್ಠಪಕ್ಷ ನವ ಉದಾರವಾದದ ಚುನಾವಣಾ ಆಕರ್ಷಣೆಗಳೊಂದಿಗೆ ಸಮನ್ವಯಗೊಳಿಸುವುದಾಗಿದೆ. ಹೊಸ ಸಾಮಾಜಿಕ ಪ್ರಜಾಪ್ರಭುತ್ವವು ನಿಖರವಾಗಿಲ್ಲದೆ ಅನೇಕ ವ್ಯಾಖ್ಯಾನಗಳಿಗೆ ಒಳಪಟ್ಟಿದ್ದರೂ ಇದರಲ್ಲಿ ಕೆಲವು ವಿಶಿಷ್ಠ ಅಂಶಗಳನ್ನು ಗುರುತಿಸಬಹುದು. ಇವುಗಳಲ್ಲಿ ಮೊದಲನೆಯದು, 'ಮೇಲಿನಿಂದ–ಕೆಳ ಹಂತದವರೆಗಿನ' ರಾಜ್ಯ ಹಸ್ತಕ್ಷೇಪ ರೂಪದ ಸಮಾಜವಾದವು ಸತ್ತು ಹೋಗಿದೆಯೆಂಬ ನಂಬಿಕೆ: 1995ರಲ್ಲಿ ಮತ್ತೆ ಬರೆಯಲಾದ ಯುನೈಟೆಡ್ ಕಿಂಗ್‌ಡಮ್‌ನ ಲೇಬರ್ ಪಕ್ಷದ ಸಂವಿಧಾನದಲ್ಲಿನ 4ನೇ ಉಪವಾಕ್ಯದಲ್ಲಿ ಸೂಚಿಸಲಾದ 'ಕ್ರಿಯಾತ್ಮಕ ಮಾರುಕಟ್ಟೆ ಆರ್ಥಿಕತೆಗೆ' ಯಾವುದೇ ಪರ್ಯಾಯವಿಲ್ಲ. ಜಾಗತೀಕರಣದ ಸಾರ್ವತ್ರಿಕ ಸ್ವೀಕೃತಿ ಹಾಗೂ ಬಂಡವಾಳಶಾಹಿಯು 'ಜ್ಞಾನ ಅರ್ಥವ್ಯವಸ್ಥೆ'ಯಾಗಿ ರೂಪಾಂತರವಾಗಿದೆಯೆಂಬ ನಂಬಿಕೆ ಇಲ್ಲಿ ಕಂಡುಬರುತ್ತದೆ. ಈ ಜ್ಞಾನ ಅರ್ಥವ್ಯವಸ್ಥೆಯು ಮಾಹಿತಿ ತಂತ್ರಜ್ಞಾನ, ವೈಯಕ್ತಿಕ ಕೌಶಲ್ಯಗಳು, ದುಡಿಮೆ ಹಾಗೂ ಉದ್ಯಮಗಳೆರಡರ ನಮ್ಯತೆಗಳನ್ನು ಮೌಲಿಕವಾದುವೆಂದು ಪರಿಗಣಿಸುತ್ತದೆ. ಈ ದೃಷ್ಟಿಯಿಂದ ನೋಡಿದಾಗ, ರಾಜ್ಯವನ್ನು ಪೂರ್ಣಪ್ರಮಾಣದ ಸಾಮಾಜಿಕ ಪುನರ್ರಚನೆಯ ಸಾಧನವೆಂಬಂತೆ ನೋಡುವುದಕ್ಕೆ ಬದಲಾಗಿ, ಶಿಕ್ಷಣ ಮತ್ತು ಕೌಶಲಗಳ ವಿಕಾಸದ ಮೂಲಕ ಅಂತಾರಾಷ್ಟ್ರೀಯ ಸ್ಪರ್ಧಾತ್ಮಕತೆಯನ್ನು ಪ್ರೋತ್ಸಾಹಿಸುವ ವಿಧಾನವಾಗಿ ಪರಿಗಣಿಸಲಾಗುತ್ತದೆ..

ಹೊಸ ಸಾಮಾಜಿಕ ಪ್ರಜಾಪ್ರಭುತ್ವವಾದಿ ರಾಜಕೀಯದ ಮತ್ತೊಂದು ಲಕ್ಷಣವೇನೆಂದರೆ, ಇದು ಸಾಮಾಜಿಕ ಸಮಾನತಾವಾದದಿಂದ (ಇದನ್ನು 'ಸಮಾನಗೊಳಿಸುವ' ರೂಪವಾಗಿ ನೋಡಲಾಗುತ್ತದೆ) ಬೇರ್ಪಟ್ಟು, ಅದಕ್ಕೆ ಬದಲಾಗಿ ಅವಕಾಶದ ಸಮಾನತೆ ಹಾಗೂ ಅರ್ಹತಾಶಾಹಿಯ (meritocracy) ಉದಾರ ವಿಚಾರಗಳನ್ನು ತನ್ನದಾಗಿಸಿಕೊಂಡಿದೆ. ನವ–ಪರಿಷ್ಕರಣವಾದಿ ರಾಜಕಾರಣಿಗಳು ಯೋಗಕ್ಷೇಮ ಸುಧಾರಣೆಯನ್ನು ಸಾಮಾನ್ಯವಾಗಿ ಅನುಮೋದಿಸುತ್ತಾರೆ. ಇವರು ನವ–ಉದಾರವಾದಿಗಳ, 'ನಿಮ್ಮ ಸ್ವಂತ ಕಾಲುಗಳ ಮೇಲೆ ನಿಲ್ಲುವ' ಹಾಗೂ 'ಸಾಂಪ್ರದಾಯಿಕ' ಸಾಮಾಜಿಕ–ಪ್ರಜಾಸತ್ತಾತ್ಮಕ ಬದ್ಧತೆಯಾದ 'ತೊಟ್ಟಿಲಿನಿಂದ ಸಮಾಧಿಯವರೆಗೆ' ಯೋಗಕ್ಷೇಮ ಎಂಬ ಎರಡು ಸಂಗತಿಗಳನ್ನೂ ತಿರಸ್ಕರಿಸುತ್ತಾರೆ. ಇದಕ್ಕೆ ಬದಲಾಗಿ, 'ಜನರು ತಮಗೆ ತಾವೇ ಸಹಾಯ ಮಾಡಿಕೊಳ್ಳಲು ಸಹಾಯ ಮಾಡುವುದು ಅಥವಾ ಅಮೆರಿಕಾದ ಮಾಜಿ ಅಧ್ಯಕ್ಷ ಬಿಲ್ ಕ್ಲಿಂಟನ್ ಹೇಳಿರುವಂತೆ ಜನರ 'ಕೈ ಹಿಡಿದು ಮೇಲೆತ್ತಬೇಕೇ ಹೊರತು, ಕೈಯನ್ನೇ ನೀಡುವುದಲ್ಲ' (a hand up, not a hand out) ಎಂಬ ಆಧುನಿಕ ಉದಾರ ನಂಬಿಕೆಗೆ ಇವರು ಆದ್ಯತೆ ನೀಡುತ್ತಾರೆ. ಇದು 'ಕಾರ್ಯಕ್ಷೇಮ ರಾಜ್ಯ' (Workfare state) ಎಂದು ಕರೆಯಲ್ಪಡುವ ವ್ಯವಸ್ಥೆಗೆ ಬೆಂಬಲ ನೀಡಿದೆ. ಇಲ್ಲಿ ಸರ್ಕಾರವು, ಸೌಲಭ್ಯಗಳು ಅಥವಾ ಶಿಕ್ಷಣದ ಒದಗಿಸುವಿಕೆಯನ್ನು ಷರತ್ತುಬದ್ಧಗೊಳಿಸಿದೆ. ಅಂದರೆ ಯಾರು ಉದ್ಯೋಗ ಮಾಡಲು ಹಾಗೂ ಸ್ವಾವಲಂಬಿಗಳಾಗಲು ಬಯಸುತ್ತಾರೋ ಅವರಿಗೆ ಸೌಲಭ್ಯಗಳು ಸಿಗುತ್ತವೆ. ಹೊಸ ಸಾಮಾಜಿಕ ಪ್ರಜಾಪ್ರಭುತ್ವದ ಟೀಕಾಕಾರರ ಪ್ರಕಾರ ಇದು

ವಿರೋಧಾಭಾಸದಿಂದ ಕೂಡಿದೆ. ಏಕೆಂದರೆ ಇದು ಮಾರುಕಟ್ಟೆಯ ಚಲನಾತ್ಮಕತೆಯನ್ನು ಅನುಮೋದಿಸುತ್ತದೆ ಮತ್ತು ಅದೇ ಸಂದರ್ಭದಲ್ಲಿ ಅದರ ಸಾಮಾಜಿಕ ವಿಘಟನಾ ಪ್ರವೃತ್ತಿಯ ಬಗ್ಗೆಯೂ ಎಚ್ಚರಿಸುತ್ತದೆ ಅಥವಾ ಕೇಂದ್ರದ–ಎಡಪಂಥೀಯ ಯೋಜನೆಗಿಂತ ಹೆಚ್ಚಾಗಿ ಇದು ಬಲಪಂಥೀಯತೆಯೆಡೆಗಿನ ಬದಲಾವಣೆಯಾಗಿದೆ.

**ಪರಿಕಲ್ಪನೆ:**

**ಮೂರನೆ ಮಾರ್ಗ**

ಮೂರನೆ ಮಾರ್ಗ ಎಂಬ ಶಬ್ದವು ಬಂಡವಾಳಶಾಹಿ ಹಾಗೂ ಸಮಾಜವಾದಗಳೆರಡಕ್ಕೂ ಪರ್ಯಾಯವಾದ ವಿಚಾರವನ್ನು ಸಾರಾಂಶ ರೂಪದಲ್ಲಿ ಒಳಗೊಂಡಿದೆ. ಪ್ರಾರಂಭದಲ್ಲಿ ಫ್ಯಾಸಿಸ್ಟ್‌ಗಳು ಬಳಸುತ್ತಿದ್ದ ಈ ಪದವು ಈಗ 'ಹೊಸ' ಅಥವಾ ಆಧುನೀಕರಣಗೊಂಡ ಸಾಮಾಜಿಕ ಪ್ರಜಾಪ್ರಭುತ್ವದೊಂದಿಗೆ ಸಂಬಂಧವನ್ನು ಹೊಂದಿದೆ. ಇಂತಹ ಸಂದರ್ಭದಲ್ಲಿ ಮೂರನೆ ಮಾರ್ಗವು ಹಳೆಯ ಮಾದರಿಯ ಸಾಮಾಜಿಕ ಪ್ರಜಾಪ್ರಭುತ್ವ ಹಾಗೂ ನವ–ಉದಾರವಾದಕ್ಕೆ ಪರ್ಯಾಯವಾಗಿದೆ. ಇವುಗಳಲ್ಲಿ ಮೊದಲನೆಯದನ್ನು; ಅದು, ರಾಜ್ಯತ್ವ ಸಂರಚನೆಗಳನ್ನು ಹೊಂದಿದ್ದು, ಆಧುನಿಕ ಜ್ಞಾನಾಧಾರಿತ ಹಾಗೂ ಮಾರುಕಟ್ಟೆ ಆಧಾರಿತ ಆರ್ಥಿಕತೆಗೆ ಸೂಕ್ತವಲ್ಲವೆಂಬ ಕಾರಣದಿಂದಾಗಿ ತಿರಸ್ಕರಿಸಲಾಯಿತು. ಎರಡನೆಯದನ್ನು, ಸಮಾಜದ ನೈತಿಕ ಅಡಿಪಾಯಗಳನ್ನು ಹಾಳು ಮಾಡುವ ಎಲ್ಲರಿಗೂ ಮುಕ್ತವಾದ ವಾತಾವರಣವನ್ನು ಸೃಷ್ಟಿಸುತ್ತದೆಂಬ ಕಾರಣದಿಂದ ತಿರಸ್ಕರಿಸಲಾಯಿತು.

**ರಾಜಕೀಯ ಪ್ರಕ್ರಿಯೆಗಳು...**

**ಕಮ್ಯೂನಿಸಮ್‌ನ ಅವನತಿ: ಉದಾರ–ಪ್ರಜಾಪ್ರಭುತ್ವದ ವಿಜಯ?**

**ಘಟನೆಗಳು: 1989**ರ ಮಹತ್ವಪೂರ್ಣ ವರ್ಷದಲ್ಲಿ ಸಂಭವಿಸಿದ ಕ್ರಾಂತಿಗಳ ಸರಣಿಯು ಕಮ್ಯೂನಿಸಮ್‌ನ ಅವನತಿಯನ್ನು ಚುರುಕುಗೊಳಿಸಿತು. ಕಮ್ಯೂನಿಸ್ಟ್ ಆಳ್ವಿಕೆಯ ವಿರುದ್ಧದ ಮೊಟ್ಟ ಮೊದಲ ಜನಪ್ರಿಯ ಸವಾಲು, 1989ರಲ್ಲಿ ಚೀನಾದ ಬೀಜಿಂಗ್‌ನ ಟಿಯಾನನ್‌ಮೆನ್ ಸ್ಕ್ವೇರ್‌ನಲ್ಲಿ ನಡೆದ ಪ್ರತಿಭಟನೆಗಳಾಗಿದ್ದವು. ಏಪ್ರಿಲ್ 4ರಂದು ಪ್ರಾರಂಭವಾದ ಈ ಪ್ರತಿಭಟನೆಗಳನ್ನು ಸೇನಾ ಕಾರ್ಯಾಚರಣೆಯ ಮೂಲಕ ಜೂನ್ 4ರಂದು ಹತ್ತಿಕ್ಕಲಾಯಿತು. ಆದಾಗ್ಯೂ, ಇದಾದ ಮರುದಿನವೇ ಪೂರ್ವ ಯುರೋಪಿನಲ್ಲಿ ಇಂತಹ ಘಟನೆಗಳು ತ್ವರಿತಗೊಂಡವು. ಹೊಸದಾಗಿ ಕಾನೂನುಬದ್ಧಗೊಳಿಸಿದ ಸ್ವತಂತ್ರ ಟ್ರೇಡ್ ಯೂನಿಯನ್ ಚಳವಳಿಯಾದ ಸಾಲಿಡಾರಿಟಿಯು ಪಾರ್ಲಿಮೆಂಟರಿ ಚುನಾವಣೆಗಳಲ್ಲಿ ಎಲ್ಲಾ ಸ್ಥಾನಗಳಲ್ಲಿಯೂ ಜಯಗಳಿಸಿತು. ಇದರ ಪರಿಣಾಮವಾಗಿ ಸೆಪ್ಟೆಂಬರ್ ಹೊತ್ತಿಗೆ ಈಸ್ಟರ್ನ್ ಬ್ಲಾಕ್‌ನಲ್ಲಿ ಪ್ರಪ್ರಥಮ ಕಮ್ಯೂನಿಸ್ಟೇತರ ಸರ್ಕಾರದ ರಚನೆಯಾಯಿತು. ಅಕ್ಟೋಬರ್‌ನಲ್ಲಿ ಹಂಗರಿಯ ಪಾರ್ಲಿಮೆಂಟ್, ಬಹುಪಕ್ಷೀಯ ಚುನಾವಣೆಗಳಿಗೆ ಅವಕಾಶವನ್ನು ನೀಡುವ ಕಾಯ್ದೆಯನ್ನು ಅಂಗೀಕರಿಸಿತು. ಇದು ಅಂತಿಮವಾಗಿ ಎರಡನೆ ಕಮ್ಯೂನಿಸ್ಟೇತರ ಸರ್ಕಾರದ ಸ್ಥಾಪನೆಗೆ ಕಾರಣವಾಯಿತು. ಸೋವಿಯೆಟ್ ಒಕ್ಕೂಟದ ಕಟ್ಟಾ ಈಸ್ಟರ್ನ್

ಬ್ಲಾಕ್ ಅನುಯಾಯಿಯಾಗಿದ್ದ ಪೂರ್ವ ಜರ್ಮನಿಯಲ್ಲಿ ರಾಜಕೀಯ ಬದಲಾವಣೆಗಾಗಿ ಒತ್ತಡವು ಹೆಚ್ಚಾಯಿತು. ಸಾವಿರಾರು ಪೂರ್ವ ಜರ್ಮನ್ನರು ಹಂಗರಿಯ ಮುಖಾಂತರ ಪಶ್ಚಿಮ ಜರ್ಮನಿಗೆ ಪರಾರಿಯಾದರು. ಹೆಚ್ಚಾಗುತ್ತಿದ್ದ ಪ್ರತಿಭಟನೆಯ ಅಲೆಗಳು ನವೆಂಬರ್ 9–10ರ ರಾತ್ರಿಯಂದು; ಶೀತಲ ಯುದ್ಧ ಹಾಗೂ ಪೂರ್ವ–ಪಶ್ಚಿಮದ ವಿಭಜನೆಯ ಪ್ರಮುಖ ಸಂಕೇತವಾಗಿದ್ದ ಬರ್ಲಿನ್ ಗೋಡೆಯ ಪತನದೊಂದಿಗೆ ಅಂತ್ಯವಾದವು. ಶಾಂತಿಯುತ ಪ್ರತಿಭಟನೆಗಳು, ಡಿಸೆಂಬರ್‌ನಲ್ಲಿ ಜೆಕೋಸ್ಲಾವಾಕಿಯಾದಲ್ಲಿನ ('ವೆಲ್ವೆಟ್ ಕ್ರಾಂತಿ') ಹಾಗೂ 1990ರ ಫೆಬ್ರವರಿಯಲ್ಲಿ ಬಲ್ಗೇರಿಯಾದಲ್ಲಿನ ಕಮ್ಯೂನಿಸ್ಟ್ ಆಡಳಿತದ ಅವನತಿಗೆ ಕಾರಣವಾದವು. ರೊಮಾನಿಯಾದಲ್ಲಿ ಈ ಪ್ರಕ್ರಿಯೆಯು ಹೆಚ್ಚು ಹಿಂಸಾತ್ಮಕವಾಗಿತ್ತು. 1989ರ ಕ್ರಿಸ್‌ಮಸ್ ದಿನದಂದು ಕಮ್ಯೂನಿಸ್ಟ್ ನಾಯಕ ಚವ್‌ಶೆಸ್ಕೂ ಹಾಗೂ ಅವನ ಪತ್ನಿ ಎಲೆನಾಳನ್ನು ಕ್ಷಿಪ್ರವಾಗಿ ಗಲ್ಲಿಗೇರಿಸಲಾಯಿತು. ಬಹುರಾಷ್ಟ್ರೀಯ ಸೋವಿಯಟ್ ರಾಜ್ಯದಾದ್ಯಂತ ಒಂದರ ಹಿಂದೊಂದು ಸಂಭವಿಸಿದ ರಾಷ್ಟ್ರವಾದಿ ಬಂಡಾಯಗಳ ಪರಿಣಾಮವಾಗಿ ಡಿಸೆಂಬರ್ 1991ರಲ್ಲಿ ಸೋವಿಯೆಟ್ ಒಕ್ಕೂಟದ ಅಧಿಕೃತ ವಿಸರ್ಜನೆಯೊಂದಿಗೆ ಕ್ರಾಂತಿಕಾರಿ ವಿಪ್ಲವಾದ ಅವಧಿಯು ಅಂತ್ಯಗೊಂಡಿತು.

**ಮಹತ್ವ:** ಕಮ್ಯೂನಿಸಮ್‌ನ ಅವನತಿಯ ಸೈದ್ಧಾಂತಿಕ ಮಹತ್ವವು ಅಗಾಧ ಮತ್ತು ದೂರಗಾಮಿಯಾದುದು ಹಾಗೂ ಕೆಲವೊಂದು ಅರ್ಥದಲ್ಲಿ ಇದೊಂದು ನಿರಂತರ ಪ್ರಕ್ರಿಯೆಯಾಗಿ ಉಳಿದುಕೊಂಡಿದೆ. ಫುಕುಯಾಮ ಮುಂತಾದ 'ಇತಿಹಾಸದ ಅಂತ್ಯ'ದ ಸಿದ್ಧಾಂತಿಗಳೆಂದು ಕರೆಯಲ್ಪಡುತ್ತಿದ್ದ ಸಿದ್ಧಾಂತಿಗಳು ಕಮ್ಯೂನಿಸಮ್‌ನ ಅವನತಿಯನ್ನು ಕುರಿತ ಪ್ರಾರಂಭದ ಪ್ರಬಲ ವಿಶ್ಲೇಷಕರಾಗಿದ್ದಾರೆ. ಈ ದೃಷ್ಟಿಯಲ್ಲಿ, ಪೂರ್ವ ಯೂರೋಪ್ ಹಾಗೂ ಅದರಿಂದಾಚೆಗಿನ ಸಾಂಪ್ರದಾಯಿಕ ಕಮ್ಯೂನಿಸ್ಟ್ ಆಳ್ವಿಕೆಯ ಅವನತಿಯು ವಿಶ್ವದ ಐತಿಹಾಸಿಕ ಮಹತ್ವದ ಒಂದು ಸಿದ್ಧಾಂತವಾಗಿ ಮಾರ್ಕ್ಸ್‌ವಾದದ ಅಂತ್ಯವನ್ನು ಸೂಚಿಸಿತು. ಇದು ಪಾಶ್ಚಿಮಾತ್ಯ ಮಾದರಿ, ಅದರಲ್ಲೂ ನಿರ್ದಿಷ್ಟವಾಗಿ, ಅಮೆರಿಕನ್ ಮಾದರಿಯ ಉದಾರ ಪ್ರಜಾಪ್ರಭುತ್ವವನ್ನು ಮಾನವ ಇತಿಹಾಸದ ನಿರ್ಣಾಯಕ ಅಂತಿಮ ಹಂತವಾಗಿ ಬಿಂಬಿಸಿತು. ಹೀಗಾಗಿ 1989–91ರ ಘಟನೆಗಳು ಮಾನವ ಸಮಾಜಗಳು ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಒಂದು ಉದಾರ ಮಾದರಿಯ ಸುತ್ತ ಒಂದುಗೂಡುವುದು ನಿಶ್ಚಿತವೆಂಬ, ತಳ್ಳಿಹಾಕಲಾಗದ ಅಂಶವನ್ನು ವ್ಯಕ್ತಪಡಿಸುತ್ತವೆ. ಕೇವಲ ಪಾಶ್ಚಿಮಾತ್ಯ ಉದಾರವಾದವು ಮಾತ್ರ ಸಾಮಾಜಿಕ ಚಲನೆ ಹಾಗೂ ಭೌತಿಕ ಸುರಕ್ಷತೆಯ ಲಾಭಗಳನ್ನು ನೀಡಬಲ್ಲದು ಹಾಗೂ ರಾಜ್ಯದ ಹಸ್ತಕ್ಷೇಪವಿಲ್ಲದೆ ವೈಯಕ್ತಿಕ ಸ್ವಯಂ ಅಭಿವೃದ್ಧಿಯ ಅವಕಾಶವನ್ನು ಒದಗಿಸಬಲ್ಲದು. ಇಂತಹ ವಿಶ್ಲೇಷಣೆಯು, ಕಮ್ಯೂನಿಸಮ್ ಒಂದು ಖಾಲಿಯಾದ ಸೈದ್ಧಾಂತಿಕ ಶಕ್ತಿಯೆಂಬುದನ್ನು ಸೂಚಿಸುವುದಷ್ಟೆ ಅಲ್ಲದೆ ವಿಶ್ವದ ಕೇವಲ ಒಂದು ಪ್ರಮುಖ ಬಂಡವಾಳಶಾಹಿರಹಿತ ಆರ್ಥಿಕ ವ್ಯವಸ್ಥೆಗಳ ನಾಟಕೀಯ ವೈಫಲ್ಯತೆಯಿಂದಾಗಿ ಸಮಾಜವಾದವು ಅದರ ವ್ಯಾಪಕ ಅರ್ಥದಲ್ಲಿ ಗಂಭೀರವಾಗಿ ರಾಜಿಗೊಳಗಾಗಿದೆ. ಇದರ ಪರಿಣಾಮವಾಗಿ ಸಮಾಜವಾದಿ ಪ್ರಜಾಸತ್ತಾತ್ಮಕ ಪಕ್ಷಗಳು ಅಪಮೂಲಭೂತೀಕರಣದ (de-radicalization) ಪ್ರಕ್ರಿಯೆಗೆ ಒಳಗಾಗಿವೆ. ಒಂದು ವಿಭಿನ್ನ ಸಿದ್ಧಾಂತವಾಗಿ ಸಮಾಜವಾದವು ಸತ್ತಿದೆಯೆಂದು ಘೋಷಿಸಲು ಕೆಲವರನ್ನು ಇದು ಉತ್ತೇಜಿಸಿದೆ.

ಅದೇನೆ ಇರಲಿ, 'ಇತಿಹಾಸದ ಅಂತ್ಯ' ಸಿದ್ಧಾಂತವನ್ನು ಅಕಾಲಿಕವಾದುದು ಹಾಗೂ ಸಂಪೂರ್ಣವಾಗಿ ತಪ್ಪಾಗಿ ಅರ್ಥೈಸಲಾದುದೆಂದು ಯೋಚಿಸಲು ಕಾರಣಗಳಿವೆ. ಮೊದಲಿಗೆ, 1989–91ರ ನಂತರದ ಅವಧಿಯಲ್ಲಿ ವಿಶ್ವದಾದ್ಯಂತ ಉದಾರ ಪ್ರಜಾಪ್ರಭುತ್ವದ ತತ್ವಗಳ ಸುತ್ತ ಸೈದ್ಧಾಂತಿಕ ಒಗ್ಗೂಡುವಿಕೆಯು ಕಂಡುಬರುವುದಿಲ್ಲ. ವಾಸ್ತವವಾಗಿ ಪಾಶ್ಚಿಮಾತ್ಯ ವಿಶ್ವವನ್ನು ಹೊರತುಪಡಿಸಿ, ಉಳಿದೆಡೆ ಉದಾರವಾದವನ್ನು ಹಿಂದೆಂದಿಗಿಂತಲೂ ಹೆಚ್ಚು ಉಗ್ರವಾಗಿ ಕೆಲವೊಮ್ಮೆ ವಿರೋಧಿಸಲಾಗುತ್ತದೆ. ಜನಾಂಗೀಯ ರಾಷ್ಟವಾದ ಹಾಗೂ ವಿಶೇಷವಾಗಿ ಮುಸ್ಲಿಂ ದೇಶಗಳಲ್ಲಿ ಕಂಡುಬರುವ ಧಾರ್ಮಿಕ ಮೂಲಭೂತವಾದದ ಶಕ್ತಿಗಳು ಹೆಚ್ಚಾಗಿ ಉದಾರವಾದವನ್ನು ವಿರೋಧಿಸುತ್ತವೆ. ಚೀನಾ ಮತ್ತು ಪೂರ್ವ ಮತ್ತು ಆಗ್ನೇಯ ಏಷ್ಯಾದ ಅನೇಕ ದೇಶಗಳಲ್ಲಿ ಕನ್‌ಫ್ಯೂಷಿಯನ್ ಹಾಗೂ ಇತರೆ ಸ್ಥಳೀಯ ವಿಚಾರಗಳು ರಾಜಕೀಯವಾಗಿ ಮಂಚೂಣಿಗೆ ಬಂದಿವೆ. ಇವುಗಳು ಅಣುವಾದಿ ಹಾಗೂ ಬಲಪಂಥೀಯ ಉದಾರ ಚಿಂತನೆಯ ಹರಡುವಿಕೆಯನ್ನು ವಿರೋಧಿಸುವ ಅಪೇಕ್ಷೆಯಿಂದಾಗಿ ತಮ್ಮ ಸಾಮರ್ಥ್ಯವನ್ನು ಪಡೆದುಕೊಂಡಿವೆ. ಹಾಗೆಯೆ ಪಾಶ್ಚಿಮಾತ್ಯ ಕೇಂದ್ರಭಾಗದಲ್ಲಿ ಉದಾರವಾದದ ಆರೋಹಣವು ಸೈದ್ಧಾಂತಿಕ ಶಕ್ತಿಗಳ ಸರಣಿಯಿಂದ ಸವಾಲಿಗೆ ಒಳಗಾಗಿದೆ. ಈ ಸೈದ್ಧಾಂತಿಕ ಶಕ್ತಿಗಳು ಹಸಿರು ರಾಜಕಾರಣ ಹಾಗೂ ಮಹಿಳಾವಾದದಲ್ಲಿನ ಕೆಲವು ಅಂಶಗಳಿಂದ ಹಿಡಿದು ಕೋಮುವಾದಿತ್ವ, ಬಹುಸಂಸ್ಕೃತಿವಾದ ಹಾಗೂ ಆಧುನಿಕೋತ್ತರವಾದಗಳನ್ನು ಒಳಗೊಂಡಿದೆ. ಅಂತಿಮವಾಗಿ, ಅದರ ಪುಟಿದೇಳುವ ಸಾಮರ್ಥ್ಯದ ಬಗ್ಗೆ ಸಂದೇಹವಿಲ್ಲವಾದರೂ, ಸಾಮಾಜಿಕ ಅಸಮಾನತೆ ಹಾಗೂ ಅಸ್ಥಿರತೆಯ ಪ್ರವೃತ್ತಿಯಿಂದಾಗಿ ಉದಾರ ಬಂಡವಾಳಶಾಹಿಯು ಸಾರ್ವತ್ರಿಕ ಮನ್ನಣೆಯನ್ನು ಹೇಗೆ ಗಳಿಸುತ್ತದೆಯೆಂಬುದನ್ನು ತಿಳಿದುಕೊಳ್ಳುವುದು ಕಷ್ಟವಾಗಿದೆ.

**ಇತರೆ ಸೈದ್ಧಾಂತಿಕ ಸಂಪ್ರದಾಯಗಳು**

ಉದಾರವಾದ, ಸಂಪ್ರದಾಯವಾದ ಹಾಗೂ ಸಮಾಜವಾದಗಳು ಸೈದ್ಧಾಂತಿಕ ರಾಜಕೀಯ ಕ್ಷೇತ್ರವನ್ನು ಖಂಡಿತವಾಗಿಯೂ ಬರಿದುಮಾಡುವುದಿಲ್ಲ. ಈ ಪ್ರಮುಖ ಸಿದ್ಧಾಂತಗಳಿಂದಾಗಿ ಅಥವಾ ಇವುಗಳಿಗೆ ವಿರುದ್ಧವಾಗಿ ಇತರೆ ಸೈದ್ಧಾಂತಿಕ ಸಂಪ್ರದಾಯಗಳು ವಿಕಸಿತಗೊಳ್ಳುವ ಪ್ರವೃತ್ತಿಯು ಕಂಡುಬರುತ್ತದೆ. ಈ ಸಿದ್ಧಾಂತಗಳು ಉದಾರವಾದಿ, ಸಂಪ್ರದಾಯವಾದಿ ಮತ್ತು/ಅಥವಾ ಸಮಾಜವಾದಿ ಚಿಂತನೆಗಳಿಂದ ಗಣನೀಯ ಪ್ರಮಾಣದಲ್ಲಿ ಪ್ರಭಾವಿಸಲ್ಪಟ್ಟಿವೆ. ಈ ಇತರೆ ಸಿದ್ಧಾಂತಗಳು 'ಬೃಹತ್' ಸೈದ್ಧಾಂತಿಕ ಸಂಪ್ರದಾಯಗಳ ಅಂಶಗಳನ್ನು ಅಳವಡಿಸಿಕೊಳ್ಳುವ ಮೂಲಕ 'ಒಳದಾರಿ'ಯಲ್ಲಿ (Cross - Cutting) ಸಾಗುವ ಲಕ್ಷಣಗಳನ್ನು ಹೊಂದಿವೆ. ಇದು ವಿವಿಧ ರೀತಿಗಳಲ್ಲಿ ಅರಾಜಕತೆ, ಸ್ತ್ರೀವಾದ, ಹಸಿರು ರಾಜಕಾರಣ, ವಿಶ್ವಬಂಧುವಾದ, ರಾಷ್ಟ್ರವಾದ ಹಾಗೂ ಬಹುಸಂಸ್ಕೃತಿವಾದಗಳಿಗೆ ಅನ್ವಯಿಸುತ್ತದೆ. ಉದಾರವಾದ, ಸಂಪ್ರದಾಯವಾದ ಹಾಗೂ ಸಮಾಜವಾದಗಳಿಗೆ ವಿರುದ್ಧವಾಗಿ ಎಲ್ಲಿ ಇತರೆ ಸೈದ್ಧಾಂತಿಕ ಸಂಪ್ರದಾಯಗಳು ಹೊರಹೊಮ್ಮಿವೆಯೊ ಅಲ್ಲಿ ಪಾಶ್ಚಿಮಾತ್ಯ ರಾಜಕೀಯ ಸಂಪ್ರದಾಯದ ಪ್ರಮುಖ ಲಕ್ಷಣಗಳಿಗೆ ಸವಾಲೆಸಗುವ ಹಾಗೂ ಅವುಗಳನ್ನು ಬುಡಮೇಲು ಮಾಡುವ ಲಕ್ಷಣವನ್ನು ಹೊಂದಿವೆ. ಇದು ಫ್ಯಾಸಿಸಮ್ ಹಾಗೂ ಪಾಶ್ಚಿಮಾತೇತ್ತರ ಸೈದ್ಧಾಂತಿಕ ಚಿಂತನೆಯ ಕೆಲವು ಪ್ರವೃತ್ತಿಗಳು ಅದರಲ್ಲೂ ಮುಖ್ಯವಾಗಿ ರಾಜಕೀಯ ಇಸ್ಲಾಮ್‌ಗೆ ಅನ್ವಯಿಸುತ್ತದೆ.

**ಫ್ಯಾಸಿಸಮ್ (Fascism)**

ಉದಾರವಾದ, ಸಂಪ್ರದಾಯವಾದ ಹಾಗೂ ಸಮಾಜವಾದಗಳು ಹತ್ತೊಂಭತ್ತನೇ ಶತಮಾನದ ಸಿದ್ಧಾಂತಗಳಾದರೆ, ಫ್ಯಾಸಿಸಮ್ ಇಪ್ಪತ್ತನೇ ಶತಮಾನದ ಶಿಶುವಾಗಿದೆ. ಕೆಲವರು ಇದು ನಿರ್ದಿಷ್ಟವಾಗಿ ಅಂತರ್ಯುದ್ಧದ ವಿದ್ಯಮಾನವೆಂದು ಅಭಿಪ್ರಾಯಪಡುತ್ತಾರೆ. ಫ್ಯಾಸಿಸ್ಟ್ ನಂಬಿಕೆಗಳು ಹತ್ತೊಂಭತ್ತನೇ ಶತಮಾನದ ಅಂತ್ಯದಲ್ಲಿ ಪ್ರಾರಂಭವಾದರೂ ಸಹ, ಮೊದಲನೆ ವಿಶ್ವಯುದ್ಧ ಹಾಗೂ ಅನಂತರದ ಪರಿಣಾಮಗಳು ಈ ನಂಬಿಕೆಗಳನ್ನು ಒಟ್ಟುಗೂಡಿಸಿ ರೂಪಿಸಿದವು. ಮುಖ್ಯವಾಗಿ ಈ ಅವಧಿಯ ಲಕ್ಷಣವಾದ, ಯುದ್ಧ ಮತ್ತು ಕ್ರಾಂತಿಯ ಪ್ರಬಲ ಮಿಶ್ರಣವು ಫ್ಯಾಸಿಸಮ್‌ನ್ನು ರೂಪಿಸಿತು. ಫ್ಯಾಸಿಸಮ್‌ನ ಎರಡು ಪ್ರಧಾನ ಅಭಿವ್ಯಕ್ತಿಗಳೆಂದರೆ, ಇಟಲಿಯಲ್ಲಿನ ಮುಸೋಲಿನಿಯ ಫ್ಯಾಸಿಸ್ಟ್ ನಿರಂಕುಶವಾದ (1922–43) ಹಾಗೂ ಜರ್ಮನಿಯಲ್ಲಿನ ಹಿಟ್ಲರ್‌ನ ನಾಝಿ ನಿರಂಕುಶವಾದ (1933–45). ಕಮ್ಯೂನಿಸಮ್‌ನ ಅವನತಿ ಅಥವಾ ವಲಸೆ ಹಾಗೂ ಬಹುಸಂಸ್ಕೃತಿವಾದದ ಕಾರಣದಿಂದಾಗಿ ಹೆಚ್ಚಾಗುತ್ತಿರುವ ಆತಂಕಗಳ ಪರಿಣಾಮವಾಗಿ ಉಂಟಾದ ಆರ್ಥಿಕ ಬಿಕ್ಕಟ್ಟು ಮತ್ತು ರಾಜಕೀಯ ಅಸ್ಥಿರತೆಗಳ ಲಾಭವನ್ನು ಪಡೆದು, ಇತ್ತೀಚಿನ ದಶಕಗಳಲ್ಲಿ ನವ ಫ್ಯಾಸಿಸಮ್ ಹಾಗೂ ನವ–ನಾಝಿಸಮ್‌ಗಳು ಸಹ ಹೊರಹೊಮ್ಮಿವೆ.

ಫ್ರೆಂಚ್ ಕ್ರಾಂತಿಯ ನಂತರ ಪಾಶ್ಚಿಮಾತ್ಯ ರಾಜಕೀಯ ಚಿಂತನೆಯನ್ನು ಪ್ರಭಾವಿಸಿದ ವಿಚಾರಗಳು ಹಾಗೂ ಮೌಲ್ಯಗಳ ವಿರುದ್ಧ ಅನೇಕ ರೀತಿಗಳಲ್ಲಿ ಫ್ಯಾಸಿಸಮ್ ತನ್ನ ವಿರೋಧವನ್ನು ಮುಂದುವರೆಸಿತು: ಇಟಲಿಯ ಫ್ಯಾಸಿಸ್ಟ್ ಘೋಷಣೆಯ ಪದಗಳಲ್ಲಿ ಇದನ್ನು, '1789 ಸತ್ತುಹೋಗಿದೆ' ಎಂದು ಹೇಳಲಾಗಿದೆ. ಹೋರಾಟ, ನಾಯಕತ್ವ, ಅಧಿಕಾರ, ಸಾಹಸತನ ಮತ್ತು ಯುದ್ಧದ ಹೆಸರಿನಲ್ಲಿ ವೈಚಾರಿಕತೆ, ಪ್ರಗತಿ, ಸ್ವಾತಂತ್ರ್ಯ ಮತ್ತು ಸಮಾನತೆ ಮುಂತಾದ ಮೌಲ್ಯಗಳನ್ನು ಬುಡಮೇಲು ಮಾಡಲಾಯಿತು. ಈ ಅರ್ಥದಲ್ಲಿ ನೋಡಿದಾಗ, ಫ್ಯಾಸಿಸಮ್ 'ವಿರೋಧಿಯ ಪಾತ್ರ'ವನ್ನು (anticharacter) ಹೊಂದಿದೆ. ಇದು ಏನನ್ನು ವಿರೋಧಿಸುತ್ತದೆಂಬುದರ ಆಧಾರದಲ್ಲಿ ಇದನ್ನು ವ್ಯಾಖ್ಯಾನಿಸಲಾಗುತ್ತದೆ: ಇದು ಬಂಡವಾಳಶಾಹಿ–ವಿರೋಧಿ, ಉದಾರವಾದ–ವಿರೋಧಿ, ವ್ಯಕ್ತಿವಾದ–ವಿರೋಧಿ, ಕಮ್ಯೂನಿಸಮ್–ವಿರೋಧಿ ಹೀಗೆ ಅನೇಕ ರೂಪಗಳನ್ನು ಒಳಗೊಂಡಿದೆ. ಆದಾಗ್ಯೂ ಜೈವಿಕವಾಗಿ ಒಂದುಗೂಡಿರುವ ರಾಷ್ಟ್ರೀಯ ಸಮುದಾಯವು, ಇಡೀ ಫ್ಯಾಸಿಸಮ್‌ನಲ್ಲಿ ಹಾಸುಹೊಕ್ಕಾಗಿರುವ ಒಂದು ಪ್ರಮುಖ ವಿಷಯವಾಗಿದೆ. ಒಗ್ಗಟ್ಟಿನ ಮೂಲಕ ಶಕ್ತಿ' ಎಂಬ ನಂಬಿಕೆಯಲ್ಲಿ ಇದು ವ್ಯಕ್ತವಾಗುತ್ತದೆ. ವ್ಯಕ್ತಿಯು ಅಕ್ಷರಶಃ ಏನೂ ಅಲ್ಲ; ವೈಯಕ್ತಿಕ ಗುರುತು ಸಮುದಾಯ ಅಥವಾ ಸಾಮಾಜಿಕ ಗುಂಪಿನ ಗುರುತಿನೊಂದಿಗೆ ಸಂಪೂರ್ಣವಾಗಿ ಮಿಳಿತವಾಗಬೇಕು. ಫ್ಯಾಸಿಸ್ಟ್ ಆದರ್ಶವು; ಕರ್ತವ್ಯ, ಗೌರವ ಮತ್ತು ಸ್ವಯಂ ತ್ಯಾಗಗಳಿಂದ ಸ್ಫೂರ್ತಿ ಪಡೆದ, ತನ್ನ ಜೀವವನ್ನು ತನ್ನ ರಾಷ್ಟ್ರ ಅಥವಾ ಕುಲದ ಕೀರ್ತಿಗೆ ಅರ್ಪಿಸಲು ಹಾಗೂ ಒಬ್ಬ ಸರ್ವೋಚ್ಚ ನಾಯಕನಿಗೆ ಪ್ರಶ್ನಾತೀತ ವಿಧೇಯತೆಯನ್ನು ತೋರಲು ಸಿದ್ಧನಿರುವ 'ಹೊಸ ಮನುಷ್ಯ'ನ, ಒಬ್ಬ ನಾಯಕನ ಆದರ್ಶವಾಗಿದೆ.

ಆದರೆ, ಎಲ್ಲಾ ಫ್ಯಾಸಿಸ್ಟ್‌ಗಳು ಒಂದೇ ರೀತಿ ಯೋಚಿಸುವುದಿಲ್ಲ, ಇಟಲಿಯ ಫ್ಯಾಸಿಸಮ್ 'ನಿರಕುಂಶ' ರಾಜ್ಯದ ಪರವಾದ ಪ್ರಶ್ನಾತೀತ ಗೌರವ ಹಾಗೂ ನಿರಪೇಕ್ಷ ವಿಧೇಯತೆಯಿಂದ ಕೂಡಿದ

ರಾಜತ್ವದ ಒಂದು ತೀವ್ರರೂಪವಾಗಿತ್ತು. ಫ್ಯಾಸಿಸ್ಟ್ ತತ್ವಶಾಸ್ತ್ರಜ್ಞ ಜೆಂಟಿಲ್ (1875–1944) ಈ ಆದರ್ಶವನ್ನು, 'ಎಲ್ಲವೂ ರಾಜ್ಯಕ್ಕಾಗಿ; ರಾಜ್ಯದ ವಿರುದ್ಧ ಯಾವುದೂ ಇಲ್ಲ; ರಾಜ್ಯದಿಂದ ಹೊರಗಡೆ ಯಾವುದೂ ಇಲ್ಲ' ಎಂದಿದ್ದಾರೆ. ಜರ್ಮನ್ ರಾಷ್ಟ್ರೀಯ ಸಮಾಜವಾದವನ್ನು (ಅಥವಾ ನಾಝಿಸಮ್) ಜನಾಂಗೀಯ (racialism) ನೀತಿಯ ಆಧಾರದ ಮೇಲೆ ರಚಿಸಲಾಗಿದೆ. ಇದರ ಎರಡು ಪ್ರಮುಖ ಸಿದ್ಧಾಂತಗಳೆಂದರೆ, 'ಆರ್ಯವಾದ' (Aryanism)-(ಜರ್ಮನ್ನರು 'ಆಳುವವರ್ಗ'ಕ್ಕೆ ಸೇರಿದವರು ಹಾಗೂ ವಿಶ್ವದ ಪ್ರಭುತ್ವಕ್ಕೆಂದೇ ಹುಟ್ಟಿದವರೆಂಬ ನಂಬಿಕೆ) ಹಾಗೂ ಯಹೂದಿಗಳನ್ನು ಆಂತರ್ಯದಲ್ಲಿ ದುಷ್ಟರೆಂದು ಚಿತ್ರಿಸುವ ಹಾಗೂ ಅವರ ನಿರ್ನಾಮವನ್ನು ಗುರಿಯಾಗಿ ಹೊಂದಿರುವ 'ಯಹೂದಿವಾದದ ವಿರೋಧದ' (Anti-Semitism) ಉಗ್ರ ರೂಪ. ಈ ಎರಡನೆ ನಂಬಿಕೆಯು 'ಅಂತಿಮ ಪರಿಹಾರ'ದಲ್ಲಿ ಅಭಿವ್ಯಕ್ತವಾಗಿದೆ.

**ಅಡಾಲ್ಫ್ ಹಿಟ್ಲರ್ (1889–1945)**

ಜರ್ಮನ್ ನಾಝಿ ಸರ್ವಾಧಿಕಾರಿ. ಹಿಟ್ಲರ್ ಆಸ್ಟ್ರಿಯಾದ ಕಸ್ಟಮ್ಸ್ ಅಧಿಕಾರಿಯ ಮಗ. 1919ರಲ್ಲಿ ಜರ್ಮನ್ ವರ್ಕರ್ಸ್ ಪಾರ್ಟಿಯನ್ನು (ನಂತರ ಅದು ನ್ಯಾಷನಲ್ ಸೋಷಿಯಲಿಸ್ಟಿಕ್ ಡ್ಯೂಷ್ ಆರ್ಬಿಟರ್ ಪಾರ್ಟಿ NSDAP ಅಥವ ನಾಝಿ ಪಾರ್ಟಿ ಎಂದಾಯಿತು) ಸೇರಿ 1921ರಲ್ಲಿ ಅದರ ನಾಯಕರಾದರು. 1933ರಲ್ಲಿ ಜರ್ಮನಿಯ ಚಾನ್ಸಲರ್ ಆಗಿ ನೇಮಕಗೊಂಡ ಅವರು, ಮುಂದಿನ ವರ್ಷದಲ್ಲಿ ತನ್ನನ್ನು ಫುರ್ಹರ್ (ನಾಯಕ) ಎಂದು ಘೋಷಿಸಿಕೊಂಡರು. ಇಷ್ಟರಲ್ಲಾಗಲೇ ಏಕಪಕ್ಷ ಸರ್ವಾಧಿಕಾರವನ್ನು ಹಿಟ್ಲರ್ ಸ್ಥಾಪಿಸಿದ್ದರು. ಅವರ 'ಮೈನ್ ಕ್ಯಾಂಫ್ (Mein Kampf - ([1925] 1969) ಗ್ರಂಥದಲ್ಲಿ ವ್ಯಕ್ತಪಡಿಸಿರುವಂತೆ ಹಿಟ್ಲರ್‌ರ ವಿಶ್ವ–ದೃಷ್ಟಿಕೋನದ ಪ್ರಮುಖ ಲಕ್ಷಣವು, ವಿಸ್ತರಣಾವಾದಿ ಜರ್ಮನ್ ರಾಷ್ಟ್ರವಾದ ಹಾಗೂ ತೀಕ್ಷ್ಣ ಯಹೂದಿ ವಿರೋಧವನ್ನು ಇತಿಹಾಸದ ಸಿದ್ಧಾಂತದೊಡನೆ ಸಮ್ಮಿಳನಗೊಳಿಸಿ, ಆ ಮೂಲಕ ಜರ್ಮನರು ಮತ್ತು ಯಹೂದಿಗಳ ನಡುವೆ ಅಂತ್ಯವಿಲ್ಲದ ಕದನವನ್ನು ಹುಟ್ಟುಹಾಕುವುದಾಗಿತ್ತು. ಹಿಟ್ಲರ್‌ರ ಪ್ರಕಾರ ಜರ್ಮನರು ಒಳಿತನ್ನು ಪ್ರತಿನಿಧಿಸಿದರೆ ಯಹೂದಿಗಳು ದುಷ್ಟತನವನ್ನು ಪ್ರತಿನಿಧಿಸುತ್ತಿದ್ದರು. ಹಿಟ್ಲರ್‌ರ ನೀತಿಗಳು ಎರಡನೆ ವಿಶ್ವ ಯುದ್ಧ ಹಾಗು ಹತ್ಯಾಕಾಂಡಗಳಿಗೆ ನಿರ್ಣಾಯಕವಾದ ಕೊಡುಗೆಯನ್ನು ನೀಡಿದವು.

**ಅರಾಜಕಾತಾವಾದ** (Anarchism)

ಅರಾಜಕತಾವಾದವು ರಾಜಕೀಯ ಸಿದ್ಧಾಂತಗಳ ಪೈಕಿ ಅಸಾಮಾನ್ಯವಾದುದು. ಏಕೆಂದರೆ, ಯಾವುದೇ ಅರಾಜಕತಾವಾದಿ ಪಕ್ಷವು, ಕನಿಷ್ಠ ಪಕ್ಷ ರಾಷ್ಟ್ರಮಟ್ಟದಲ್ಲಿಯಾದರೂ ಅಧಿಕಾರ ಗಳಿಸುವಲ್ಲಿ ಯಶಸ್ವಿಯಾಗಿಲ್ಲ. ಆದಾಗ್ಯೂ, ಇಪ್ಪತ್ತನೆ ಶತಮಾನದ ಪ್ರಾರಂಭದವರೆವಿಗೂ ಸ್ಪೇನ್, ಫ್ರಾನ್ಸ್, ರಷ್ಯಾ ಮತ್ತು ಮೆಕ್ಸಿಕೊ ದೇಶಗಳಲ್ಲಿ ಅರಾಜಕತಾವಾದಿ ಚಳವಳಿಗಳು ಶಕ್ತಿಯುತವಾಗಿದ್ದವು. ಕಾನೂನು, ಸರ್ಕಾರ ಮತ್ತು ರಾಜ್ಯ ಇವುಗಳು ವಿವೇಚನಾಯುಕ್ತವಾದವು ಅಥವಾ ಅನಿವಾರ್ಯವಾದವು ಎಂಬ ಸಾಂಪ್ರದಾಯಿಕ ನಂಬಿಕೆಯನ್ನು ಪ್ರಶ್ನಿಸುವ ಮೂಲಕ ಅರಾಜಕತಾವಾದಿ ವಿಚಾರಗಳು ರಾಜಕೀಯ ಚರ್ಚೆಗಳಿಗೆ ಸಾರವನ್ನು ಒದಗಿಸುತ್ತಿವೆ. ಆಧುನಿಕ ಬಂಡವಾಳಶಾಹಿವಿರೋಧಿ ಅಥವಾ

ಜಾಗತೀಕರಣವಿರೋಧಿ ಚಳುವಳಿಯಲ್ಲಿ ಅರಾಜಕತಾವಾದಿ ಚಿಂತನೆಯು ಪ್ರಭಾವಶಾಲಿಯಾಗಿದೆ. ಎಲ್ಲಾ ರೂಪದ ರಾಜಕೀಯ ಅಧಿಕಾರವು, ಅದರಲ್ಲೂ ಮುಖ್ಯವಾಗಿ ರಾಜ್ಯ ರೂಪದಲ್ಲಿರುವ ಅಧಿಕಾರವು ಕೆಟ್ಟದ್ದು ಮತ್ತು ಅನವಶ್ಯಕವಾದುದು (ಅರಾಜಕತಾವಾದದ ಅಕ್ಷರಶಃ ಅರ್ಥ, 'ಆಡಳಿತವಿಲ್ಲದಿರುವುದು') ಎಂಬ ನಂಬಿಕೆಯು ಅರಾಜಕತಾವಾದದ ಪ್ರಮುಖ ವಿಷಯವಾಗಿದೆ. ಆದಾಗ್ಯೂ, ಮುಕ್ತ ವ್ಯಕ್ತಿಗಳು ಸ್ವಯಂಪ್ರೇರಿತ ಒಪ್ಪಂದ ಹಾಗು ಸಹಕಾರದ ಮೂಲಕ ತಮ್ಮ ಸ್ವಂತ ವ್ಯವಹಾರಗಳನ್ನು ನಿರ್ವಹಿಸಿಕೊಳ್ಳುವ ರಾಜ್ಯರಹಿತ ಸಮಾಜದೆಡೆಗಿನ ಅರಾಜಕತಾವಾದಿಗಳ ಒಲವು; ಉದಾರ ವ್ಯಕ್ತಿವಾದ ಹಾಗೂ ಸಾಮಾಜಿಕ ಸಮುದಾಯವಾದವೆಂಬ ಎರಡು ಪ್ರತಿಸ್ಪರ್ಧಿ ಸಂಪ್ರದಾಯಗಳ ಆಧಾರದ ಮೇಲೆ ವಿಕಸಿತಗೊಂಡಿದೆ. ಹೀಗಾಗಿ, ಅರಾಜಕತಾವಾದವನ್ನು ಉದಾರವಾದ ಮತ್ತು ಸಮಾಜವಾದಗಳ ನಡುವಿನ ಛೇದಕ ಬಿಂದುವಾಗಿ–'ಅತಿಉದಾರವಾದ' (ultraliberalism) ಹಾಗೂ 'ಅತಿ ಸಮಾಜವಾದ'ದ (ultrasocialism) ಒಂದು ರೂಪವಾಗಿ ಪರಿಗಣಿಸಲಾಗುತ್ತದೆ.

ರಾಜ್ಯದ ವಿರುದ್ಧದ ಉದಾರವಾದದ ಪರವಾದ ವಾದವು ವ್ಯಕ್ತಿವಾದ ಹಾಗೂ ಸ್ವಾತಂತ್ರ್ಯ ಮತ್ತು ಆಯ್ಕೆಯನ್ನು ಗರಿಷ್ಠಗೊಳಿಸುವ ಅಪೇಕ್ಷೆಯನ್ನು ಆಧರಿಸಿದೆ. ಉದಾರವಾದಿಗಳಂತಲ್ಲದೆ ವಿಲಿಯಮ್ ಗಾಡ್ವಿನ್‌ನಂತಹ (1756–1836) ವ್ಯಕ್ತಿವಾದಿ ಅರಾಜಕತಾವಾದಿಗಳು ಸ್ವತಂತ್ರ ಹಾಗೂ ವೈಚಾರಿಕ ಮಾನವರು ತಮ್ಮ ವ್ಯವಹಾರವನ್ನು ಶಾಂತಿಯುತ ಹಾಗೂ ಸಹಜವಾಗಿ ನಿರ್ವಹಿಸಬಲ್ಲವರಾಗಿದ್ದು; ಸರ್ಕಾರವು ಕೇವಲ ಅನಪೇಕ್ಷಿತ ದಬ್ಬಾಳಿಕೆಯ ರೂಪವಾಗಿದೆಯೆಂದು ನಂಬಿದ್ದರು. ಆಧುನಿಕ ವ್ಯಕ್ತಿವಾದಿಗಳು ರಾಜ್ಯ ಪ್ರಾಧಿಕಾರವು ಇಲ್ಲದಿರುವಾಗ ಸಮಾಜವನ್ನು ಹೇಗೆ ನಿಯಂತ್ರಿಸಲಾಗುತ್ತದೆಂಬುದನ್ನು ವಿವರಿಸಲು ಸಾಮಾನ್ಯವಾಗಿ ಮಾರುಕಟ್ಟೆಯತ್ತ ನೋಡುತ್ತಿದ್ದರು. ಇದು ಮುಕ್ತ–ಮಾರುಕಟ್ಟೆ ಅರ್ಥಶಾಸ್ತ್ರದ ತೀವ್ರಸ್ವರೂಪದ ಆವೃತ್ತಿಯೆನಿಸಿದ 'ಅರಾಜಕ ಬಂಡವಾಳಶಾಹಿ'ಯ ಸ್ವರೂಪವೊಂದರ ಅಭಿವೃದ್ಧಿಗೆ ಕಾರಣವಾಯಿತು. ಹೆಚ್ಚು ವ್ಯಾಪಕವಾಗಿ ಗುರುತಿಸಲ್ಪಟ್ಟ ಅರಾಜಕ ಸಂಪ್ರದಾಯವು; ಸಮುದಾಯ, ಸಹಕಾರ, ಸಮಾನತೆ ಹಾಗೂ ಸಾಮಾನ್ಯ ನಾಯಕತ್ವದಂತಹ ಸಾಮಾಜಿಕ ವಿಚಾರಗಳಿಂದ ಪ್ರಭಾವಿತವಾಗಿದೆ. ಸಾಮೂಹಿಕ ಅರಾಜಕತಾವಾದಿಗಳು (ಕೆಲವೊಮ್ಮೆ ಇವರನ್ನು ಸಾಮಾಜಿಕ ಅರಾಜಕತಾವಾದಿಗಳೆಂದು ಕರೆಯಲಾಗುತ್ತದೆ) ನಮ್ಮ ಸ್ನೇಹಪರತೆ, ಸಂಘಶೀಲತೆ ಹಾಗೂ ಸಹಕಾರ ಗುಣಗಳಿಂದಾಗಿ ಉದ್ಭವಿಸುವ ಸಾಮಾಜಿಕ ಐಕ್ಯಮತದ ಪರವಾದ ಸಾಮರ್ಥ್ಯಕ್ಕೆ ಒತ್ತು ನೀಡುತ್ತಾರೆ. ಈ ಆಧಾರದ ಮೇಲೆ ಫ್ರೆಂಚ್ ಅರಾಜಕತಾವಾದಿ ಪಿಯರೆ–ಜೋಸೆಫ್ ಪ್ರೌಧನ್, 'ಪರಸ್ಪರತ್ವ'ವೆಂದು ಕರೆದ ವಾದವೊಂದನ್ನು ಅಭಿವೃದ್ಧಿಪಡಿಸಿದರು. ರಷ್ಯಾದ ಪೀಟರ್ ಕ್ರೊಪೊಟ್ಕಿನ್ ಅವರಂತಹ ಇತರೆ ಅರಾಜಕತಾವಾದಿಗಳು; 'ಅರಾಜಕ–ಕಮ್ಯುನಿಸಮ್'ಅನ್ನು (anarcho-communism) ವಿಕಸನಗೊಳಿಸಿದರು. ಸಾಮಾನ್ಯ ಮಾಲೀಕತ್ವ, ವಿಕೇಂದ್ರಿಕರಣ ಹಾಗೂ ಕೆಲಸಗಾರರ ಸ್ವಯಂ–ನಿರ್ವಹಣೆಯ ಪ್ರಮುಖ ತತ್ವಗಳನ್ನು ಇದು ಒಳಗೊಂಡಿತ್ತು. ನೋಮ್ ಚಾಮ್‌ಸ್ಕಿ ಹಾಗೂ ಅಮೆರಿಕಾದ ಇಚ್ಛಾಸ್ವಾತಂತ್ರ್ಯವಾದಿ (libertarian) ಮತ್ತು ಸಾಮಾಜಿಕ ಪರಿಸರಶಾಸ್ತ್ರಜ್ಞ ಮರ್ರೆ ಬುಕ್‌ಚಿನ್ (1921–2006) ಅವರೂ ಸಹ ಅರಾಜಕತಾವಾದದಿಂದ ಪ್ರಭಾವಿತರಾದ ಆಧುನಿಕ ಚಿಂತಕರಾಗಿದ್ದಾರೆ.

**ಅರಾಜಕ–ಬಂಡವಾಳಶಾಹಿ (Anarcho-Capitalism)**: ರಾಜ್ಯವನ್ನು ಅನವಶ್ಯಕಗೊಳಿಸಿ, ಅನಿಯಂತ್ರಿತ ಮಾರುಕಟ್ಟೆ ಸ್ಪರ್ಧೆಯನ್ನು ಎಲ್ಲಾ ಸಾಮಾಜಿಕ ವ್ಯವಸ್ಥೆಗಳಿಗೆ ಅನ್ವಯಿಸಬಹುದು ಹಾಗು ಅನ್ವಯಿಸಬೇಕು ಎಂದು ಪ್ರತಿಪಾದಿಸುವ ಒಂದು ಅರಾಜಕ ಸಂಪ್ರದಾಯ.

---

**ಪರಸ್ಪರತೆ (Mutualism)**: ವ್ಯಕ್ತಿಗಳು ಅಥವಾ ಗುಂಪುಗಳು ಲಾಭದಾಯಕತೆ ಅಥವಾ ಶೋಷಣೆ ಇಲ್ಲದೆ ಪರಸ್ಪರ ಸರಕು ಮತ್ತು ಸೇವೆಗಳನ್ನು ವ್ಯವಹರಿಸುವ ಒಂದು ನ್ಯಾಯಯುತ ಹಾಗೂ ಸಮಾನ ವಿನಿಮಯ ವ್ಯವಸ್ಥೆ.

---

**ಅರಾಜಕ–ಕಮ್ಯೂನಿಸಮ್ (Anarcho-Communism)**: ಸಾಮಾಜಿಕ ಐಕ್ಯಮತಕ್ಕೆ ಸಾಮಾನ್ಯ ಮಾಲೀಕತ್ವವು ಏಕೈಕ ನಂಬಲರ್ಹ ಅಧಾರವೆಂದು ಭಾವಿಸುವ ಹಾಗೂ ಆ ಮೂಲಕ ರಾಜ್ಯರಹಿತತೆಗೆ ವರ್ಗರಹಿತತೆಯೊಡನೆ ಸಂಬಂಧವನ್ನು ಕಲ್ಪಿಸುವ ಒಂದು ಅರಾಜಕ ಸಂಪ್ರದಾಯ.

---

## ಸ್ತ್ರೀವಾದ (Feminism)

ಸ್ತ್ರೀವಾದಿ ಆಕಾಂಕ್ಷೆಗಳು ಪ್ರಾಚೀನ ಚೀನಾದ ಸಮಾಜಗಳಲ್ಲಿ ವ್ಯಕ್ತವಾಗಿದ್ದರೂ ಸಹಾ ಮೇರಿ ವೊಲ್‌ಸ್ಟೋನ್‌ಕ್ರಾಫ್ಟ್‌ನ 'ಎ ವಿಂಡಿಕೇಷನ್ ಆಫ್ ದಿ ರೈಟ್ಸ್ ಆಫ್ ವುಮೆನ್' ([1792] 1985) ಕೃತಿ ಪ್ರಕಟವಾಗುವವರೆಗೂ ಅಭಿವೃದ್ಧಿ ಹೊಂದಿದ ಒಂದು ರಾಜಕೀಯ ಸಿದ್ಧಾಂತದ ಆಧಾರ ಇವುಗಳಿಗೆ ಸಿಗಲಿಲ್ಲ. ವಾಸ್ತವವಾಗಿ, 1840 ಮತ್ತು 1850ರ ದಶಕದಲ್ಲಿ ಮಹಿಳೆಯರ ಮತದಾನದ ಚಳುವಳಿಯು ಪ್ರಾರಂಭವಾಗುವವರೆಗೂ ಸ್ತ್ರೀವಾದಿ ವಿಚಾರಗಳು 'ಸ್ತ್ರೀವಾದದ ಮೊದಲ ಅಲೆ' ಎಂದು ಕರೆಯಲ್ಪಡುತ್ತಿದ್ದ ರೂಪದಲ್ಲಿ ಹೆಚ್ಚಿನ ಜನರನ್ನು ತಲುಪಿರಲಿಲ್ಲ. ಇಪ್ಪತ್ತನೆ ಶತಮಾನದ ಪ್ರಾರಂಭದಲ್ಲಿ ಬಹುತೇಕ ಪಾಶ್ಚಿಮಾತ್ಯ ದೇಶಗಳಲ್ಲಿ ಮಹಿಳೆಯರಿಗೆ ಮತದಾನದ ಹಕ್ಕು ದೊರೆತದ್ದು ಮಹಿಳಾ ಚಳುವಳಿಯ ಪ್ರಮುಖ ಗುರಿ ಹಾಗೂ ಅದರ ಸಂಘಟನಾ ತತ್ವವನ್ನು ಇಲ್ಲವಾಗಿಸಿತು. ಆದಾಗ್ಯೂ, 'ಸ್ತ್ರೀವಾದದ ಎರಡನೆ ಅಲೆ' 1960ರ ದಶಕದಲ್ಲಿ ಹೊರಹೊಮ್ಮಿತು. ಇದು, ತೀವ್ರಗೊಳ್ಳುತ್ತಿದ್ದ 'ಮಹಿಳೆಯರ ವಿಮೋಚನಾ ಚಳುವಳಿ'ಯ (Women's Liberation Movement–WLM) ಹೆಚ್ಚು ಮೂಲಭೂತವಾದಿ ಹಾಗು ಕೆಲವೊಮ್ಮೆಯ ಕ್ರಾಂತಿಕಾರಿ ಬೇಡಿಕೆಗಳನ್ನು ವ್ಯಕ್ತಪಡಿಸಿತು. ಸ್ತ್ರೀವಾದಿ ಸಿದ್ಧಾಂತಗಳು ಹಾಗೂ ತತ್ವಗಳು ವಿಭಿನ್ನವಾಗಿದ್ದವು. ಆದರೆ ಯಾವುದೇ ಮಾರ್ಗದಲ್ಲಾದರೂ ಸರಿ ಮಹಿಳೆಯರ ಸಾಮಾಜಿಕ ಪಾತ್ರವನ್ನು ಹೆಚ್ಚಿಸುವ ಸಾಮಾನ್ಯ ಅಪೇಕ್ಷೆಯು; ಈ ಸಿದ್ಧಾಂತಗಳು ಹಾಗೂ ತತ್ವಗಳನ್ನು ಒಗ್ಗೂಡಿಸುವ ಲಕ್ಷಣವಾಗಿತ್ತು. ಹೀಗಾಗಿ, ಸ್ತ್ರೀವಾದಕ್ಕೆ ಆಧಾರಭೂತವಾಗಿರುವ ಎರಡು ವಿಷಯಗಳೆಂದರೆ; ಮೊದಲನೆಯದಾಗಿ, ಸಮಾಜವು ಲೈಂಗಿಕ

ಅಥವಾ ಲಿಂಗ ಅಸಮಾನತೆಯಿಂದ ಕೂಡಿದೆ ಹಾಗೂ ಎರಡನೆಯದಾಗಿ, ಈ ಪುರುಷ ಶಕ್ತಿಯ ಸಂರಚನೆಯನ್ನು ಬೀಳಿಸಬಹುದು ಹಾಗೂ ಬೀಳಿಸತಕ್ಕದ್ದು ಎಂಬುದಾಗಿದೆ.

ಸ್ತ್ರೀವಾದಿ ಚಿಂತನೆಯನ್ನು ಉದಾರವಾದಿ, ಸಮಾಜವಾದಿ ಹಾಗೂ ಮೂಲಭೂತವಾದಿ ಚಿಂತನೆಯ ಪಂಥಗಳ ವಿಭಜನೆಯ ಆಧಾರದಲ್ಲಿ ಸಾಂಪ್ರದಾಯಿಕವಾಗಿ ವಿಶ್ಲೇಷಿಸಲಾಗಿದೆ. ವೊಲ್‌ಸ್ಟೋನ್‌ಕ್ರಾಫ್ಟ್ ಮತ್ತು ಬೆಟ್ಟಿ ಫ್ರೈಡನ್‌ರಂತಹ ಉದಾರವಾದಿ ಸ್ತ್ರೀವಾದಿಗಳು ಮಹಿಳಾ ಅಧೀನತೆಯನ್ನು ಸಮಾಜದಲ್ಲಿನ ಹಕ್ಕುಗಳು ಮತ್ತು ಅವಕಾಶಗಳ ಅಸಮಾನ ವಿತರಣೆಯ ದೃಷ್ಟಿಯಿಂದ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದಾರೆ. ಈ 'ಸಮಾನ ಹಕ್ಕುಗಳ ಸ್ತ್ರೀವಾದ'ವು ಮುಖ್ಯವಾಗಿ ಸುಧಾರಣಾವಾದಿಯಾಗಿದೆ. 'ಸಾರ್ವಜನಿಕ' ಕ್ಷೇತ್ರದ ಸುಧಾರಣೆಯ ಬಗ್ಗೆ ಇದು ಹೆಚ್ಚಿನ ಕಾಳಜಿಯನ್ನು ಹೊಂದಿದೆ. ಅಂದರೆ, ಮಹಿಳೆಯರ 'ಖಾಸಗಿ' ಅಥವಾ ಕೌಟುಂಬಿಕ ಬದುಕನ್ನು ಮರುಕ್ರಮಗೊಳಿಸುವುದಕ್ಕೆ ಬದಲಾಗಿ ಅವರ ಕಾನೂನಾತ್ಮಕ ಮತ್ತು ರಾಜಕೀಯ ಸ್ಥಾನಮಾನವನ್ನು ಹೆಚ್ಚಿಸುವುದು ಹಾಗೂ ಅವರ ಶೈಕ್ಷಣಿಕ ಮತ್ತು ವೃತ್ತಿ ಸಂಭಾವ್ಯತೆಗಳನ್ನು ಸುಧಾರಿಸುವುದು. ಇದಕ್ಕೆ ವ್ಯತಿರಿಕ್ತವಾಗಿ ಸಮಾಜವಾದಿ ಸ್ತ್ರೀವಾದಿಗಳು; ಮಹಿಳಾ ಅಧೀನತೆ ಹಾಗೂ ಬಂಡವಾಳಶಾಹಿ ಮಾದರಿಯ ಉತ್ಪಾದನೆಯ ನಡುವಿನ ಸಂಬಂಧವನ್ನು ಎತ್ತಿತೋರಿಸುತ್ತಾರೆ. ಮಹಿಳೆಯರ ಆರ್ಥಿಕ ಮಹತ್ವವು ಕುಟುಂಬ ಅಥವ ಗೃಹಕೃತ್ಯದ ಬದುಕಿಗೆ ಸೀಮಿತವಾಗಿದೆಯೆಂಬುದರ ಕಡೆಗೆ ಇವರು ನಮ್ಮ ಗಮನವನ್ನು ಸೆಳೆಯುತ್ತಾರೆ. ಉದಾಹರಣೆಗೆ ಪುರುಷ ಕೆಲಸಗಾರರನ್ನು ಕೌಟುಂಬಿಕ ಕೆಲಸದ ಹೊರೆಯಿಂದ ಮಹಿಳೆಯರು ಬಿಡುಗಡೆಗೊಳಿಸುತ್ತಾರೆ. ಮುಂದಿನ ಜನಾಂಗದ ಬಂಡವಾಳಶಾಹಿ ಕೆಲಸಗಾರರನ್ನು ಪೋಷಿಸಿ ಅವರನ್ನು ವಿದ್ಯಾವಂತರನ್ನಾಗಿಸಲು ಸಹಾಯ ಮಾಡುತ್ತಾರೆ ಹಾಗೂ ಮೀಸಲು ಕಾರ್ಮಿಕ ಪಡೆಯಂತೆ (reserve army of labour) ಕಾರ್ಯನಿರ್ವಹಿಸುತ್ತಾರೆ.

ಸ್ತ್ರೀವಾದದ ಎರಡನೆ ಅಲೆಯ ವೈಶಿಷ್ಟ್ಯತೆಯು ಮುಖ್ಯವಾಗಿ ಸಾಂಪ್ರದಾಯಿಕ ರಾಜಕೀಯ ತತ್ವಗಳನ್ನು ಆಧರಿಸದ ಸ್ತ್ರೀವಾದಿ ವಿಮರ್ಶೆಯಿಂದಾಗಿ ಹೊರಹೊಮ್ಮಿದೆ. ಈ ವಿಮರ್ಶೆಯನ್ನು 'ಮೂಲಭೂತವಾದಿ ಸ್ತ್ರೀವಾದ' ಎನ್ನಲಾಗುತ್ತದೆ. ಲಿಂಗ ವಿಭಜನೆಗಳು ಅತ್ಯಂತ ಮೂಲಭೂತ ಹಾಗೂ ರಾಜಕೀಯವಾಗಿ ಮಹತ್ವದ ಬಿರುಕುಗಳೆಂದು ಮೂಲಭೂತವಾದಿ ಸ್ತ್ರೀವಾದಿಗಳು ನಂಬುತ್ತಾರೆ. ಅವರ ಅಭಿಪ್ರಾಯದಲ್ಲಿ ಎಲ್ಲಾ ಸಮಾಜಗಳು, ಅವು ಐತಿಹಾಸಿಕವಾಗಿರಲಿ ಅಥವಾ ಸಮಕಾಲೀನವಾಗಿರಲಿ, ಪುರುಷ ಪ್ರಾಧಾನ್ಯತೆಯ ಲಕ್ಷಣವನ್ನು ಹೊಂದಿವೆ. ಕೇಟ್ ಮಿಲ್ಲೆಟ್‌ನ (1969) ಪ್ರಕಾರ, 'ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರನ್ನು ಇತರೆ ಅರ್ಧದಷ್ಟಿರುವ ಪುರುಷರು ನಿಯಂತ್ರಿಸುತ್ತಾರೆ'. ಹೀಗಾಗಿ ಮೂಲಭೂತವಾದಿ ಸ್ತ್ರೀವಾದಿಗಳು ಲೈಂಗಿಕ ಕ್ರಾಂತಿಯ ಅವಶ್ಯಕತೆಯನ್ನು ಘೋಷಿಸುತ್ತಾರೆ. ಈ ಕ್ರಾಂತಿಯು ಮುಖ್ಯವಾಗಿ ವೈಯಕ್ತಿಕ, ಕೌಟುಂಬಿಕ ಮತ್ತು ಗೃಹಕೃತ್ಯದ ಬದುಕನ್ನು ಪುನರ್‌ರಚಿಸಲಿದೆಯೆಂಬುದು ಅವರ ಅಭಿಪ್ರಾಯವಾಗಿದೆ. ಹೀಗಾಗಿ, 'ವೈಯಕ್ತಿಕವಾದುದು ರಾಜಕೀಯವಾದುದು' ಎಂಬುದು ಮೂಲಭೂತವಾದಿ ಸ್ತ್ರೀವಾದದ ವಿಶಿಷ್ಟ ಘೋಷಣೆಯಾಗಿದೆ. ಇದರ ಅತಿಯಾದ ರೂಪದಲ್ಲಿ ಮಾತ್ರ ಮೂಲಭೂತವಾದಿ ಸ್ತ್ರೀವಾದವು ಪುರುಷರನ್ನು 'ಶತ್ರು'ವೆಂದು ಚಿತ್ರಿಸುತ್ತದೆ ಹಾಗೂ ಮಹಿಳೆಯರು ಪುರುಷ ಸಮಾಜದಿಂದ ವಿಮುಖರಾಗಬೇಕಾದ ಅಗತ್ಯವನ್ನು ಘೋಷಿಸುತ್ತದೆ. ಈ ನಿಲುವನ್ನು ಕೆಲವೊಮ್ಮೆ ರಾಜಕೀಯ ಸಲಿಂಗಕಾಮದ ರೂಪದಲ್ಲಿ ವ್ಯಕ್ತಪಡಿಸಲಾಗುತ್ತದೆ. 1970ರಿಂದೀಚೆಗೆ ಸ್ತ್ರೀವಾದವು ಅನೇಕ ವಿಧಗಳಲ್ಲಿ;

ಉದಾರವಾದಿ, ಸಮಾಜವಾದಿ ಹಾಗೂ ಮೂಲಭೂತವಾದಿ ಎಂಬ ಮೂರು ವಿಧದ ವಿಭಜನೆಯಿಂದಾಚೆಗೆ ಚಲಿಸಿದೆ. 'ಹೊಸ ಸ್ತ್ರೀವಾದ' ಅಥವಾ 'ಮೂರನೆ ಅಲೆಯ ಸ್ತ್ರೀವಾದ'ವು ವಿಭಿನ್ನವಾಗಿದೆಯಾದರೂ ಇದು ಲಿಂಗ ಸಮಾನತೆಯ ಸಾಂಪ್ರದಾಯಿಕ ಗುರಿಯ ಬಗ್ಗೆ ಅನುಮಾನವನ್ನು ಹೊಂದಿದೆ. ಇದಕ್ಕೆ ಬದಲಾಗಿ ಇದು ಮಹಿಳೆಯರು ಮತ್ತು ಪುರುಷರು ಹಾಗೂ ಮಹಿಳೆಯರು ಮತ್ತು ಮಹಿಳೆಯರ ನಡುವಿನ ವ್ಯತ್ಯಾಸಗಳಿಗೆ ಒತ್ತು ನೀಡುತ್ತದೆ.

**ಮೇರಿ ವೊಲ್‌ಸ್ಟೋನ್‌ಕ್ರಾಫ್ಟ್ (1759–97)**
ಯುನೈಟೆಡ್ ಕಿಂಗ್‌ಡಮ್‌ನ ಸಾಮಾಜಿಕ ಸಿದ್ಧಾಂತಿ ಹಾಗೂ ಸ್ತ್ರೀವಾದಿ. ರೂಸೋನ ಪ್ರಜಾಸತ್ತಾತ್ಮಕ ಮೂಲಭೂತವಾದದಿಂದ ಆಳವಾಗಿಪ್ರಭಾವಿತರಾದ ವೊಲ್‌ಸ್ಟೋನ್‌ಕ್ರಾಫ್ಟ್, ಮಹಿಳಾ ಮತದಾನ ಚಳುವಳಿಯ ಉಗಮದ ಸುಮಾರು 50 ವರ್ಷದ ಹಿಂದೆಯೇ ಮೊದಲ ವ್ಯವಸ್ಥಿತವಾದ ಸ್ತ್ರೀವಾದಿ ವಿಮರ್ಶೆಯನ್ನು ಅಭಿವೃದ್ಧಿಪಡಿಸಿದರು. ಅವರ ಅತ್ಯಂತ ಮಹತ್ವದ ಕೃತಿ, 'ಎ ವಿಂಡಿಕೇಷನ್ ಆಫ್ ದಿ ರೈಟ್ಸ್ ಆಫ್ ವುಮೆನ್' ([1792] 1985) ಲಾಕ್‌ನ ಉದಾರವಾದದಿಂದ ಪ್ರಭಾವಿತವಾಗಿತ್ತು. ಇದು 'ವ್ಯಕ್ತಿತ್ವ'ದ ಕಲ್ಪನೆಯ ಆಧಾರದ ಮೇಲೆ ಮಹಿಳೆಯರ ಸಮಾನ ಹಕ್ಕು, ಅದರಲ್ಲೂ ಮುಖ್ಯವಾಗಿ ಶಿಕ್ಷಣದ ಹಕ್ಕಿಗೆ ಆದ್ಯತೆಯನ್ನು ನೀಡಿತು. ಆದರೆ ಸಮಕಾಲೀನ ಸ್ತ್ರೀವಾದದ ಕಾಳಜಿಗಳಿಗೆ ಪ್ರಸ್ತುತವಾದ ಹೆಣ್ತನವನ್ನು ಕುರಿತಾದ ಹೆಚ್ಚು ಸಂಕೀರ್ಣವಾದ ವಿಶ್ಲೇಷಣೆಯನ್ನು ಈ ಕೃತಿಯು ಅಭಿವೃದ್ಧಿಪಡಿಸಿತು. ವೊಲ್‌ಸ್ಟೋನ್‌ಕ್ರಾಫ್ಟ್ ಅರಾಜಕತಾವಾದಿ ವಿಲಿಯಮ್ ಗಾಡ್ವಿನ್‌ನನ್ನು ವಿವಾಹವಾಗಿದ್ದರು. ಈಕೆ, ಫ್ರಾಂಕೆನ್‌ಸ್ಟೀನ್ ಕೃತಿಯ ಲೇಖಕಿ ಮೇರಿ ಶೆಲ್ಲಿಯ ತಾಯಿಯೂ ಹೌದು.

---

**ಉದಾರವಾದಿ ಸ್ತ್ರೀವಾದ (Liberal Feminisim)**: ಲಿಂಗರಹಿತ ವ್ಯಕ್ತಿತ್ವದ ನಂಬಿಕೆಯ ಆಧಾರದಲ್ಲಿ ಮಹಿಳೆಯರು ಹಾಗೂ ಪುರುಷರಿಬ್ಬರಿಗೂ ಸಾಮಾಜಿಕ ಕ್ಷೇತ್ರಕ್ಕೆ ಸಮಾನ ಪ್ರವೇಶ ಸಿಗಬೇಕೆಂಬ ಪ್ರಮುಖ ಗುರಿಯನ್ನು ಹೊಂದಿರುವ ಒಂದು ಸ್ತ್ರೀವಾದಿ ಸಂಪ್ರದಾಯ.

---

**ಸಾಮಾಜಿಕ ಸ್ತ್ರೀವಾದ (Socialist Feminism)**: ಪಿತೃಪ್ರಭುತ್ವ ಹಾಗೂ ಬಂಡವಾಳಶಾಹಿಯ ನಡುವೆ ಇರುವ ಸಂಬಂಧದ ಆಧಾರದಲ್ಲಿ ಲಿಂಗ ಸಮಾನತೆಯನ್ನು ಸಾಧಿಸಲು ಆರ್ಥಿಕ ಬದುಕನ್ನು ಪುನರ್‌ರಚಿಸಬೇಕೆಂದು ಆಗ್ರಹಿಸುವ ಒಂದು ಸ್ತ್ರೀವಾದಿ ಸಂಪ್ರದಾಯ.

---

**ಮೂಲಭೂತವಾದಿ ಸ್ತ್ರೀವಾದ (Radical Feminism)**: ಜೀವನದ ಎಲ್ಲಾ ಕ್ಷೇತ್ರಗಳನ್ನು, ಮುಖ್ಯವಾಗಿ 'ವೈಯಕ್ತಿಕ' ಜೀವನವನ್ನು ಆಮೂಲಾಗ್ರವಾಗಿ ಬದಲಾವಣೆ ಮಾಡುವ ಮೂಲಕ ಪಿತೃಪ್ರಭುತ್ವವನ್ನು ಉರುಳಿಸುವ ಉದ್ದೇಶವನ್ನು ಹೊಂದಿರುವ ಒಂದು ಸ್ತ್ರೀವಾದಿ ಸಂಪ್ರದಾಯ.

---

**ಹಸಿರು ರಾಜಕೀಯ (Green Politics)**

ಇಪ್ಪತ್ತನೆ ಶತಮಾನದ ಕೊನೆಯ ಭಾಗದಿಂದ, ಹಸಿರು ರಾಜಕೀಯ ಅಥವಾ ಪರಿಸರವಾದವನ್ನು ಪರಿಸರವಾದ ಚಳುವಳಿಯ ಉಗಮದೊಂದಿಗೆ ಸಂಬಂಧವನ್ನು ಹೊಂದಿರುವ ಒಂದು ಹೊಸ ಸಿದ್ಧಾಂತವಾಗಿ ಗ್ರಹಿಸಲಾಗುತ್ತಿದೆಯಾದರೂ, ಇದರ ಬೇರುಗಳನ್ನು ಹತ್ತೊಂಬತ್ತನೆ ಶತಮಾನದ ಕೈಗಾರೀಕರಣದ ವಿರುದ್ಧದ ದಂಗೆಯಲ್ಲಿ ಕಾಣಬಹುದು. ಹಸಿರು ರಾಜಕೀಯವು ಆರ್ಥಿಕಾಭಿವೃದ್ಧಿಯ ತ್ವರಿತಗತಿಯಿಂದಾಗಿ ನೈಸರ್ಗಿಕ ವಿಶ್ವಕ್ಕಾಗುತ್ತಿರುವ ಹಾನಿಯ ಕುರಿತಾದ ಕಾಳಜಿಯನ್ನು ವ್ಯಕ್ತಪಡಿಸುತ್ತದೆ. (ಪರಮಾಣು ತಂತ್ರಜ್ಞಾನದ ಆಗಮನ, ಆಮ್ಲ ಮಳೆ, ಓಝೋನ್ ಪದರದ ಕ್ಷೀಣಿಸುವಿಕೆ, ಜಾಗತಿಕ ತಾಪಮಾನ ಮುಂತಾದವುಗಳಿಂದಾಗಿ ಇಪ್ಪತ್ತನೆ ಶತಮಾನದ ದ್ವಿತೀಯ ಭಾಗದಿಂದೀಚೆಗೆ ಈ ಹಾನಿಯು ಉಲ್ಬಣಗೊಂಡಿದೆ). ಇದಲ್ಲದೆ ಮಾನವನ ಅಸ್ತಿತ್ವದ ಕುಸಿಯುತ್ತಿರುವ ಗುಣಮಟ್ಟದ ಕುರಿತಾದ ಆತಂಕ ಮತ್ತು ಅಂತಿಮವಾಗಿ ಮಾನವ ಜಾತಿಯ ಉಳಿವಿನ ಬಗೆಗಿನ ಕಾಳಜಿಯನ್ನು ಸಹಾ ಇದು ಒಳಗೊಂಡಿದೆ. ಈ ಕಾಳಜಿಗಳನ್ನು ಸಾಂಪ್ರದಾಯಿಕ ಸಿದ್ಧಾಂತಗಳ ಮೂಲಕ ಕೆಲವೊಮ್ಮೆ ವ್ಯಕ್ತಪಡಿಸಲಾಗುತ್ತದೆ. ಉದಾಹರಣೆಗೆ, ಪರಿಸರ ಸಮಾಜವಾದವು ಪರಿಸರ ವಿನಾಶವನ್ನು; ಬಂಡವಾಳಶಾಹಿಯ ಲಾಭವನ್ನು ಕುರಿತ ಅತಿ ದುರಾಸೆಯೆಂಬುದಾಗಿ ವಿವರಿಸುತ್ತದೆ. ಪರಿಸರ ಸಂರಕ್ಷಣಾವಾದವು ಸಂರಕ್ಷಣೆಯ ಉದ್ದೇಶವನ್ನು, ಸಾಂಪ್ರದಾಯಿಕ ಮೌಲ್ಯಗಳು ಹಾಗೂ ಸ್ಥಾಪಿತ ಸಂಸ್ಥೆಗಳನ್ನು ಸಂರಕ್ಷಿಸುವ ಅಪೇಕ್ಷೆಯೊಂದಿಗೆ ಸಂಪರ್ಕಿಸುತ್ತದೆ. ಪರಿಸರ ಸ್ತ್ರೀವಾದವು, ಪುರುಷ ಅಧಿಕಾರದ ವ್ಯವಸ್ಥೆಯಲ್ಲಿ ಪರಿಸರ ಸಂಬಂಧಿ ಬಿಕ್ಕಟ್ಟಿನ ಮೂಲಗಳನ್ನು ಗುರುತಿಸುತ್ತದೆ. ನೈಸರ್ಗಿಕ ಪ್ರಕ್ರಿಯೆಗಳು ಹಾಗೂ ನೈಸರ್ಗಿಕ ವಿಶ್ವದೆಡೆಗಿನ ಸಂವೇದನಾಶೀಲತೆಯು ಮಹಿಳೆಯರಿಗಿಂತ ಪುರುಷರಲ್ಲಿ ಕಡಿಮೆಯೆಂಬುದನ್ನು ಇದು ವ್ಯಕ್ತಪಡಿಸುತ್ತದೆ.

ಇತರೆ ಎಲ್ಲಾ ಸಿದ್ಧಾಂತಗಳು ಅಳವಡಿಸಿಕೊಂಡಿರುವ ಮಾನವಕೇಂದ್ರಿತ ನಿಲುವಿಗೆ ಪರ್ಯಾಯವನ್ನು ನೀಡುತ್ತದೆಂಬ ಅಂಶವು ಹಸಿರು ರಾಜಕೀಯಕ್ಕೆ ಆಮೂಲಾಗ್ರವಾದ ಲಾಭವನ್ನು ಒದಗಿಸುತ್ತದೆ. ಇದು ನೈಸರ್ಗಿಕ ಪ್ರಪಂಚವನ್ನು ಮಾನವನ ಅಗತ್ಯಗಳನ್ನು ತೃಪ್ತಿಪಡಿಸಲು ಲಭ್ಯವಿರುವ ಕೇವಲ ಒಂದು ಸಂಪನ್ಮೂಲವಾಗಿ ನೋಡುವುದಿಲ್ಲ. ಪರಿಸರದ ಮಹತ್ವವನ್ನು ಎತ್ತಿತೋರಿಸುವ ಮೂಲಕ ಮಾನವ ಜಾತಿಯನ್ನು ನಿಸರ್ಗದ ಕೇವಲ ಒಂದು ಭಾಗವಾಗಿ ಚಿತ್ರಿಸುವ ಪರಿಸರ ಕೇಂದ್ರಿತ ವಿಶ್ವ–ದರ್ಶನವೊಂದನ್ನು ಹಸಿರು ರಾಜಕೀಯವು ಅಭಿವೃದ್ಧಿಪಡಿಸಿದೆ. ಜೇಮ್ಸ್ ಲವ್‌ಲಾಕ್ (1979, 2006) ಪ್ರತಿಪಾದಿಸಿದ 'ಗೈಯಾ ಪೂರ್ವಕಲ್ಪನೆ'ಯು (Gaia Hypothesis) ಈ ಕ್ಷೇತ್ರದ ಅತ್ಯಂತ ಪ್ರಭಾವಶಾಲಿ ಸಿದ್ಧಾಂತಗಳಲ್ಲೊಂದಾಗಿದೆ. ಇದು ಭೂಮಿಯನ್ನು ಮುಖ್ಯವಾಗಿ ತನ್ನ ಅಸ್ತಿತ್ವದ ಬಗ್ಗೆ ಕಾಳಜಿಯಿರುವ ಒಂದು ಜೀವಿಯಾಗಿ ಚಿತ್ರಿಸುತ್ತದೆ. ಇತರರು ಇಂತಹ ತೀವ್ರ ಸಮಗ್ರತಾವಾದದ (radical holism) ಪರವಾಗಿ ಸಹಾನುಭೂತಿಯನ್ನು ವಕ್ತಪಡಿಸಿದ್ದಾರೆ. ಇವರು ಜೀವನದ ಏಕತೆಗೆ ಆದ್ಯತೆ ನೀಡುವ ಟಾವೋಯಿಸ್ಗಮ್ ಹಾಗೂ ಝೆನ್ ಬುದ್ಧಿಸಮ್ ಮುಂತಾದ ಪೌರಾತ್ಯ ಧರ್ಮಗಳ ವಿಚಾರಗಳಿಂದ ಪ್ರಭಾವಿತರಾಗಿದ್ದಾರೆ (ಕ್ಯಾಪ್ರಾ, 1983). ಕೆಲವು ಪರಿಸರ ಒತ್ತಡ ಗುಂಪುಗಳಲ್ಲಿರುವಂತಹ 'ಮೇಲ್ನೋಟ'ದ ಅಥವಾ ಮಾನವತಾ ಪರಿಸರಶಾಸ್ತ್ರಜ್ಞರ ಪ್ರಕಾರ ಸ್ವಹಿತಾಸಕ್ತಿ ಹಾಗೂ ಸಾಮಾನ್ಯ ತಿಳಿವಳಿಕೆಗೆ ಮಾಡುವ ಮನವಿಯು, ಮನುಷ್ಯರು ಪರಿಸರಾತ್ಮಕವಾಗಿ ದೃಢವಾದ ನೀತಿಗಳು ಹಾಗೂ ಜೀವನಕ್ರಮಗಳನ್ನು ಅಳವಡಿಸಿಕೊಳ್ಳಲು ಅವರ ಮನವೊಲಿಸುತ್ತದೆ.

ಇದು ಸಾಮಾನ್ಯವಾಗಿ ಸುಸ್ಥಿರ ಅಭಿವೃದ್ಧಿಗೆ ಅನುಸಾರವಾಗಿರುತ್ತದೆ. ತೀವ್ರ ಕಾಳಜಿಯುಳ್ಳ ಪರಿಸರಶಾಸ್ತ್ರಜ್ಞರ ಪ್ರಕಾರ ರಾಜಕೀಯ ಆದ್ಯತೆಗಳನ್ನು ಮೂಲಭೂತವಾಗಿ ಮರುಕ್ರಮಗೊಳಿಸಿದಾಗ ಹಾಗೂ ಯಾವುದೇ ವೈಯಕ್ತಿಕ ವರ್ಗಗಳ ಹಿತಾಸಕ್ತಿಗಿಂತ ಪರಿಸರ ವ್ಯವಸ್ಥೆಯ ಹಿತಾಸಕ್ತಿಗೆ ಹೆಚ್ಚು ಆದ್ಯತೆ ನೀಡಿದಾಗ ಮಾತ್ರ ಗ್ರಹಗಳ ಹಾಗೂ ಮಾನವನ ಅಸ್ತಿತ್ವವನ್ನು ಸಂರಕ್ಷಿಸಲು ಸಾಧ್ಯ. ಜರ್ಮನಿ, ಆಸ್ಟ್ರಿಯಾ ಹಾಗು ಯೂರೋಪಿನ ಇತರೆ ಕಡೆಗಳಲ್ಲಿ 1970ರಿಂದೀಚೆಗೆ ಹುಟ್ಟಿಕೊಂಡ 'ಪಕ್ಷ–ವಿರೋಧಿ' ಹಸಿರು ಪಕ್ಷಗಳಲ್ಲಿ ಈ ಎರಡೂ ಗುಂಪುಗಳ ಸದಸ್ಯರನ್ನು ಕಾಣಬಹುದು.

---

**ಮಾನವಕೇಂದ್ರವಾದ (Anthropocentrism)**: ಮಾನವನ ಅಗತ್ಯಗಳು ಹಾಗೂ ಹಿತಾಸಕ್ತಿಗಳು ನೈತಿಕ ಹಾಗೂ ತಾತ್ವಿಕವಾಗಿ ಮಹತ್ವವಾದವು ಎಂಬ ನಂಬಿಕೆ. ಇದು ಪರಿಸರಕೇಂದ್ರಿತವಾದಕ್ಕೆ ವಿರುದ್ಧವಾದುದು.

---

**ಸಮಗ್ರತಾವಾದ (Holism)**: ಸಮಗ್ರವು ಅದರ ಭಾಗಗಳಿಗಿಂತ ಹೆಚ್ಚು ಮುಖ್ಯವಾದುದೆಂಬ ನಂಬಿಕೆ. ಅಂದರೆ, ಭಾಗಗಳ ನಡುವಿನ ಸಂಬಂಧಗಳನ್ನು ಅಧ್ಯಯನ ಮಾಡುವ ಮೂಲಕ ಮಾತ್ರ ಇದನ್ನು ಅರ್ಥಮಾಡಿಕೊಳ್ಳಬಹುದು.

---

**ಪರಿಕಲ್ಪನೆ**

**ಪರಿಸರವಾದ (Ecologism):** ಪರಿಸರ ವಿಜ್ಞಾನವು (ಈ ಪದವನ್ನು ಮೊಟ್ಟಮೊದಲ ಬಾರಿಗೆ ಅರ್ನ್ಸ್ಟ್ ಹೇಕೆಲ್ 1873ರಲ್ಲಿ ಉಪಯೋಗಿಸಿದರು) ಜೀವಂತವಿರುವ ಜೀವಿಗಳು ಹಾಗೂ ಅವುಗಳ ಪರಿಸರದ ನಡುವಿನ ಸಂಬಂಧಗಳ ಅಧ್ಯಯನವಾಗಿದೆ. ಎಲ್ಲಾ ರೂಪದ ಜೀವವನ್ನು ಉಳಿಸಿಕೊಳ್ಳುವ ಸಂಬಂಧಗಳ ಜಾಲದತ್ತ ಇದು ಗಮನಸೆಳೆಯುತ್ತದೆ. ಪರಿಸರವಾದವು ಒಂದು ರಾಜಕೀಯ ತತ್ವ ಅಥವಾ ಸಿದ್ಧಾಂತವಾಗಿದ್ದು, ಪರಿಸರ ವಿಜ್ಞಾನದ ಕಲ್ಪನೆಗಳ ಆಧಾರದ ಮೇಲೆ ರಚಿಸಲ್ಪಟ್ಟಿದೆ. ಮುಖ್ಯವಾಗಿ ಇದು ಮನುಷ್ಯ ಮತ್ತು ನೈಸರ್ಗಿಕ ವಿಶ್ವದ ನಡುವಿನ ಸಂಬಂಧವನ್ನು ಆಧರಿಸಿದೆ: ಮಾನವರು ನಿಸರ್ಗದ ಒಂದು ಭಾಗವೇ ಹೊರತು, ಅದರ 'ಮಾಲೀಕ'ರಲ್ಲ. ಕೆಲವೊಮ್ಮೆ ಪರಿಸರವಿಜ್ಞಾನವನ್ನು ಪರಿಸರ ಸಂರಕ್ಷಣಾವಾದದಿಂದ ವಿಭಿನ್ನವಾಗಿ ನೋಡಲಾಗುತ್ತದೆ. ಮೊದಲನೆಯದು ಜೀವಕೇಂದ್ರಿತ ದೃಷ್ಟಿಕೋನವನ್ನು ಅಳವಡಿಸಿಕೊಳ್ಳುವ ಅರ್ಥವನ್ನು ನೀಡಿದರೆ, ಎರಡನೆಯದು ಅಂತಿಮವಾಗಿ ಮಾನವನ ಒಳಿತಿಗಾಗಿ ನಿಸರ್ಗದ ಸಂರಕ್ಷಣೆಯನ್ನು ಕುರಿತದ್ದಾಗಿದೆ.

**ವಿಶ್ವಬಂಧುತ್ವವಾದ (Cosmopolitanism)**

ವಿಶ್ವಬಂಧುತ್ವವಾದದ ವಿಚಾರಗಳನ್ನು ಪ್ರಾಚೀನ ಗ್ರೀಕಿನ ಸಿನಿಕರು ಹಾಗೂ ಪ್ರಾಚೀನ ರೋಮ್‌ನ ಸ್ಟೋಯಿಕರ ಕಾಲದಲ್ಲಿಯೇ ಕಾಣಬಹುದಾದರೂ, ಇದನ್ನು ಅದರದೇ ಆದ ಒಂದು ಸೈದ್ಧಾಂತಿಕ ಸಂಪ್ರದಾಯವಾಗಿ 1990ರ ದಶಕದಿಂದೀಚೆಗೆ ಪರಿಗಣಿಸಲಾಗುತ್ತಿದೆ. ಜಾಗತಿಕ ಅಂತಃಸಂಪರ್ಕದ

ಹೆಚ್ಚಳದಿಂದಾಗಿ ಉಂಟಾದ ನೈತಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಪರಿಣಾಮಗಳು ಹೆಚ್ಚು ಸ್ಪಷ್ಟಗೊಳ್ಳತೊಡಗಿದಂತೆ; ವಿಶ್ವಬಂಧುತ್ವವಾದವು ಅಸ್ತಿತ್ವಕ್ಕೆ ಬಂದಿದೆ. ಈ ದೃಷ್ಟಿಯಿಂದ ಜಾಗತೀಕರಣದ ಸೈದ್ಧಾಂತಿಕ ಅಭಿವ್ಯಕ್ತಿಯಾಗಿ ವಿಶ್ವಬಂಧುತ್ವವಾದವನ್ನು ನೋಡಬಹುದು. (ಇವೆರಡರ ನಡುವಿನ ಸಂಬಂಧವು ಸಂಕೀರ್ಣವಾದಾಗ್ಯೂ; ಕಾಸ್ಮೋಪಾಲಿಟನ್‌ಗಳು, ಪ್ರಸ್ತುತ ಪ್ರಬಲ ರೂಪದಲ್ಲಿರುವ ಜಾಗತೀಕರಣದಲ್ಲಿ ಮೂಲಭೂತ ಬದಲಾವಣೆಗಳನ್ನು ಬಯಸುತ್ತಾರೆ). ಶಾಬ್ದಿಕ ಅರ್ಥದಲ್ಲಿ ಕಾಸ್ಮೋಪಾಲಿಟನಿಸಮ್ ಎಂದರೆ, 'ವಿಶ್ವನಗರ' (Cosmopolis) ಅಥವಾ 'ವಿಶ್ವರಾಜ್ಯ'ದಲ್ಲಿನ (World State) ನಂಬಿಕೆ. ಆದರೆ, ಜಾಗತಿಕ ರಾಜಕೀಯ ಸಂಸ್ಥೆಗಳನ್ನು ಸ್ಥಾಪಿಸುವ ಅನ್ವೇಷಣೆಯಲ್ಲಿ ವ್ಯಕ್ತವಾಗುವ ಆಧುನಿಕ ಕಾಸ್ಮೋಪಾಲಿಟನ್ ಚಿಂತನೆಗೆ ಈ ರೀತಿಯ 'ರಾಜಕೀಯ' ವಿಶ್ವಬಂಧುತ್ವವಾದದ ಪ್ರಸ್ತುತತೆಯು ಪರಿಮಿತವಾಗಿದೆ. 'ವಿಶ್ವ ಸರ್ಕಾರ'ದ ಅಪ್ರಚಲಿತ (unfashionable) ಕಲ್ಪನೆಯನ್ನು ಒಳಗೊಂಡಿರುವುದರಿಂದ ಇದು ಅಷ್ಟು ಪ್ರಸ್ತುತವೆನಿಸುವುದಿಲ್ಲ. ಹೀಗಾಗಿ ಆಧುನಿಕ ವಿಶ್ವಬಂಧುತ್ವವಾದವು ನೈತಿಕ ಅಥವಾ ಸಾಂಸ್ಕೃತಿಕ ಲಕ್ಷಣವನ್ನು ಹೊಂದಿದೆ.

ಜಾಗತಿಕ ವಿರೋಧಿ ಕ್ರಿಯಾಶೀಲತ್ವವನ್ನು ವ್ಯಕ್ತಪಡಿಸುವ 'ನೈತಿಕ' ವಿಶ್ವಬಂಧುತ್ವ ಕಲ್ಪನೆಯು ವಿಶ್ವವು, ಒಂದು ಏಕೈಕ ನೈತಿಕ ಸಮುದಾಯವೆಂಬ ನಂಬಿಕೆಯಾಗಿದೆ. ರಾಷ್ಟ್ರೀಯತೆ, ಧರ್ಮ, ಜನಾಂಗೀಯತೆ ಮುಂತಾದ ಯಾವುದೇ ಭೇದಭಾವಗಳಿಲ್ಲದೆ ಜನರು ವಿಶ್ವದ ಇತರೆ ಎಲ್ಲಾ ಜನರೊಡನೆ ಬಾಧ್ಯತೆಯುಳ್ಳವರಾಗಿರುತ್ತರೆಂಬುದು ಇದರರ್ಥವಾಗಿದೆ. ಯಾವುದೇ ರಾಜಕೀಯ ಸಮುದಾಯಕ್ಕಿಂತ, ವ್ಯಕ್ತಿಯು ನೈತಿಕ ಪ್ರಜ್ಞೆಯ ಕೇಂದ್ರಬಿಂದುವೆಂಬ ಪ್ರಮುಖ ಕಲ್ಪನೆಯು ಈ ನೈತಿಕ ಆಲೋಚನೆಯ ಮೂಲಭೂತ ಆಧಾರವಾಗಿದೆ. ಮಾನವ ಹಕ್ಕುಗಳ ತತ್ವದ ಮೂಲಕ ಇದನ್ನು ಸಾಮಾನ್ಯವಾಗಿ ಪ್ರತಿಪಾದಿಸಲಾಗುತ್ತದೆ. ಅದೇನೆ ಇರಲಿ, ಆಧುನಿಕ ವಿಶ್ವಬಂಧುತ್ವವಾದವು ವಿಭಿನ್ನ ಉದಾರವಾದಿ ಹಾಗೂ ಸಮಾಜವಾದಿ ಸ್ವರೂಪಗಳನ್ನು ಒಳಗೊಂಡಿದೆ.

ಉದಾರ ವಿಶ್ವಬಂಧುತ್ವವಾದವನ್ನು ಎರಡು ರೀತಿಗಳಲ್ಲಿ ವ್ಯಕ್ತಪಡಿಸಲಾಗುತ್ತದೆ. ಮೊದಲನೆಯದು, ಮುಖ್ಯವಾಗಿ 'ಉದಾರ' ಹಕ್ಕುಗಳಾದ ಜೀವಿಸುವ ಹಕ್ಕು, ಸ್ವಾತಂತ್ರ್ಯದ ಮತ್ತು ಆಸ್ತಿಯ ಹಕ್ಕು, ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಸ್ವೇಚ್ಛಾನುಸಾರ ಬಂಧನದಿಂದ ಸ್ವಾತಂತ್ರ್ಯ ಮುಂತಾದ ನಾಗರಿಕ ಹಾಗೂ ರಾಜಕೀಯ ಹಕ್ಕುಗಳನ್ನು ಸಾರ್ವತ್ರೀಕರಣಗೊಳಿಸುವ ಪ್ರಯತ್ನ. ಈ ರೂಪದ ವಿಶ್ವಬಂಧುತ್ವವಾದವು; ಇತರೆ ಅಂಶಗಳಲ್ಲದೆ, ಅಂತಾರಾಷ್ಟ್ರೀಯ ನ್ಯಾಯಾಲಯಗಳು ಹಾಗೂ ನ್ಯಾಯಮಂಡಳಿಗಳ (Tribunals) ಮೂಲಕ ಮಾನವೀಯ ಹಸ್ತಕ್ಷೇಪಕ್ಕೆ ಬೆಂಬಲ ಹಾಗೂ ಅಂತಾರಾಷ್ಟ್ರೀಯ ಕಾನೂನಿನ ಚೌಕಟ್ಟನ್ನು ಬಲಪಡಿಸುವ ಪ್ರಯತ್ನಗಳೊಂದಿಗೆ ಸಂಬಂಧವನ್ನು ಹೊಂದಿದೆ. ಎರಡನೆ ರೂಪದ ಉದಾರ ವಿಶ್ವಬಂಧುತ್ವವಾದವು ಆರ್ಥಿಕ ಉದಾರವಾದದಿಂದ ವ್ಯುತ್ಪನ್ನಗೊಂಡಿದ್ದು, ವೈಯಕ್ತಿಕ ಸ್ವಾತಂತ್ರ್ಯವನ್ನು ವಿಸ್ತರಿಸುವ ಮಾರ್ಗವಾಗಿ ಪರಿಗಣಿಸಲಾಗುವ ಹಾಗೂ ಭೌತಿಕ ಪ್ರಗತಿಯನ್ನು ಉತ್ತೇಜಿಸುವ ಮಾರುಕಟ್ಟೆ ಸಮಾಜವನ್ನು ಸಾರ್ವತ್ರಿಕರಣಗೊಳಿಸುವ ಪ್ರಯತ್ನಗಳಿಗೆ ಒತ್ತು ನೀಡುತ್ತದೆ. ಇದರೊಂದಿಗೆ ಹೋಲಿಸಿದರೆ, ಸಮಾಜವಾದಿ ವಿಶ್ವಬಂಧುತ್ವವು ತುಂಬಾ ವಿಭಿನ್ನವಾಗಿದೆ. ಇದು ಕಾರ್ಮಿಕ ವರ್ಗದ ಐಕ್ಯತೆಯು ಬಹುರಾಷ್ಟ್ರೀಯ ಲಕ್ಷಣವನ್ನು ಹೊಂದಿದೆಯೆಂಬ ಮಾರ್ಕ್ಸ್‌ವಾದಿ ನಂಬಿಕೆಯಲ್ಲಿ ಬಲವಾಗಿ ಬೇರೂರಿದೆ. 'ಎಲ್ಲಾ ದೇಶಗಳ ದುಡಿಯುವ ಪುರುಷರೆ ಒಗ್ಗೂಡಿ!' ಎಂಬ 'ಕಮ್ಯೂನಿಸ್ಟ್ ಮ್ಯಾನಿಫೆಸ್ಟೋ'ದ ಪ್ರಸಿದ್ಧ ಅಂತಿಮ

ಪದಗಳಲ್ಲಿ ಇದನ್ನು ವ್ಯಕ್ತಪಡಿಸಲಾಗಿದೆ. ಆದರೆ, ಈ ರೀತಿಯ ಚಿಂತನೆಯ ಆಧುನಿಕ ಆವೃತ್ತಿಗಳು, ಮಾರ್ಕ್ಸಿಸ್ಟ್ ವಿಶ್ಲೇಷಣೆಗೆ ಬದಲಾಗಿ ಆರ್ಥಿಕ ಮತ್ತು ಸಾಮಾಜಿಕ ಹಕ್ಕುಗಳನ್ನು ಆಧರಿಸುವ ಸಾಧ್ಯತೆಯಿರುತ್ತದೆ. ಈ ರೂಪದ ವಿಶ್ವಬಂಧುತ್ವವಾದದ ಪ್ರಮುಖ ವಿಷಯವು ಜಾಗತಿಕ ಸಾಮಾಜಿಕ ನ್ಯಾಯದ ಅನ್ವೇಷಣೆಯಾಗಿದೆ. ಅಂದರೆ, ಸಮಸ್ತ ವಿಶ್ವದ ಉತ್ತರದಿಂದ ದಕ್ಷಿಣಕ್ಕೆ ಆಸ್ತಿಯ ಗಣನೀಯ ಪ್ರಮಾಣದ ಮರುಹಂಚಿಕೆ ಹಾಗೂ ಜಾಗತಿಕ ಆರ್ಥಿಕ ಆಡಳಿತ ವ್ಯವಸ್ಥೆಯ ಮೂಲಭೂತ ಪರಿಷ್ಕರಣೆಯು ಇದರರ್ಥವಾಗಿದೆ.

ಇಂತಹ ಆಲೋಚನೆಯು ಅನೇಕ ಸಲ 'ಸಾಂಸ್ಕೃತಿಕ' ವಿಶ್ವಬಂಧುತ್ವದೊಂದಿಗೆ ಸಂಬಂಧವನ್ನು ಹೊಂದಿರುತ್ತದೆ. ತೀವ್ರವಾದ ಜಾಗತಿಕ ಅಂತಃಸಂಪರ್ಕದ ಕಾರಣದಿಂದಾಗಿ ಜನರ ಮೌಲ್ಯಗಳು ಹಾಗೂ ಜೀವನ ಶೈಲಿಗಳು ಎಷ್ಟರಮಟ್ಟಿಗೆ ಮರುಸಂರಚನೆಯಾಗಿವೆ ಎಂಬುದನ್ನು ಇದು ಎತ್ತಿತೋರಿಸುತ್ತದೆ. ಈ ಅರ್ಥದಲ್ಲಿ ನೋಡುವುದಾದರೆ, ಜನರು ತಮ್ಮನ್ನು ಕೇವಲ ಒಂದು ನಿರ್ದಿಷ್ಟ ರಾಜ್ಯದ (ದೇಶದ) ನಾಗರಿಕರೆಂದು ಆಲೋಚಿಸುವ ಬದಲು 'ಜಾಗತಿಕ ನಾಗರಿಕರು' ಎಂಬಂತೆ ಆಲೋಚಿಸುತ್ತಿರುವುದರಿಂದಾಗಿ ರಾಜಕೀಯ ಸಮುದಾಯವು ಮರುವ್ಯಾಖ್ಯಾನಿಸಲ್ಪಡುವ ಪ್ರಕ್ರಿಯೆಯಲ್ಲಿದೆ. ಸಂಕರತೆ (hybridity) ಮತ್ತು ಸಾಂಸ್ಕೃತಿಕ ಮಿಶ್ರಣ ಅಥವಾ ಬೆರಕೆಗೊಳಿಸುವ ಪ್ರಕ್ರಿಯೆಗೆ (mongrelization) ಒತ್ತು ನೀಡುವ ರಾಷ್ಟ್ರವಾದದಿಂದ, ಬಹುಸಂಸ್ಕೃತಿವಾದ ಅಥವಾ ಬಹುಸಂಸ್ಕೃತಿವಾದದ ಒಂದು ಸ್ವರೂಪವಾಗಿ ಬದಲಾಗಿರುವುದು ಇದಕ್ಕೊಂದು ನಿದರ್ಶನವಾಗಿದೆ. (ವಾಲ್ಡ್ರನ್, 1995). ಆದರೆ, ನೈತಿಕ ಆಲೋಚನೆಯ ಮೇಲೆ ವಿಶ್ವಬಂಧುತ್ವವಾದದ ಪರಿಣಾಮವು ಹೆಚ್ಚಾಗುತ್ತಿದ್ದಾಗ್ಯೂ, ಸಾಂಸ್ಕೃತಿಕ ಮರುಸಂರಚನೆಗೆ ಸಂಬಂಧಿಸಿದಂತೆ ಇದರ ಪರಿಣಾಮವು ಪರಿಮಿತವಾಗಿತ್ತು. ರಾಷ್ಟ್ರವಾದವು ಒಳಗಿನ ಹಾಗೂ ಹೊರಗಿನ ಶಕ್ತಿಗಳಿಂದ ಒತ್ತಡದ ಹೆಚ್ಚಳಕ್ಕೆ ಒಳಗಾಗಿರಬಹುದು. ಆದರೆ ರಾಜಕೀಯ ಸಮುದಾಯಕ್ಕೆ ರಾಷ್ಟ್ರವು ಸರ್ವಶ್ರೇಷ್ಠ ಆಧಾರವಾಗಿ ಉಳಿದುಕೊಂಡಿದೆ. ಯೂರೋಪಿಯನ್ ಒಕ್ಕೂಟವೂ ಸೇರಿದಂತೆ ಯಾವುದೇ ಅಂತಾರಾಷ್ಟ್ರೀಯ ಸಂಘಟನೆಯು ಪ್ರೀತಿಯನ್ನು ಪೋಷಿಸುವ ರಾಷ್ಟ್ರದ ಸಾಮರ್ಥ್ಯದ ಹತ್ತಿರಕ್ಕೂ ಬರಲಾರದು.

**ವಿಶ್ವ ಸರ್ಕಾರ (World Government):** ಇಡೀ ಮಾನವಕುಲ ಒಂದು ಸಾಮಾನ್ಯ ರಾಜಕೀಯ ಅಧಿಕಾರದಡಿಯಲ್ಲಿ ಒಂದುಗೂಡಬೇಕೆನ್ನುವ ಕಲ್ಪನೆ. ಇದು ಅಂತಾರಾಷ್ಟ್ರೀಯ ಅಧಿಕಾರ ಹೊಂದಿರುವ ಏಕೀಕೃತ ವಿಶ್ವರಾಜ್ಯವಾಗಿರಬಹುದು ಅಥವಾ ರಾಷ್ಟ್ರರಾಜ್ಯಗಳೊಂದಿಗೆ ಸಾರ್ವಭೌಮತ್ವವನ್ನು ಹಂಚಿಕೊಳ್ಳುವ ಸಂಯುಕ್ತ ಸಂಸ್ಥೆಯಾಗಿರಬಹುದು.

**ಪರಿಕಲ್ಪನೆ**

**ವಸಾಹತೋತ್ತರವಾದ (Postcolonialism)**

ವಸಾಹತು ಆಳ್ವಿಕೆಯ ಸಾಂಸ್ಕೃತಿಕ ಹಾಗೂ ಮನೋವೈಜ್ಞಾನಿಕ ಆಯಾಮಗಳನ್ನು ಬಹಿರಂಗಪಡಿಸುವ ಹಾಗೂ ತಲೆಕೆಳಗು ಮಾಡುವ ಸಾಹಿತ್ಯಕ, ಸಾಂಸ್ಕೃತಿಕ ಹಾಗೂ ರಾಜಕೀಯ ಅಧ್ಯಯನಗಳಲ್ಲಿನ ಒಂದು ಪ್ರವೃತ್ತಿಯೆ ವಸಾಹತೋತ್ತರವಾದ. ಹೀಗಾಗಿ, ವಸಾಹತುಶಾಹಿಯ ರಾಜಕೀಯ

ಸಂರಚನೆಗಳನ್ನು ತೆಗೆದುಹಾಕಿದ ಬಹುಕಾಲದವರೆಗೂ 'ಆಂತರಿಕ' ನಿಗ್ರಹವು ಮುಂದುವರಿಯುತ್ತದೆಂಬುದನ್ನು ಇದು ಗುರುತಿಸುತ್ತದೆ. ಪಾಶ್ಚಿಮಾತ್ಯವಲ್ಲದ ಹಾಗೂ ಕೆಲವೊಮ್ಮೆ ಪಾಶ್ಚಿಮಾತ್ಯ ವಿರೋಧಿ ರಾಜಕೀಯ ವಿಚಾರಗಳು ಮತ್ತು ಸಂಪ್ರದಾಯಗಳ ನ್ಯಾಯ ಸಮ್ಮತತೆಯನ್ನು ಸ್ಥಾಪಿಸುವುದಕ್ಕೆ ವಸಾಹತೋತ್ತರವಾದವು ಹೆಚ್ಚಿನ ಒತ್ತು ನೀಡಿತು. ವಸಾಹತೋತ್ತರವಾದವು ವೈವಿಧ್ಯಮಯ ರೂಪಗಳನ್ನು ಪಡೆದುಕೊಂಡಿದೆ. ಭಾರತೀಯ ರಾಷ್ಟ್ರವಾದವನ್ನು ಹಿಂದೂ ಧರ್ಮದಲ್ಲಿ ಅಂತರ್ಗತವಾಗಿರುವ ವಿಚಾರಗಳೊಂದಿಗೆ ಸಮ್ಮಿಳನಗೊಳಿಸುವ ಗಾಂಧಿಯವರ ಪ್ರಯತ್ನದಿಂದ ಹಿಡಿದು, ಧಾರ್ಮಿಕ ಮೂಲಭೂತವಾದದ ಸ್ವರೂಪಗಳವರೆಗೆ ಇವು ಹರಡಿಕೊಂಡಿವೆ.

**ಪಾಶ್ಚಿಮಾತ್ಯವಲ್ಲದ ಸೈದ್ಧಾಂತಿಕ ಪ್ರವೃತ್ತಿಗಳು**

ರಾಜಕೀಯ ಸಿದ್ಧಾಂತವು ವಿಶಿಷ್ಟವಾದ ಪಾಶ್ಚಿಮಾತ್ಯ ರಚನೆಯಾಗಿತ್ತು. ಪ್ರಮುಖ ಸೈದ್ಧಾಂತಿಕ ಸಂಪ್ರದಾಯಗಳು; ಹೊರಹೊಮ್ಮುತ್ತಿರುವ ಕೈಗಾರಿಕಾ ಸಮಾಜವನ್ನು ರೂಪಿಸುವ ವಿಭಿನ್ನ ಪ್ರಯತ್ನಗಳಾಗಿ ಅಭಿವೃದ್ದಿಗೊಂಡವು. ಯುರೋಪ್ ಮತ್ತು ಉತ್ತರ ಅಮೇರಿಕಾದಲ್ಲಿನ ಐತಿಹಾಸಿಕ ಅನುಭವದಿಂದ ಇವುಗಳ ವಿಚಾರಗಳು ಹಾಗೂ ಸಿದ್ಧಾಂತಗಳು ಅಳಿಸಿಹೋಗದಂತೆ ರೂಪಿಸಲ್ಪಟ್ಟವು. ಅಲ್ಲದೆ, ಮುಖ್ಯವಾಗಿ ಉದಾರವಾದ ಹಾಗೂ ಸಮಾಜವಾದಕ್ಕೆ ಸಂಬಂಧಿಸಿದಂತೆ ತರ್ಕ ಮತ್ತು ಪ್ರಗತಿಯ ವಿಚಾರಗಳಿಗೆ ಒತ್ತು ನೀಡಿದ ಜ್ಞಾನೋದಯ (Enlightenment) ಸಂಪ್ರದಾಯದಿಂದ ರಾಜಕೀಯ ಸಿದ್ಧಾಂತವು ಪ್ರಭಾವಿಸಲ್ಪಟ್ಟಿತು. ಪಾಶ್ಚಿಮಾತ್ಯ ದೇಶಗಳಲ್ಲಿ ಹೆಚ್ಚು ವಿಶಾಲವಾದ ಬೌದ್ಧಿಕ ಹಾಗೂ ಸಾಂಸ್ಕೃತಿಕ ಅಭಿವೃದ್ಧಿಯನ್ನು ರೂಪಿಸಲು ಇದು ಸಹಾಯ ಮಾಡಿತು. ರಾಜಕೀಯ ಸಿದ್ಧಾಂತವು ವ್ಯಾಪಕವಾದಂತೆ, ಆಧುನಿಕತೆಯ ಪಾಶ್ಚಿಮಾತ್ಯ ಮಾದರಿಯೊಂದನ್ನು ಅಥವಾ ಹೆಚ್ಚು ನಿಖರವಾಗಿ ಹೇಳುವುದಾದರೆ, ಪ್ರತಿಸ್ಪರ್ಧಿ ಪಾಶ್ಚಿಮಾತ್ಯ ಆಧುನಿಕತೆಯ ಮಾದರಿಗಳನ್ನು ವಿಶ್ವದ ಇತರೆಡೆಗೂ ಕಳುಹಿಸಿತು. ಹೀಗಾಗಿ 'ಅರಬ್ ರಾಷ್ಟ್ರವಾದ', 'ಆಫ್ರಿಕನ್ ಸಮಾಜವಾದ' ಅಥವಾ 'ಚೀನಾದ ಕಮ್ಯೂನಿಸಮ್' ಮುಂತಾದ ಸೈದ್ಧಾಂತಿಕ ಪ್ರವೃತ್ತಿಗಳು ಪಾಶ್ಚಿಮಾತ್ಯ ವಿಚಾರಗಳನ್ನು ಪಾಶ್ಚಿಮಾತ್ಯವಲ್ಲದ ಸನ್ನಿವೇಶಗಳಿಗೆ ಅನ್ವಯಿಸುವ ಪ್ರಯತ್ನಗಳಾಗಿದ್ದವು. ಆದರೂ ಕೆಲವೊಮ್ಮೆ ಪಾಶ್ಚಿಮಾತ್ಯ ತತ್ವಗಳು ದೇಶೀಯ ಮೌಲ್ಯಗಳು ಮತ್ತು ವಿಚಾರಗಳೊಂದಿಗೆ ಸಿಕ್ಕಿಹಾಕಿಕೊಳ್ಳುತ್ತಿದ್ದವು. ತಾಂಜ಼ಾನಿಯಾದ ರಾಷ್ಟ್ರಪತಿ ಜೂಲಿಯಸ್ ನೈರೆರೆ (1964–85), ಆಫ್ರಿಕಾದಲ್ಲಿರುವ ನಮಗೆ, ಪ್ರಜಾಪ್ರಭುತ್ವವನ್ನು "ಕಲಿಸಿರುವುದಕ್ಕಿಂತಲೂ" ಹೆಚ್ಚಾಗಿ ಸಮಾಜವಾದಕ್ಕೆ "ಪರಿವರ್ತನೆ"ಯಾಗಬೇಕಾದ ಯಾವ ನೈಜ ಅಗತ್ಯವೂ ಇಲ್ಲ' ಎಂದು ಅಭಿಪ್ರಾಯಪಡುತ್ತಾರೆ. ಹೀಗಾಗಿ, ಇವರು ತಮ್ಮ ಅಭಿಪ್ರಾಯಗಳನ್ನು 'ಬುಡಕಟ್ಟು ಸಮಾಜವಾದ'ವೆಂದು ವರ್ಣಿಸುತ್ತಾರೆ.

**ಪರಿಕಲ್ಪನೆ**

**ಮೂಲಭೂತವಾದ (Fundamentalism)**

ಮೂಲಭೂತವಾದವು ಚಿಂತನೆಯ ಒಂದು ಶೈಲಿಯಾಗಿದೆ. ಇದರಲ್ಲಿ ಕೆಲವು ತತ್ವಗಳನ್ನು ಪ್ರಶ್ನಾತೀತ ಮತ್ತು ಎಲ್ಲಕ್ಕಿಂತಲೂ ಮುಖ್ಯವಾದ ಅವಶ್ಯಕ 'ಸತ್ಯ'ಗಳನ್ನು ಹೊಂದಿರುವ ತತ್ವಗಳಾಗಿ ಗುರುತಿಸಲಾಗಿದೆ. ಸ್ವತಂತ್ರ ಮೂಲಭೂತವಾದಗಳಲ್ಲಿ ಅವುಗಳ ಬೆಂಬಲಿಗರು ಸೈದ್ಧಾಂತಿಕ

ನಿಶ್ಚಿತತೆಯಿಂದ ವ್ಯುತ್ಪನ್ನಗೊಂಡ ಶ್ರದ್ಧೆ ಅಥವಾ ಅಮಿತ ಉತ್ಸಾಹವನ್ನು ಪ್ರಕಟಿಸುವ ಪ್ರವೃತ್ತಿಯನ್ನು ಹೊಂದಿದ್ದಾರೆಂಬುದನ್ನು ಹೊರತುಪಡಿಸಿದರೆ ಇವುಗಳ ನಡುವಿನ ಸಾಮ್ಯತೆ ಅತ್ಯಂತ ಕಡಿಮೆ ಅಥವಾ ಯಾವುದೇ ಸಾಮ್ಯತೆ ಇಲ್ಲ. ಮೂಲಭೂತವಾದವು ಧರ್ಮ ಮತ್ತು ಧಾರ್ಮಿಕ ಗ್ರಂಥಗಳ ಶಾಬ್ದಿಕ ಸತ್ಯದೊಂದಿಗೆ ಸಂಬಂಧ ಹೊಂದಿದೆಯಾದರೂ ಇದನ್ನು ರಾಜಕೀಯ ಪಂಥಗಳಲ್ಲಿಯೂ ಕಾಣಬಹುದು. ಈ ಶಬ್ಧವು ವಿವಾದಾಸ್ಪದವಾಗಿದೆ. ಏಕೆಂದರೆ, ಇದು ದುರಾಗ್ರಹ, ಮತಾಂಧತೆ ಹಾಗೂ ನಿರಂಕುಶಾಧಿಕಾರವಾದ ಎಂಬ ಅರ್ಥ ನೀಡುವ ನಿಕೃಷ್ಟ ಪದವಾಗಿ ಆಗಿಂದಾಗ್ಗೆ ಉಪಯೋಗಿಸಲ್ಪಡುತ್ತದೆ.

**ವಸಾಹತೋತ್ತರವಾದ (Postcolonialism)**

ವಸಾಹತೋತ್ತರವಾದದೊಂದಿಗೆ ಸಂಬಂಧ ಹೊಂದಿದ್ದ ಪ್ರವೃತ್ತಿಗಳಿಂದಾಗಿ ರಾಜಕೀಯ ಸಿದ್ದಾಂತಕ್ಕೆ ಪಾಶ್ಚಿಮಾತ್ಯವಲ್ಲದ ಗುರುತನ್ನು ನೀಡುವ ಹೆಚ್ಚು ವ್ಯಕ್ತ ಪ್ರಯತ್ನಗಳು ಹೊರಹೊಮ್ಮಿದವು. ಪಾಶ್ಚಿಮಾತ್ಯವಲ್ಲದ ವಿಶ್ವಕ್ಕೆ ಒಂದು ವಿಭಿನ್ನವಾದ, ಮುಖ್ಯವಾಗಿ ಉದಾರವಾದ ಹಾಗೂ ಸಮಾಜವಾದಗಳ ಸಾರ್ವತ್ರಿಕ ಆಡಂಬರದಿಂದ ಪ್ರತ್ಯೇಕವಾದ ರಾಜಕೀಯ ಧ್ವನಿಯನ್ನು ನೀಡುವುದು ವಸಾಹತೋತ್ತರವಾದದ ಪ್ರಮುಖ ಲಕ್ಷಣವಾಗಿದೆ. ಇದರ ಪ್ರಾರಂಭಿಕ ಹಾಗೂ ಪ್ರಭಾವಿ ಪ್ರಯತ್ನವನ್ನು 1955ರ ಬಾಂಡುಂಗ್ ಸಮ್ಮೇಳನದಲ್ಲಿ ಕೈಗೊಳ್ಳಲಾಯಿತು. ಈ ಸಮ್ಮೇಳನದಲ್ಲಿ ಈಜಿಪ್ಟ್, ಘಾನಾ, ಭಾರತ ಹಾಗೂ ಇಂಡೋನೇಷ್ಯಾ ದೇಶಗಳೂ ಸೇರಿದಂತೆ ಆಫ್ರಿಕಾ ಮತ್ತು ಏಷ್ಯಾದ 29 ಬಹುತೇಕ ಹೊಸದಾಗಿ ಸ್ವಾತಂತ್ರ್ಯ ಪಡೆದ ದೇಶಗಳು ಭಾಗವಹಿಸಿ, ನಂತರದ ದಿನಗಳಲ್ಲಿ 'ಅಲಿಪ್ತ ನೀತಿ ಚಳುವಳಿ' (Non-Aligned Movement) ಎಂದು ಹೆಸರಾದ ಚಳುವಳಿಗೆ ನಾಂದಿ ಹಾಡಿದವು. ತಮ್ಮನ್ನು ಒಂದು ಸ್ವತಂತ್ರ ಶಕ್ತಿ ಗುಂಪಾಗಿ ಗುರುತಿಸಿಕೊಂಡ ಈ ದೇಶಗಳು; ಜಾಗತಿಕ ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ಆದ್ಯತೆಗಳಿಗೆ 'ಮೂರನೆ ವಿಶ್ವ'ದ (Third Word) ದೃಷ್ಟಿಕೋನವನ್ನು ನೀಡಿದವು. ಈ 'ಮೂರನೆ ವಿಶ್ವವಾದವು ಪಾಶ್ಚಿಮಾತ್ಯ ಹಾಗೂ ಸೋವಿಯೆಟ್ ಮಾದರಿಯ ಅಭಿವೃದ್ಧಿಗೆ ವಿರುದ್ಧವಾದ ಗುಣವೈಶಿಷ್ಟ್ಯದಿಂದ (contradistinction) ತನ್ನನ್ನು ವ್ಯಾಖ್ಯಾನಿಸಿಕೊಂಡಿತು.

ವಸಾಹತೋತ್ತರ ಸೈದ್ಧಾಂತಿಕ ಪ್ರವೃತ್ತಿಗಳು ತುಂಬಾ ವಿಭಿನ್ನವಾಗಿವೆ. ಇವುಗಳು ಗಾಂಧಿಯವರ ರಾಜಕೀಯ ಸಿದ್ಧಾಂತದಲ್ಲಿ ವ್ಯಕ್ತವಾಗಿವೆ. ಈ ಸಿದ್ಧಾಂತವು ಹಿಂದೂ ಸಂಸ್ಕೃತಿಯಲ್ಲಿ ಬೇರೂರಿರುವ ಅಹಿಂಸೆ ಹಾಗೂ ಸ್ವಯಂ–ತ್ಯಾಗದ ಧಾರ್ಮಿಕ ನೀತಿಯ ಮೇಲೆ ಆಧಾರಿತವಾಗಿದೆ. ಈ ದೃಷ್ಟಿಯಿಂದ ನೋಡಿದರೆ, 'ಕತ್ತಿಯ ಸಿದ್ಧಾಂತ'ದ ಹಿಂಸೆಯು ಭಾರತದ ಮೇಲೆ ಪಶ್ಚಿಮದ ಹೇರಿಕೆಯಾಗಿದೆ. ಇದಕ್ಕೆ ವಿರುದ್ಧವಾಗಿ ಮಾರ್ಟಿನಿಕ್‌ನಲ್ಲಿ ಜನಿಸಿದ ಫ್ರೆಂಚ್ ಕ್ರಾಂತಿಕಾರಿ ಸಿದ್ಧಾಂತಿ ಫ್ರಾಂಜ್ ಫ್ಯಾನನ್ (1926–61), 'ಶ್ವೇತವರ್ಣೀಯರು' ಮತ್ತು 'ಕಪ್ಪುವರ್ಣೀಯರ' ನಡುವಿನ ಅಸಮರೂಪದ ಸಂಬಂಧದ ಮೂಲಕ ವಸಾಹತುಶಾಹಿ ಆಳ್ವಿಕೆಯು ಮಾನಸಿಕ–ರಾಜಕೀಯ ಮಟ್ಟದಲ್ಲಿ ಕಾರ್ಯಾಚರಿಸುವ ಪ್ರಮಾಣವನ್ನು ವಿವರಿಸಿದ್ದಾರೆ. ಇದನ್ನು 'ಸಂಪೂರ್ಣ ಹಿಂಸೆ'ಯ ಶುದ್ಧೀಕರಿಸುವ ಶಕ್ತಿಯ ಮೂಲಕ ಮಾತ್ರ ನಿರ್ನಾಮ ಮಾಡಬಹುದೆಂಬುದು ಫ್ಯಾನನ್‌ನ ವಾದವಾಗಿದೆ (ಫ್ಯಾನನ್, 1968).

**ಧಾರ್ಮಿಕ ಮೂಲಭೂತವಾದ (Religious Fundamentalism)**

1970ರ ದಶಕದ ಕೊನೆಯ ಭಾಗದಿಂದೀಚೆಗೆ ಧಾರ್ಮಿಕ ಮೂಲಭೂತವಾದ, ಅದರಲ್ಲೂ ಅತ್ಯಂತ ಮುಖ್ಯವಾಗಿ ಇಸ್ಲಾಮಿಕ್ ಮೂಲಭೂತವಾದ ಅಥವಾ ರಾಜಕೀಯ ಇಸ್ಲಾಮ್‌ನ ಮೂಲಕ ವಸಾಹತೋತ್ತರವಾದವನ್ನು ಅತ್ಯಂತ ಒತ್ತಾಯಪೂರ್ವಕವಾಗಿ ವ್ಯಕ್ತಪಡಿಸಲಾಗುತ್ತಿದೆ. ಇಸ್ಲಾಮಿಕ್ ನಂಬಿಕೆಗಳು ರೂಪಿಸುವ ತೀಕ್ಷ್ಣ, ಉಗ್ರಗಾಮಿ ವಿಚಾರವು ಸಾಮಾಜಿಕ ಜೀವನ ಮತ್ತು ರಾಜಕೀಯದ ತತ್ವಗಳನ್ನು ಅತಿಕ್ರಮಿಸುತ್ತದೆ. ಈ ವಿಚಾರವು ಮೊದಲಿಗೆ ಸಯ್ಯಿದ್ ಕುತ್ಬ್‌ರಂತಹ (1906–66) ಚಿಂತಕರ ಬರವಣಿಗೆಗಳಲ್ಲಿ ಹಾಗೂ 'ಮುಸ್ಲಿಮ್ ಸೋದರತ್ವ'ದ (Muslim Brother Hood) ಚಟುವಟಿಕೆಗಳ ಮೂಲಕ ಹೊರಹೊಮ್ಮಿದವು. ಶರಿಯಾದ ಕಾನೂನಿನ (Shari'a Law) ತತ್ವಗಳ ಆಧಾರದ ಮೇಲೆ ಇಸ್ಲಾಮಿಕ್ ರಾಜ್ಯವನ್ನು ಸ್ಥಾಪಿಸುವುದು ಇವರ ಗುರಿಯಾಗಿತ್ತು. 1979ರ ಇರಾನ್‌ನ ಕ್ರಾಂತಿಯು ರಾಜಕೀಯ ಇಸ್ಲಾಮ್‌ನ್ನು ಪ್ರಾಮುಖ್ಯತೆಗೆ ತಂದಿತು. ಈ ಕ್ರಾಂತಿಯು ಅಯತೊಲ್ಲ ಖೋಮೇನಿಯ ಅಧಿಪತ್ಯದಲ್ಲಿ ವಿಶ್ವದ ಮೊದಲ ಇಸ್ಲಾಮಿಕ್ ರಾಜ್ಯದ ಸ್ಥಾಪನೆಗೆ ಕಾರಣವಾಯಿತು. ಆನಂತರ ಇದು ಮಧ್ಯ ಪ್ರಾಚ್ಯದಾದ್ಯಂತ, ಉತ್ತರ ಆಫ್ರಿಕಾ ಹಾಗೂ ಏಷ್ಯಾದ ಭಾಗಗಳಿಗೆ ವ್ಯಾಪಿಸಿತು. ಇರಾನ್‌ನ ಶಿಯಾ ಮೂಲಭೂತವಾದವು ಅತ್ಯಂತ ಉಗ್ರವಾದ ಬದ್ಧತೆ ಹಾಗೂ ಶ್ರದ್ಧೆಯನ್ನು ಹುಟ್ಟುಹಾಕಿತಾದರೂ, ಇಸ್ಲಾಮ್‌ವಾದವು ಸಾಮಾನ್ಯವಾಗಿ ಪಾಶ್ಚಿಮಾತ್ಯವಾದವನ್ನು ವಿರೋಧಿಸುವ ಒಂದು ವಾಹಕವಾಗಿದೆ. ಇದು ಪಾಶ್ಚಿಮಾತ್ಯ ಶಕ್ತಿಗಳ ನವ–ವಸಾಹತುಶಾಹಿ ನೀತಿಗಳಿಗೆ ವಿರೋಧ ಹಾಗೂ ಪರವಾನಗಿ ಮತ್ತು ಭೌತಿಕ ಮೌಲ್ಯಗಳ 'ಹೇರುವಿಕೆ'ಯ ಕುರಿತಾದ ಆತಂಕಗಳೆರಡನ್ನೂ ವ್ಯಕ್ತಪಡಿಸುತ್ತದೆ. ಆಫ್ಘಾನಿಸ್ತಾನದ ತಾಲಿಬಾನ್ ಆಳ್ವಿಕೆ (1997–2001) ಹಾಗೂ ಅಲ್‌ಖೈದಾದಂತಹ ಜಿಹಾದಿ (Jihadist) ಗುಂಪುಗಳ ಬೆಳವಣಿಗೆಯಲ್ಲಿ ಇದು ಸ್ಪಷ್ಟವಾಗಿ ಕಂಡುಬರುತ್ತದೆ. ಇವರಿಗೆ ಧಾರ್ಮಿಕ ಅನ್ವೇಷಣೆಯು ಉಗ್ರಗಾಮಿ ರಾಜಕೀಯ, ಸಶಸ್ತ್ರ ಹೋರಾಟ ಹಾಗೂ ಪ್ರಾಯಶಃ ಹುತಾತ್ಮತೆಗೆ ಸಮಾನಾರ್ಥಕವಾಗಿದೆ.

---

**ಅಲಿಪ್ತನೀತಿ ಚಳುವಳಿ(Non-Alligned Movement)**: 1961ರಲ್ಲಿ ಬೆಲ್‌ಗ್ರೇಡ್‌ನಲ್ಲಿ ಸ್ಥಾಪಿಸಲಾದ ದೇಶಗಳ ಒಂದು ಗುಂಪು. ಇದರ ಉದ್ದೇಶ ಪಶ್ಚಿಮದ ಬಂಡವಾಳಶಾಹಿ ಅಥವಾ ಪೂರ್ವದ ಕಮ್ಯೂನಿಸಮ್‌ನೊಂದಿಗೆ ಔಪಚಾರಿಕ, ರಾಜಕೀಯ ಹಾಗೂ ಆರ್ಥಿಕ ಅಂಗವಾಗಿರುವಿಕೆಯನ್ನು ತಪ್ಪಿಸುವುದಾಗಿತ್ತು.

---

**ಜಿಹಾದ್ (Jihad)**: ಅರೇಬಿಕ್ ಪದ. ಸಾಂಪ್ರದಾಯಿಕವಾಗಿ ಇದನ್ನು 'ಪವಿತ್ರ ಯುದ್ಧ'ವೆಂದು ಭಾಷಾಂತರಿಸಲಾಗುತ್ತದೆ. ಆದರೆ, 'ಪವಿತ್ರ ಹೋರಾಟ' ಅಥವಾ 'ಪ್ರಯತ್ನ'ವೆಂಬುದು ಹೆಚ್ಚು ನಿಖರವಾದ ಭಾಷಾಂತರವಾಗಿದೆ; ಇಸ್ಲಾಮಿಕ್ ಗುರಿಗಳೆಡೆಗಿನ ತೀವ್ರ ಸ್ವರೂಪದ ಹಾಗೂ ಎಲ್ಲವನ್ನೂ ಒಳಗೊಂಡ ಶ್ರದ್ಧೆಯನ್ನು ಇದು ವ್ಯಕ್ತಪಡಿಸುತ್ತದೆ.

---

**ಮೋಹನ್‌ದಾಸ್ ಕರಮ್‌ಚಂದ್‌ಗಾಂಧಿ (1869–1948)**

ಭಾರತದ ಆಧ್ಯಾತ್ಮಿಕ ಹಾಗು ರಾಜಕೀಯ ನಾಯಕರು. ('ಮಹಾತ್ಮ' ಎಂದು ಕರೆಯಲ್ಪಡುತ್ತಾರೆ). ಗಾಂಧೀಜಿ, ಯುನೈಟೆಡ್ ಕಿಂಗ್‌ಡಮ್‌ನಲ್ಲಿ ವಕೀಲರಾಗಿ ತರಬೇತಿ ಪಡೆದು, ದಕ್ಷಿಣ ಆಫ್ರಿಕಾದಲ್ಲಿ ಉದ್ಯೋಗವನ್ನು ಕೈಗೊಂಡರು. ಇಲ್ಲಿ ಅವರು ತಾರತಮ್ಯದ ವಿರುದ್ಧ ಪ್ರತಿಭಟನೆಗಳನ್ನು ಸಂಘಟಿಸಿದರು. 1915ರಲ್ಲಿ ಭಾರತಕ್ಕೆ ಹಿಂತಿರುಗಿದ ನಂತರ ರಾಷ್ಟ್ರವಾದಿ ಚಳುವಳಿಯ ನಾಯಕರಾದರು. ಸ್ವಾತಂತ್ರ್ಯಕ್ಕಾಗಿ ದಣಿವರಿಯದಂತೆ ಹೋರಾಡಿ 1947ರಲ್ಲಿ ಸ್ವಾತಂತ್ರ್ಯವನ್ನು ಗಳಿಸಿದರು. ಗಾಂಧೀಜಿಯವರ ಅಹಿಂಸಾತ್ಮಕ ವಿರೋಧ, ಸತ್ಯಾಗ್ರಹದ ನೀತಿ ಹಾಗೂ ಆತ್ಮನಿಗ್ರಹದ ಜೀವನಶೈಲಿಯು ಭಾರತದ ಸ್ವಾತಂತ್ರ್ಯ ಚಳುವಳಿಗೆ ಅಪಾರವಾದ ನೈತಿಕ ಬಲವನ್ನು ನೀಡಿತು. ಹಿಂದೂ ಧರ್ಮದಿಂದ ಪ್ರಭಾವಿತವಾದ ಗಾಂಧೀಜಿಯವರ ರಾಜಕೀಯ ಸಿದ್ಧಾಂತವು, ವಿಶ್ವವು ಸತ್ಯದ ಪ್ರಾಮುಖ್ಯತೆಯಿಂದ ನಿಯಂತ್ರಿಸಲ್ಪಡುತ್ತದೆ ಹಾಗೂ ಮಾನವ ಕುಲವು 'ಅಂತಿಮವಾಗಿ ಒಂದು' ಎಂಬ ಕಲ್ಪನೆಯ ಆಧಾರಿತವಾಗಿದೆ. 1948ರಲ್ಲಿ ಮತಾಂಧ ಹಿಂದೂವಿನಿಂದ ಗಾಂಧೀಜಿಯವರ ಹತ್ಯೆಯಾಯಿತು. ಗಾಂಧೀಜಿಯವರು ಸ್ವಾತಂತ್ರ್ಯಾನಂತರದ ಭೀಕರ ಸ್ವರೂಪದ ಹಿಂದೂ–ಮುಸ್ಲಿಮ್ ಹಿಂಸೆಗೆ ಬಲಿಯಾದರು.

**ಏಷ್ಯಾದ ಮೌಲ್ಯಗಳು (Asian Values)**

ಇತರೆ ಪಾಶ್ಚಿಮಾತ್ಯವಲ್ಲದ ಸೈದ್ಧಾಂತಿಕ ಪ್ರವೃತ್ತಿಗಳು ಮೂಲಭೂತವಾದಿ ಧರ್ಮದೊಡನೆ ಯಾವುದೇ ಸಂಬಂಧವನ್ನು ಹೊಂದಿರಲಿಲ್ಲ. ಉದಾಹರಣೆಗೆ 1980 ಮತ್ತು 1990ರ ದಶಕದಲ್ಲಿ ಒಂದು ಆರ್ಥಿಕ ಮಹಾಶಕ್ತಿಯಾಗಿ ಜಪಾನ್‌ನ ಉತ್ಥಾನ ಹಾಗೂ ಹಾಂಕಾಂಗ್, ದಕ್ಷಿಣ ಕೊರಿಯಾ, ಥೈಲ್ಯಾಂಡ್ ಮತ್ತು ಸಿಂಗಪುರ್‌ಗಳ 'ವ್ಯಾಘ್ರ' ಆರ್ಥಿಕತೆಗಳ (Tiger Economies) ಯಶಸ್ಸಿನಿಂದ ಉತ್ತೇಜಿತಗೊಂಡು, ಏಷ್ಯಾದ ಮೌಲ್ಯಗಳು (Asian Values) ಎಂದು ಕರೆಯಲ್ಪಟ್ಟ ಕಲ್ಪನೆಯು ಪ್ರವರ್ಧಮಾನಕ್ಕೆ ಬಂದಿತು. ಸಾರ್ವತ್ರಿಕ ಮಾನವ ಹಕ್ಕುಗಳ ಕಲ್ಪನೆಯನ್ನು ತಿರಸ್ಕರಿಸದೆ, ಪಾಶ್ಚಿಮಾತ್ಯ ಹಾಗೂ ಏಷ್ಯಾದ ಮೌಲ್ಯ ವ್ಯವಸ್ಥೆಗಳ ನಡುವೆ ವ್ಯತ್ಯಾಸಗಳೆಂದು ಕರೆಯಬಹುದಾದ ಅಂಶಗಳೆಡೆಗೆ ಏಷ್ಯಾದ ಮೌಲ್ಯಗಳು ಗಮನ ಸೆಳೆದವು. ಸಾಂಸ್ಕೃತಿಕವಾಗಿ ಪಕ್ಷಪಾತಿಯಾಗಿದ್ದ ಪಾಶ್ಚಿಮಾತ್ಯ ಕಲ್ಪನೆಗಳ ಆಧಾರದ ಮೇಲೆ ಮಾನವ ಹಕ್ಕುಗಳನ್ನು ಎಷ್ಟರಮಟ್ಟಿಗೆ ಸಾಂಪ್ರದಾಯಿಕವಾಗಿ ರಚಿಸಲಾಗಿತ್ತೆಂಬುದನ್ನು ಏಷ್ಯಾದ ಮೌಲ್ಯಗಳು ಎತ್ತಿತೋರಿಸಿದವು. ನಿಷ್ಠೆ, ಕರ್ತವ್ಯ ಹಾಗೂ ಅಧಿಕಾರದೆಡೆಗೆ ಗೌರವಗಳನ್ನೊಳಗೊಂಡ ಸಾಮಾಜಿಕ ಸಾಮರಸ್ಯ ಮತ್ತು ಸಹಕಾರದ ದೃಷ್ಟಿಕೋನದ ಮೂಲಕ ಮಾನವ ಹಕ್ಕುಗಳಿಗೆ ಸಂಬಂಧಿಸಿದ ದೋಷಗಳನ್ನು ಸರಿಪಡಿಸುವುದಾಗಿ ಏಷ್ಯಾದ ಮೌಲ್ಯಗಳು ಪ್ರತಿಪಾದಿಸಿದವು. 1997–98ರ ಏಷ್ಯಾದ ಹಣಕಾಸು ಬಿಕ್ಕಟ್ಟಿನ ನಂತರ ಏಷ್ಯಾದ ಮೌಲ್ಯಗಳ ಪ್ರಭಾವ ಸಾಕಷ್ಟು ಕಡಿಮೆಯಾಯಿತಾದರೂ, ಚೀನಾದ ಉನ್ನತಿಯಿಂದ ಉತ್ತೇಜಿತವಾಗಿ 'ಕನ್‌ಫ್ಯೂಷಿಯನಿಸಮ್'ನೊಡನೆ ಮತ್ತೆ ಇವು ಹೊರಹೊಮ್ಮಿವೆ.

**ದ್ವೈತವಾದದಿಂದಾಚೆಗೆ (Beyond Dualism)**

ಕೆಲವು ಪಾಶ್ಚಿಮಾತ್ಯವಲ್ಲದ (Non-Western) ತಾತ್ವಿಕ ಸಂಪ್ರದಾಯಗಳಲ್ಲಿ ಕಂಡುಬರುವ ದ್ವೈತವಾದವಲ್ಲದ (non-dualistic) ಸಿದ್ಧಾಂತಕ್ಕೆ ಪರ್ಯಾಯವಾದ ಪಾಶ್ಚಿಮಾತ್ಯವಲ್ಲದ ಸೈದ್ಧಾಂತಿಕ ಪ್ರವೃತ್ತಿಯೊಂದು ಸಾಂಪ್ರದಾಯಿಕ ಪಾಶ್ಚಿಮಾತ್ಯ ತತ್ವದ ದೃಢವಾದ ದ್ವೈತವಾದದ ರೂಪದಲ್ಲಿ ಕಂಡುಬರುತ್ತದೆ. ಪ್ರತಿಯೊಂದೂ ಕಡಿಮೆಯಿಲ್ಲದ ಒಂದು ವಿಭಿನ್ನವಾದ ಸಾರವನ್ನು ಹೊಂದಿದೆ. ಇದನ್ನು 'ಪ್ರತಿಯೊಂದೂ ಇರಬೇಕು ಅಥವಾ ಇಲ್ಲದಿರಬೇಕು' ಎಂಬ ಕಲ್ಪನೆಯ ಮೂಲಕ ವ್ಯಕ್ತಪಡಿಸಬಹುದೆಂದು ಅರಿಸ್ಟಾಟಲ್ ಆಗ್ರಹಿಸುತ್ತಾರೆ. ಇದನ್ನು ಬೌದ್ಧಧರ್ಮದ ತತ್ವಜ್ಞಾನಿ ನಾಗಾರ್ಜುನನ (ಸುಮಾರು ಕ್ರಿ.ಶ. 150–250) 'ಶೂನ್ಯತೆ'ಯ (Sunyata) ತತ್ವದೊಂದಿಗೆ ಹೋಲಿಸಬಹುದು. ಇದರ ಪ್ರಕಾರ ಎಲ್ಲಾ ಪರಿಕಲ್ಪನೆಗಳು ಹಾಗೂ ವಸ್ತುಗಳಿಗೆ 'ಸ್ವಂತ–ಅಸ್ತಿತ್ವ'ವಿಲ್ಲ. ಅಂದರೆ ಅವುಗಳ ನಡುವೆ ಸ್ವಾಭಾವಿಕ ಪರಸ್ಪರ ಅವಲಂಬನೆಯಿದೆ. ಇಂತಹ ಚಿಂತನೆಗಳು ಬೌದ್ಧಧರ್ಮ ಅಥವ ಟಾವೋಯಿಸಮ್‌ಗಳಿಂದ (Taoism) ಪ್ರಭಾವಿತವಾಗಿದ್ದು, ನಿಶಾಡ ಕಿಟಾರೋ (1870–1945) ಅವರಂತಹ ಕ್ಯೋಟೊ ಪಂಥದ ತತ್ವಜ್ಞಾನಿಗಳ ಚಿಂತನೆಗಳಲ್ಲಿ ಸಹ ಇವು ವ್ಯಕ್ತವಾಗಿವೆ. ಇವರ ಪ್ರಕಾರ, ವಿಶ್ವವು 'ವೈರುಧ್ಯಗಳ ಸಂಪೂರ್ಣ ಏಕತೆ'ಯ (absolute unity of opposites) ಲಕ್ಷಣವನ್ನು ಹೊಂದಿದೆ. ಪಶ್ಚಿಮದ 'ಎರಡರಲ್ಲೊಂದು' ಚಿಂತನೆಗೆ ಬದಲಾಗಿ ಐಕ್ಯತೆ ಹಾಗೂ ಏಕತೆಗೆ ಒತ್ತು ನೀಡುವ ವಿಶ್ವದೃಷ್ಟಿಕೋನವನ್ನು ಸ್ವೀಕರಿಸಿದಲ್ಲಿ ಮನಸ್ಸು/ದೇಹ, ಒಳಿತು/ಕೆಡಕು, ವಾಸ್ತವಿಕ/ಮಾನಸಿಕ, ಮನುಷ್ಯ/ನಿಸರ್ಗ ಇತ್ಯಾದಿ ಇತರೆ ಎಲ್ಲಾ ಸ್ವರೂಪಗಳ ದ್ವೈತವಾದವು ಕುಸಿಯಲು ಪ್ರಾರಂಭವಾಗುತ್ತದೆ. ದ್ವೈತವಾದವಲ್ಲದ ಚಿಂತನೆಯು ಹಸಿರು ರಾಜಕಾರಣಕ್ಕೆ ಸಂಬಂಧಿಸಿದಂತೆ ಅತ್ಯಂತ ಹೆಚ್ಚಿನ ಸೈದ್ಧಾಂತಿಕ ಪರಿಣಾಮವನ್ನು ಹೊಂದಿದ್ದು, ಆಳವಾದ ಪರಿಸರ ವಿಜ್ಞಾನದ ಅನೇಕ ರೂಪಗಳಿಗೆ ತಾತ್ವಿಕ ಅಡಿಪಾಯವನ್ನು ಒದಗಿಸುತ್ತದೆ.

---

**ಏಷ್ಯಾದ ಮೌಲ್ಯಗಳು (Asian Values):** ಏಷ್ಯಾದ ಸಮಾಜಗಳ ಇತಿಹಾಸ, ಸಂಸ್ಕೃತಿ ಹಾಗೂ ಧಾರ್ಮಿಕ ಹಿನ್ನೆಲೆಗಳನ್ನು ಬಿಂಬಿಸುತ್ತವೆಂದು ಊಹಿಸಲಾದ ಮೌಲ್ಯಗಳು. ಸಾಮಾಜಿಕ ಸಾಮರಸ್ಯ, ಅಧಿಕಾರಕ್ಕೆ ಗೌರವ ಹಾಗೂ ಕುಟುಂಬದಲ್ಲಿನ ನಂಬಿಕೆಯು ಇದಕ್ಕೆ ಉದಾಹರಣೆಗಳಾಗಿವೆ.

---

**ದ್ವೈತವಾದ (Dualism)**: ವಾಸ್ತವಿಕತೆಯು ಮನಸ್ಸು ಮತ್ತು ವಸ್ತು ಎಂಬ ಎರಡು ಮೂಲಭೂತ ತತ್ವಗಳನ್ನು ಒಳಗೊಂಡಿದೆಯೆಂಬ ನಂಬಿಕೆ. ಅದರೆ ಇದನ್ನು ಇತರೆ ದ್ವಂದ್ವಗಳಿಗೂ ವಿಸ್ತರಿಸಬಹುದು.

---

**ಸಾರಾಂಶ :**

- ಸಿದ್ಧಾಂತವು ವಿವಾದಾಸ್ಪದವಾದ ರಾಜಕೀಯ ಶಬ್ದವಾಗಿದ್ದು, ಅನೇಕ ಸಲ ನಿಕೃಷ್ಟವಾದ ಪರಿಣಾಮಗಳನ್ನುಂಟುಮಾಡಿದೆ. ಸಾಮಾಜಿಕ–ವೈಜ್ಞಾನಿಕ ಅರ್ಥದಲ್ಲಿ ರಾಜಕೀಯ ಸಿದ್ಧಾಂತವು ಹೆಚ್ಚೂ–ಕಡಿಮೆ ಒಂದು ಸುಸಂಬದ್ಧ ಕಲ್ಪನೆಗಳ ಗುಂಪಾಗಿದ್ದು, ಸಂಘಟನಾತ್ಮಕ ರಾಜಕೀಯ ಕ್ರಮಕ್ಕೆ ಆಧಾರವನ್ನು ಒದಗಿಸುತ್ತದೆ. ಅಸ್ತಿತ್ವದಲ್ಲಿರುವ ಅಧಿಕಾರ ಸಂಬಂಧಗಳ

ಒಂದು ವಿವರ, ಅಪೇಕ್ಷಿತ ಭವಿಷ್ಯದ ಒಂದು ಮಾದರಿ ಹಾಗೂ ರಾಜಕೀಯ ಬದಲಾವಣೆಯನ್ನು ಹೇಗೆ ತರಬಹುದು ಹಾಗೂ ತರತಕ್ಕದ್ದು ಎಂಬುದನ್ನು ಕುರಿತ ರೂಪರೇಖೆ ಇವುಗಳು ಸಿದ್ಧಾಂತದ ಕೇಂದ್ರೀಯ ಲಕ್ಷಣಗಳಾಗಿವೆ.

- ಸಿದ್ಧಾಂತಗಳು ರಾಜಕೀಯ ಅಭ್ಯಾಸ ಹಾಗೂ ರಾಜಕೀಯ ಸಿದ್ಧಾಂತದ ನಡುವೆ ಸಂಬಂಧವನ್ನು ಕಲ್ಪಿಸುತ್ತವೆ. ಒಂದು ಮಟ್ಟದಲ್ಲಿ ಸಿದ್ಧಾಂತಗಳು ರಾಜಕೀಯ ತತ್ವಗಳನ್ನು ಹೋಲುತ್ತವೆ. ಇವುಗಳು ಮೌಲ್ಯಗಳು, ಸಿದ್ಧಾಂತಗಳು ಹಾಗೂ ತತ್ವಗಳ ಸಂಗ್ರಹವಾಗಿದ್ದು; ಒಂದು ವಿಶಿಷ್ಟವಾದ ವಿಶ್ವದೃಷ್ಟಿಕೋನವನ್ನು ಹೊಂದಿರುತ್ತವೆ. ಇನ್ನೊಂದು ಮಟ್ಟದಲ್ಲಿ ಇವು ವಿಸ್ತೃತವಾದ ರಾಜಕೀಯ ಚಳವಳಿಗಳ ರೂಪವನ್ನು ಪಡೆದುಕೊಳ್ಳುತ್ತವೆ. ರಾಜಕೀಯ ನಾಯಕರು, ಪಕ್ಷಗಳು ಮತ್ತು ಗುಂಪುಗಳ ಚಟುವಟಿಕೆಗಳ ಮೂಲಕ ಇವುಗಳನ್ನು ವ್ಯಕ್ತಪಡಿಸಲಾಗುತ್ತದೆ.

- ಪ್ರತಿಯೊಂದು ಸಿದ್ಧಾಂತವೂ ವಿಶಿಷ್ಟವಾದ ತತ್ವಗಳು ಮತ್ತು ವಿಚಾರಗಳ ಗುಂಪಾಗಿರುತ್ತದೆ. ಈ ವಿಚಾರಗಳು ಒಟ್ಟಿಗೆ ಇರುತ್ತವೆ. ಅಂದರೆ ಅವು ವಿಭಿನ್ನ ರೀತಿಗಳಲ್ಲಿ ಪರಸ್ಪರ ಬಂಧಿಸಲ್ಪಟ್ಟಿವೆಯಾದರೂ ಸಾಪೇಕ್ಷ ಅರ್ಥದಲ್ಲಿ ಮಾತ್ರ ವ್ಯವಸ್ಥಿತ ಅಥವಾ ಸುಸಂಬದ್ಧವಾಗಿವೆ. ಹೀಗಾಗಿ, ಎಲ್ಲಾ ಸಿದ್ಧಾಂತಗಳು ಅನೇಕ ಪ್ರತಿಸ್ಪರ್ಧಿ ಸಂಪ್ರದಾಯಗಳು ಹಾಗೂ ಆಂತರಿಕ ಒತ್ತಡಗಳ ರೂಪವಾಗಿವೆ. ಆದ್ದರಿಂದ ಸಿದ್ಧಾಂತಗಳೊಳಗಿನ ಸಂಘರ್ಷವು ಸಿದ್ಧಾಂತಗಳ ನಡುವಿನ ಸಂಘರ್ಷಗಳಿಗಿಂತ ಹೆಚ್ಚು ಭಾವೋದ್ರಿಕ್ತವಾಗಿರುತ್ತವೆ.

- ಸಿದ್ಧಾಂತಗಳು ಭದ್ರವಾಗಿ ಮುಚ್ಚಿದ ಹಾಗೂ ಬದಲಾಗದ ಆಲೋಚನೆಯ ವ್ಯವಸ್ಥೆಗಳಲ್ಲ. ಅನೇಕ ಬಿಂದುಗಳಲ್ಲಿ ಇವು ಒಂದನ್ನೊಂದು ಆವರಿಸುತ್ತವೆ ಹಾಗೂ ಕೆಲವೊಮ್ಮೆ ಇವು ಒಂದೇ ರೀತಿಯ ಕಾಳಜಿಗಳು ಮತ್ತು ಪದಕೋಶವನ್ನು ಹೊಂದಿರುತ್ತವೆ. ಇವುಗಳು ಸದಾ ರಾಜಕೀಯ ಹಾಗೂ ಬೌದ್ಧಿಕ ನವೀಕರಣಗಳಿಗೆ ಒಳಗಾಗುತ್ತವೆ. ಏಕೆಂದರೆ, ಇವು ಇತರೆ ಸಿದ್ಧಾಂತಗಳೊಂದಿಗೆ ಪರಸ್ಪರ ಕಾರ್ಯನಿರ್ವಹಿಸುತ್ತವೆ ಹಾಗೂ ಅವುಗಳ ಅಭಿವೃದ್ಧಿಯನ್ನು ಪ್ರಭಾವಿಸುತ್ತವೆ. ಅಲ್ಲದೆ, ಇವುಗಳನ್ನು ಬದಲಾಗುತ್ತಿರುವ ಐತಿಹಾಸಿಕ ಸನ್ನಿವೇಶಗಳಿಗೆ ಅನ್ವಯಿಸಿದಾಗ ಕಾಲಕ್ರಮದಲ್ಲಿ ಇವೂ ಬದಲಾಗುತ್ತವೆ.

- ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಸನ್ನಿವೇಶಗಳಿಗೆ ಸಿದ್ಧಾಂತವೊಂದರ ಪ್ರಸ್ತುತತೆ ಹಾಗೂ ಸೈದ್ಧಾಂತಿಕ ಆವಿಷ್ಕಾರವನ್ನು ಕುರಿತ ಅದರ ಸಾಮರ್ಥ್ಯಕ್ಕನುಗುಣವಾಗಿ ನಿರ್ದಿಷ್ಟ ಸಿದ್ಧಾಂತಗಳ ಮಹತ್ವದಲ್ಲಿ ಏರಿಕೆ ಅಥವಾ ಇಳಿಕೆಯನ್ನು ಕಾಣಬಹುದಾಗಿದೆ. ಇಪ್ಪತ್ತನೆ ಶತಮಾನ ಹಾಗೂ ಅದರಾಚೆಗಿನ ಬೆಳವಣಿಗೆಯು; ಉದಾರವಾದ, ಸಂಪ್ರದಾಯವಾದ ಹಾಗೂ ಸಮಾಜವಾದದಂತಹ ಪ್ರಧಾನ ಸಿದ್ಧಾಂತಗಳು, ತಮ್ಮ ಸಾಂಪ್ರದಾಯಿಕ ತತ್ವಗಳನ್ನು ಮರುಪರಿಶೀಲಿಸುವಂತೆ ಮಾಡಿದೆ. 1960ರ ದಶಕದ ಸುಮಾರಿಗೆ ಸೈದ್ಧಾಂತಿಕ ಭೂದೃಶ್ಯವು

ಪರಿವರ್ತನೆಯಾಗಿದೆ. ಸ್ತ್ರೀವಾದ, ಹಸಿರು ರಾಜಕೀಯ, ವಿಶ್ವಬಂಧುತ್ವವಾದ ಮುಂತಾದ 'ನೂತನ' ಸಿದ್ಧಾಂತಗಳ ಉದಯ ಹಾಗೂ ಪಾಶ್ಚಿಮಾತ್ಯವಲ್ಲದ ವಿಚಾರಗಳು ಮತ್ತು ಸಿದ್ಧಾಂತಗಳ ಸೈದ್ಧಾಂತಿಕ ಪ್ರಾಮುಖ್ಯತೆಯ ಪರಿಗಣನೆಯಲ್ಲಿನ ಹೆಚ್ಚಳವನ್ನು ಈ ಪರಿವರ್ತನೆಯು ಒಳಗೊಂಡಿದೆ.

**ಚರ್ಚೆಗಾಗಿ ಪ್ರಶ್ನೆಗಳು :**

- ಸಿದ್ಧಾಂತದ ಪರಿಕಲ್ಪನೆಯನ್ನು ಆಗಿಂದಾಗ್ಗೆ ಋಣಾತ್ಮಕ ಸಂಬಂಧಗಳೊಡನೆ ಏಕೆ ಜೋಡಿಸಲಾಗುತ್ತದೆ?
- ಇನ್ನು ಮುಂದೆ ಉದಾರವಾದ ಹಾಗೂ ಸಮಾಜವಾದದ ನಡುವೆ ವ್ಯತ್ಯಾಸವನ್ನು ಗುರುತಿಸಲು ಸಾಧ್ಯವಿದೆಯೇ?
- ಹಕ್ಕನ್ನು ಕುರಿತ 'ಹೊಸ' ವಿಚಾರಗಳು (New Right ideas), ಸಾಂಪ್ರದಾಯಿಕ ಸಂಪ್ರದಾಯವಾದದ ವಿಚಾರಗಳೊಡನೆ ಎಷ್ಟರಮಟ್ಟಿಗೆ ಸಂಘರ್ಷಕ್ಕೊಳಗಾಗಿವೆ?
- 'ಹೊಸ' ಸಾಮಾಜಿಕ ಪ್ರಜಾಪ್ರಭುತ್ವವು ಅರ್ಥಪೂರ್ಣ ಹಾಗೂ ಸುಸಂಬದ್ಧ ಸೈದ್ಧಾಂತಿಕ ನಿಲುವಾಗಿದೆಯೆ?
- ಮಾರ್ಕ್ಸ್‌ವಾದಕ್ಕೆ ಭವಿಷ್ಯವಿದೆಯೇ?
- ಫ್ಯಾಸಿಸಮ್‌ನ ಉಗಮಕ್ಕೆ ಅತ್ಯಂತ ಅನುಕೂಲಕರವಾದ ಸನ್ನಿವೇಶಗಳು ಯಾವುವು?
- ಅರಾಜಕತಾವಾದಿಗಳು ಅಸಾಧ್ಯವಾದುದನ್ನು ಕೋಡುತ್ತಾರೆಯೇ?
- ಸ್ತ್ರೀವಾದ, ಹಸಿರು ರಾಜಕೀಯ ಹಾಗೂ ವಿಶ್ವಬಂಧುತ್ವವಾದಗಳ ಮಹತ್ವವು ಹೆಚ್ಚಾಗಲು ಕಾರಣವೇನು?
- ಪಾಶ್ವಿಮಾತ್ಯವಲ್ಲದ ಸೈದ್ಧಾಂತಿಕ ಪ್ರವೃತ್ತಿಗಳು ಎಷ್ಟರ ಮಟ್ಟಿಗೆ ಪಾಶ್ಚಿಮಾತ್ಯ ಸಿದ್ಧಾಂತಗಳಿಗೆ ಸವಾಲಾಗಿವೆ?

**ಮುಂದಿನ ಓದಿಗೆ (Further reading):**

Freedman, M., *Ideology: A Very Short Introduction* (2003).
ಸಿದ್ಧಾಂತದ ಸ್ವರೂಪ ಮತ್ತು ಆಧುನಿಕ ಪ್ರಪಂಚದಲ್ಲಿ ಅದರ ಸ್ಥಾನವನ್ನು ಕುರಿತ ಸಂಕ್ಷಿಪ್ತ ಹಾಗೂ ಸಪ್ರಮಾಣಿತ (authoritative) ಮಾರ್ಗದರ್ಶಕ ಗ್ರಂಥ.

Heywood, A., *Political Ideologies: An Introduction* (5th edn) (2012). ಪ್ರಧಾನ ಸೈದ್ಧಾಂತಿಕ ಸಂಪ್ರದಾಯಗಳನ್ನು ಕುರಿತಂತೆ; ತಹಲ್‌ವರೆಗಿನ (up-to-date), ಸುಗಮ್ಯ (accessible), ಹಾಗೂ ಸಮಗ್ರ ಮಾರ್ಗದರ್ಶಕ ಗ್ರಂಥ.

**ನಿರ್ದಿಷ್ಟ ಸಿದ್ಧಾಂತಗಳನ್ನು ಕುರಿತ ಸೂಕ್ತ ಪರಿಚಯವನ್ನು ಒಳಗೊಂಡ ಪರಾಮರ್ಶನಗಳು:**

ಉದಾರವಾದ – Arblaster (1984)
ಸಂಪ್ರದಾಯವಾದ – O'Sullivan (1976)
ಸಮಾಜವಾದ – Wright (1987)
'ಮೂರನೆಯ ಮಾರ್ಗ' – Giddens (2001)
ಅರಾಜಕತಾವಾದ – Marshall (1991)
ನಿರಂಕುಶ ಪ್ರಭುತ್ವ (Fascism) – Laqueur (1979)
ಸ್ತ್ರೀವಾದ – Bryson (2003)
ಹಸಿರು ರಾಜಕಾರಣ – Dobson (1990)
ವಿಶ್ವಬಂಧುತ್ವವಾದ – Appiah (2007)
ಮತೀಯ ಮೂಲಭೂತವಾದ – Marty and Appleby (1993)